# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2012-13ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಯುವ ಸಂಸತ್ ಸ್ಪರ್ಧೆ ನಡೆಸುವ ಬಗ್ಗೆ.

**ಓದಲಾಗಿದೆ:** (1) ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 6 ಸಂವ್ಯವಿ 1997, ದಿನಾಂಕ: 9.10.2002

(2) ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 150 ಆಡಳಿತ 2002, ದಿನಾಂಕ: 11.11.2002

(3) ಸರ್ಕಾರದ ಆದೇಶ ಸಂಖ್ಯೆ ಸಂವ್ಯಶಾಇ 15 ಸಂವ್ಯವಿ 2009, ದಿನಾಂಕ: 14.07.2009

(4) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಟಿಪ್ಪಣಿ ಸಂಖ್ಯೆ: ಸಿಆಸುಇ/21/ಹೆಸಆ/2010, ದಿನಾಂಕ: 27.05.2010

**ಪ್ರಸ್ತಾವನೆ:**

**ಮೇಲೆ (1)ರಲ್ಲಿ ಓದಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 6 ಸಂವ್ಯವಿ 1997, ದಿನಾಂಕ: 09.10.2002 ಕರ್ನಾಟಕ ರಾಜ್ಯದಲ್ಲಿ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸುವುದಕ್ಕಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ಯೋಜನೆ 2010ನ್ನು ಜಾರಿಗೊಳಿಸಲಾಗಿದೆ.**

ಮೇಲೆ (2)ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆ (ತಿದ್ದುಪಡಿ) ನಿಯಮಗಳು, 2002ನ್ನು ಹೊರಡಿಸಲಾಗಿದೆ.

ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಭಾರತ ಸರ್ಕಾರವು ಪತ್ರ ಸಂಖ್ಯೆ ಈ 3(3) 2008 ವೈ.ಪಿ. ದಿನಾಂಕ: 12.05.2009 (ವಿವರಗಳು ಅಧಿಕೃತ ವೆಬ್‌ಸೈಟ್ ಎಂದರೆ www. mpa.nic.inನಲ್ಲಿ ಲಭ್ಯವಿದೆ)ಯಲ್ಲಿ ಹೊರಡಿಸಿರುವ "ಯುವ ಸಂಸತ್ ಸ್ಪರ್ಧೆಗಳನ್ನು ನಡೆಸುವುದಕ್ಕಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ"ಯನ್ನು ಯಥಾವತ್ತಾಗಿ ಜಾರಿಗೊಳಿಸಿದೆ.

ಮೇಲೆ (4)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯು ಆಡಳಿತ ಆದೇಶವನ್ನು ಹೊರಡಿಸಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬೆಂಗಳೂರು ಇವರಿಗೆ ಎ.ಸಿ. ಬಿಲ್ ಮೂಲಕ ರೂ. 5,00,000/- ಹಣದ ಮೊತ್ತವನ್ನು 2012-13ರಲ್ಲಿಯ ಯುವ ಸಂಸತ್ ಸ್ಪರ್ಧೆಯ ಖರ್ಚು ವೆಚ್ಚಕ್ಕಾಗಿ ಡ್ರಾ ಮಾಡಿಕೊಳ್ಳಲು ಮಂಜೂರಾತಿ ನೀಡಬೇಕೆಂದು ಸೂಚಿಸಿದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 16 ಸಂವ್ಯವಿ 2012, ಬೆಂಗಳೂರು,**
**ದಿನಾಂಕ: 0.00.2012 (Unique Serial No. DPAL 9 of 2012)**

ಕರ್ನಾಟಕ ರಾಜ್ಯದಲ್ಲಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2012-13ನೇ ಸಾಲಿನ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸಲು ರೂ. 5,00,000/- (ರೂಪಾಯಿ ಐದು ಲಕ್ಷ)ಗಳನ್ನು ಈ

ಮೂಲಕ ಮಂಜೂರು ಮಾಡಿ, ಪ್ರಸ್ತಾವಿತ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2052-00-090-0-01-051 ಸಾಮಾನ್ಯ ವೆಚ್ಚಗಳು (ಯೋಜನೇತರ)" ಅಡಿಯಿಂದ ಪ್ರಸಕ್ತ ಸಾಲಿಗೆ ಒದಗಿಸಿರುವ ಅನುದಾನದಲ್ಲಿ ಭರಿಸುವಂತೆ ಮತ್ತು ಮೊಬಲಗನ್ನು ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ನಂ. 4, 100 ಫೀಟ್ ರಿಂಗ್ ರೋಡ್, (ಕೆ.ಎಸ್. ಹಾಸ್ಪಿಟಲ್ ಪಕ್ಕದಲ್ಲಿ) ಹೊಸಕೆರೆಹಳ್ಳಿ, ಬೆಂಗಳೂರು – 560 085

ಇವರು ಎ.ಸಿ. ಬಿಲ್ ಮೂಲಕ ರೂ. 5,00,000/- (ರೂಪಾಯಿ ಐದು ಲಕ್ಷ) ಹಣವನ್ನು ಡ್ರಾ ಮಾಡಿ ಎನ್.ಡಿ.ಸಿ. ಬಿಲ್ ಮೂಲಕ ಸರಿದೂಗಿಸಲು, ಇವರ ಡ್ರಾಯಿಂಗ್ ಆಫೀಸರ್ ಕೋಡ್ DS 0001 ಇವರಿಗೆ ವರ್ಗಾಯಿಸಲು ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ.

(2) ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಟಿಪ್ಪಣಿ ಸಂಖ್ಯೆ: ಸಿಆಸುಇ/21/ಹೆಸಆ/2012 ದಿನಾಂಕ: 27.05.2010ರಲ್ಲಿ ನೀಡಿರುವ ಸೂಚನೆ ಹಾಗೂ ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10.07.96ರಲ್ಲಿ ನೀಡಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಬಿ.ಜಿ. ಶ್ಯಾಮಲ**
ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ
ಫೋನ್ ನಂ. 22205155

**ಗೆ,**

1. **ಮಹಾಲೇಖಪಾಲರು, ಎ ಅಂಡ್ ಇ, ಕರ್ನಾಟಕ, ಬೆಂಗಳೂರು.**
2. **ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.**
3. **ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 1.**
4. **ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.**
5. **ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ನಂ. 4, 100 ಫೀಟ್ ರಿಂಗ್ ರೋಡ್, (ಕೆ.ಎಸ್. ಹಾಸ್ಪಿಟಲ್ ಪಕ್ಕದಲ್ಲಿ), ಹೊಸಕೆರೆಹಳ್ಳಿ, ಬೆಂಗಳೂರು – 560085.**
6. **ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.**
7. **ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ.**
8. **ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ, (ಲೆಕ್ಕಪತ್ರ-1) ವಿಧಾನಸೌಧ, ಬೆಂಗಳೂರು.**
9. **ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ಲೆಕ್ಕಪತ್ರ-2), ಬಹುಮಹಡಿಗಳ ಕಟ್ಟಡ, ಬೆಂಗಳೂರು.**
10. **ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 10), ವಿಧಾನಸೌಧ, ಬೆಂಗಳೂರು**
11. ರಾಜ್ಯದ ಎಲ್ಲಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ.

12. ಶಾಖಾ ರಕ್ಷಕ ಕಡತ
13. ವಾರ್ಷಿಕ ಸಂಕಲನ
14. ಹೆಚ್ಚುವರಿ ಪ್ರತಿ.

**ಸಂಖ್ಯೆ: ಎಫ್ 3(3) 2008–ವೈಪಿ**
**ಭಾರತ ಸರ್ಕಾರ**
**ಸಂಸದೀಯ ವ್ಯವಹಾರಗಳ ಮಂತ್ರಾಲಯ**

92, ಸಂಸತ್ ಭವನ
ನವದೆಹಲಿ – 110001
ದಿನಾಂಕ: 12.05.2009

**ಇವರಿಗೆ,**

ಮಾನ್ಯ ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ
ಬೆಂಗಳೂರು

**ಮಾನ್ಯರೆ,**

ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ 'ಯುವ ಸಂಸತ್ ಸ್ಪರ್ಧೆಗಳನ್ನು' ನಡೆಸುವುದಕ್ಕಾಗಿ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಹಣಕಾಸು ನೆರವನ್ನು ಒದಗಿಸುತ್ತಾ ಇದೆ ಎಂಬ ಅಂಶವನ್ನು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ. 2008ರ ಫೆಬ್ರವರಿ 4–5ನೇ ದಿನಾಂಕಗಳಂದು ಮುಂಬೈನಲ್ಲಿ ನಡೆದ 14ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಇತರೆ ವಿಷಯಗಳ ಜೊತೆಯಲ್ಲಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಒದಗಿಸುತ್ತಿರುವ ಹಣಕಾಸು ನೆರವಿನ ಪ್ರಮಾಣವನ್ನು ಈ ಮುಂದಿನಂತೆ ಹೆಚ್ಚಿಸತಕ್ಕದ್ದೆಂದು ಶಿಫಾರಸ್ಸು ಮಾಡಿದೆ.

| | | |
|---|---|---|
| (ಎ) | 100ರವರೆಗೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳಿಗೆ | ವರ್ಷಕ್ಕೆ 3 ಲಕ್ಷ ರೂಪಾಯಿಗಳು |
| (ಬಿ) | 100ರಿಂದ 200ರ ನಡುವೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ವರ್ಷಕ್ಕೆ 4 ಲಕ್ಷ ರೂಪಾಯಿಗಳು |
| (ಸಿ) | 200ಕ್ಕೂ ಹೆಚ್ಚು ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ವರ್ಷಕ್ಕೆ 5 ಲಕ್ಷ ರೂಪಾಯಿಗಳು |

(ವಿಧಾನಮಂಡಲಗಳನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶಗಳ ಸಂಬಂಧದಲ್ಲಿ ಮಿತಿಯು ಈ ಹಿಂದೆ ಇದ್ದಂತೆಯೇ ಇರತಕ್ಕದ್ದು ಎಂದರೆ, ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶಕ್ಕೆ ಪ್ರತಿವರ್ಷಕ್ಕೆ 5,00,000/– ರೂಪಾಯಿಗಳು)

ಈ ವಿಷಯವನ್ನು ಭಾರತ ಸರ್ಕಾರವು ಹಣಕಾಸು ಮಂತ್ರಾಲಯದೊಡನೆ ಸಮಾಲೋಚಿಸಿದೆ ಮತ್ತು ಪ್ರಸಕ್ತ ವರ್ಷದಿಂದ ಎಂದರೆ, 2009–2010ರಿಂದ 14ನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ಶಿಫಾರಸ್ಸು ಮಾಡಿರುವಂತೆ ಹಣಕಾಸು ನೆರವನ್ನು ಹೆಚ್ಚಿಸಲು ತೀರ್ಮಾನಿಸಿದೆ.

2. ಹಣಕಾಸು ನೆರವಿನ ಯೋಜನೆಯ ಒಂದು ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸ್ಪರ್ಧೆಗಳನ್ನು ನಡೆಸುವಲ್ಲಿ ವಹಿಸಲಾದ ವೆಚ್ಚಗಳನ್ನು ಮರು ಸಂದಾಯಕ್ಕಾಗಿ ಪ್ರಸ್ತಾವಗಳನ್ನು ಈ ಮಂತ್ರಾಲಯವು ಕ್ಲೇಮುಗಳ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುವುದು ಸಾಧ್ಯವಾಗುವಂತೆ ಯೋಜನೆಯ ಅನುಬಂಧ–IIIರಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಮಾತ್ರವೇ ಈ ಮಂತ್ರಾಲಯಕ್ಕೆ ಕಳುಹಿಸಬೇಕೆಂದು ಕೋರಲಾಗಿದೆ.

ಮರುಸಂದಾಯದ ಕ್ಲೇಮನ್ನು ಮಾಡುವಾಗ ಮೂಲ ಓಚರುಗಳು/ಬಿಲ್ಲುಗಳನ್ನು ಈ ಮಂತ್ರಾಲಯಕ್ಕೆ ಒದಗಿಸುವ ಅವಶ್ಯಕತೆ ಇರುವುದಿಲ್ಲ.

3. ಪರಿಷ್ಕೃತ ಹಣಕಾಸು ನೆರವು ಯೋಜನೆಯ ವಿವರಗಳು ಅಧಿಕೃತ ವೆಬ್‌ಸೈಟ್ ಎಂದರೆ, www.mpa.nic.in ನಲ್ಲಿಯೂ ಲಭ್ಯವಿದೆ.

4. ಇದನ್ನು ಸಂಸದೀಯ ವ್ಯವಹಾರಗಳ ಮಂತ್ರಾಲಯದ ಕಾರ್ಯದರ್ಶಿಗಳ ಅನುಮೋದನೆಯೊಡನೆ ಹೊರಡಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/–

**ಆರ್.ಸಿ. ಮೊಹಂತಿ**

ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ

ದೂರವಾಣಿ: 011–23034761

ಫ್ಯಾಕ್ಸ್: 23018220

# ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ಏರ್ಪಡಿಸುವುದಕ್ಕಾಗಿ ರಾಜ್ಯ ಸರ್ಕಾರಗಳು / ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ಯೋಜನೆ

## ಪೀಠಿಕೆ

ಶೈಕ್ಷಣಿಕ ಸಂಸ್ಥೆಗಳಲ್ಲಿ ಯುವ ಸಂಸತ್ ಸ್ಪರ್ಧೆಗಳನ್ನು ಏರ್ಪಡಿಸಿ ನಡೆಸುವ ಪರಿಕಲ್ಪನೆ 1962ರಲ್ಲಿ ಮುಂಬಯಿಯಲ್ಲಿ ನಡೆದ ನಾಲ್ಕನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ರೂಪ ತಳೆಯಿತು. ಸದರಿ ಸಮ್ಮೇಳನದಲ್ಲಿ ಇತರೆ ವಿಷಯಗಳ ಜೊತೆಗೆ ಈ ಮುಂದಿನ ಶಿಫಾರಸ್ಸುಗಳನ್ನು ಮಾಡಲಾಯಿತು:-

> "ಈ ಸಮಿತಿಯು, ಅಣಕು ಸಂಸತ್ ಕಾರ್ಯಕ್ರಮಗಳನ್ನು ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಪಂಚಾಯತಿಗಳ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ನಡೆಸಲು ಸರ್ಕಾರವು ಪ್ರೋತ್ಸಾಹಿಸತಕ್ಕದ್ದೆಂದು ಶಿಫಾರಸ್ಸು ಮಾಡುತ್ತದೆ".

ಮೇಲ್ಕಂಡ ಶಿಫಾರಸ್ಸುಗಳನ್ನು 1966ರಲ್ಲಿ ಬೆಂಗಳೂರಿನಲ್ಲಿ ನಡೆದ ಐದನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಈ ಮುಂದೆ ಹೇಳಿರುವಂತೆ ಪುನರುಚ್ಚರಿಸಿತು:-

> "ಮುಂಬಯಿಯಲ್ಲಿ ನಡೆದ ನಾಲ್ಕನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಜನಪ್ರತಿನಿಧಿ ಸಂಸ್ಥೆಗಳ ಪಾತ್ರದ ಬಗ್ಗೆ ಅರಿವು ಮೂಡಿಸಲು ಗ್ರಾಮ ಪಂಚಾಯತಿಗಳಲ್ಲಿ ಅಣಕು ಸಂಸತ್ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಶಿಫಾರಸ್ಸು ಮಾಡಿತ್ತು. ಈ ಶಿಫಾರಸ್ಸುಗಳನ್ನು ಕೆಲವು ರಾಜ್ಯಗಳಲ್ಲಿ ಜಾರಿಗೆ ತಂದಿರುವುದಿಲ್ಲ ಎಂಬುದನ್ನು ಈ ಸಮ್ಮೇಳನವು ಗಮನಿಸಿದೆ. ಸಮ್ಮೇಳನವು, ಸಂಬಂಧಪಟ್ಟ ರಾಜ್ಯ ಸರ್ಕಾರಗಳು ತಮ್ಮ ತೀರ್ಮಾನಗಳನ್ನು ಮರುಪರಿಶೀಲಿಸುವಂತೆ ಅವುಗಳ ಮನವೊಲಿಸಬೇಕೆಂದು ಪುನರುಚ್ಚರಿಸುತ್ತದೆ."

ಮೇಲ್ಕಂಡ ಶಿಫಾರಸ್ಸುಗಳಿಗನುಸಾರ, ಸಂಸದೀಯ ವ್ಯವಹಾರಗಳ ಮಂತ್ರಾಲಯವು ಅಣಕು ಸಂಸತ್ (ಈಗ "ಯುವ ಸಂಸತ್") ಸ್ಪರ್ಧೆಯ ಯೋಜನೆಯ ವಿವರಗಳನ್ನು ತಯಾರಿಸಿತು ಮತ್ತು ಅದನ್ನು ಪ್ರಾಯೋಗಿಕ ರೂಪದಲ್ಲಿ ನಡೆಸುವ ಉದ್ದೇಶದಿಂದ ದೆಹಲಿಯ ಪ್ರೌಢ ಶಾಲೆಗಳಲ್ಲಿ ಸ್ಪರ್ಧೆಗಳನ್ನು ಪ್ರಾರಂಭಿಸಲು ತೀರ್ಮಾನಿಸಿತು. 1967ರಲ್ಲಿ ಸಿಮ್ಲಾದಲ್ಲಿ ಮತ್ತು 1969ರಲ್ಲಿ ಮದ್ರಾಸಿನಲ್ಲಿ ಅನುಕ್ರಮವಾಗಿ ನಡೆದ ಆರು ಮತ್ತು ಏಳನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ಈ ಮುಂದಿನ ಶಿಫಾರಸ್ಸುಗಳನ್ನು ಮಾಡಲಾಯಿತು:-

"ದೆಹಲಿಯ ಶಾಲೆಗಳಲ್ಲಿ "ಯುವ ಸಂಸತ್" ಕಾರ್ಯಕ್ರಮವನ್ನು ಉತ್ತೇಜಿಸುವುದಕ್ಕಾಗಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಮಾಡಿರುವ ಉತ್ತಮ ಕಾರ್ಯವನ್ನು ಪ್ರಶಂಸಿಸುತ್ತಾ, ಉಳಿದ ರಾಜ್ಯಗಳು ಸಹ ತಮ್ಮ ತಮ್ಮ ರಾಜ್ಯಗಳಲ್ಲಿ ಈ ಯೋಜನೆಯನ್ನು ಅಳವಡಿಸಲು ವ್ಯವಸ್ಥೆಯನ್ನು ಮಾಡತಕ್ಕದ್ದೆಂದು ಸಮ್ಮೇಳನವು ಆಗ್ರಹಪೂರ್ವಕವಾಗಿ ಶಿಫಾರಸ್ಸು ಮಾಡುತ್ತದೆ. [6ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]"

"ದೆಹಲಿಯ ಶಾಲೆಗಳಲ್ಲಿ 'ಅಣಕು ಸಂಸತ್' ಯೋಜನೆಯ ಯಶಸ್ವಿ ಅನುಷ್ಠಾನವನ್ನು ಹಾಗೂ ಪ್ರಮುಖ ಸಂಸದರು, ಪತ್ರಿಕಾ ಮಾಧ್ಯಮಗಳು ಮತ್ತು ಶಿಕ್ಷಣ ತಜ್ಞರಿಂದ ಆ ಬಗ್ಗೆ ಬಂದ ವ್ಯಾಪಕ ಮೆಚ್ಚುಗೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಷ್ಟ್ರದಲ್ಲಿ ಸುಭದ್ರ ಸಂಸದೀಯ ಪದ್ಧತಿಯನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ಸಮ್ಮೇಳನವು ಈ ಮುಂದಿನ ಶಿಫಾರಸ್ಸುಗಳನ್ನು ಮಾಡುತ್ತದೆ.-

(ಎ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು ಅನುಸರಿಸಿದ ಮಾದರಿಯನ್ನೇ ಅನುಸರಿಸಿ ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ತಮ್ಮ ತಮ್ಮ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು;

(ಬಿ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು, ಅಗತ್ಯವಿದ್ದಲ್ಲಿ ಹಣಕಾಸು ನೆರವನ್ನು ನೀಡುವ ಮೂಲಕ ಯೋಜನೆಯನ್ನು ಜಾರಿಗೆ ತರಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಎಲ್ಲಾ ಬಗೆಯ ಪ್ರೋತ್ಸಾಹಗಳನ್ನು ನೀಡತಕ್ಕದ್ದು; ಮತ್ತು

(ಸಿ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು, ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿರುವ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ನಡುವೆ ಅಂತರ ರಾಜ್ಯ ಸ್ಪರ್ಧೆಗಳನ್ನು ಸಹ ವ್ಯವಸ್ಥೆಗೊಳಿಸತಕ್ಕದ್ದು. [7ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]"

7ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಮಾಡಿದ ಮೇಲ್ಕಂಡ ಶಿಫಾರಸ್ಸುಗಳ (ಬಿ) ಭಾಗದ ಪಾಲನೆಯಲ್ಲಿ, ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ – ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ನೀಡುವುದಕ್ಕಾಗಿ ಈ ಯೋಜನೆಯನ್ನು ರೂಪಿಸಿದೆ.

1. **ಯೋಜನೆಯ ಉದ್ದೇಶ:–** ಪ್ರಜಾಪ್ರಭುತ್ವದ ಬುನಾದಿಯನ್ನು ಭದ್ರಪಡಿಸುವ, ಶಿಸ್ತು, ಇತರರ ಅಭಿಪ್ರಾಯಗಳ ಬಗ್ಗೆ ತಾಳ್ಮೆ ಮುಂತಾದ ಆರೋಗ್ಯಕರ ಗುಣ ವಿಶೇಷಗಳನ್ನು ಮೈಗೂಡಿಸುವ ಮತ್ತು ವಿದ್ಯಾರ್ಥಿ ಸಮುದಾಯದಲ್ಲಿ ಸಂಸತ್ ಕಾರ್ಯ ಕಲಾಪದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ, ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು, ದೆಹಲಿಯಲ್ಲಿರುವ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ – "ಯುವ ಸಂಸತ್" ನ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವಂಥ ಮತ್ತು ದೆಹಲಿಯ ಎನ್‌ಸಿಟಿ ಸರ್ಕಾರದ ಶಿಕ್ಷಣ ನಿರ್ದೇಶನಾಲಯವು ಪ್ರಾಯೋಜಿಸಿದಂಥ ಶಾಲೆಗಳ ನಡುವೆ ಪ್ರತಿವರ್ಷ "ಯುವ ಸಂಸತ್ ಸ್ಪರ್ಧೆ" ನಡೆಸುತ್ತಾ ಬಂದಿದೆ. ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು, ಇಂಥವೇ ಸ್ಪರ್ಧೆಗಳನ್ನು ತಮ್ಮ ಮಾನ್ಯತೆ ಪಡೆದ ಶಾಲೆಗಳಲ್ಲಿ ನಡೆಸಲು ಹಣಕಾಸು ನೆರವನ್ನು ನೀಡುವುದೇ ಈ ಯೋಜನೆಯ ಉದ್ದೇಶ.

2. **ಯೋಜನೆಯ ಕಾರ್ಯಾಚರಣೆ:–** ಈ ಯೋಜನೆಯನ್ನು ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಸಾರ್ವಜನಿಕ ಶಿಕ್ಷಣ ನಿರ್ದೇಶಕರ ಸಹಯೋಗದೊಂದಿಗೆ ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆಯ ಮೂಲಕ ನಿರ್ವಹಿಸಲಾಗುವುದು. ಸಂಸದೀಯ ವ್ಯವಹಾರಗಳ ಇಲಾಖೆಯು ಇಲ್ಲದಿರುವ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ, ಯೋಜನೆಯನ್ನು ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನೇರವಾಗಿ ಕಾರ್ಯಗತಗೊಳಿಸುತ್ತದೆ.

3. **ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಅರ್ಹತೆ:–** ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಮಾನ್ಯತೆ ಪಡೆದ ಎಲ್ಲಾ ಹೈಯರ್ ಸೆಕೆಂಡರಿ ಸಂಸ್ಥೆಗಳು/ಪ್ರೌಢ ಶಾಲೆಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಹೊಂದಿವೆಯೆಂದು ಪರಿಗಣಿಸಬಹುದು. ಭಾಗವಹಿಸುವ ಶಾಲೆಗಳ ಪಟ್ಟಿಯನ್ನು, ಪ್ರತಿವರ್ಷದ ಮಾರ್ಚ್ 31ರೊಳಗೆ ಸಂದರ್ಭಾನುಸಾರ, ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ ಅಥವಾ ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಅಂತಿಮಗೊಳಿಸುತ್ತವೆ.

4. **ಯುವ ಸಂಸತ್ ಸ್ಪರ್ಧೆಯನ್ನು ನಡೆಸುವ ಅವಧಿ:–** "ಯುವ ಸಂಸತ್ ಸ್ಪರ್ಧೆ" ಯನ್ನು, ಪ್ರತಿವರ್ಷವು ನಡೆಸಲಾಗುವುದು. ಈ ಬಗ್ಗೆ ಸವಿವರ ಕಾರ್ಯಕ್ರಮವನ್ನು ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ರೂಪಿಸತಕ್ಕದ್ದು ಮತ್ತು ವಾರ್ಷಿಕ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಸಂಸ್ಥೆಗಳಿಗೆ ಸುತ್ತೋಲೆ ಮೂಲಕ ತಿಳಿಸತಕ್ಕದ್ದು. ಸದರಿ ವಿಷಯವನ್ನು ನವದೆಹಲಿಯ ಭಾರತ ಸರ್ಕಾರದ ಸಂಸದೀಯ ವ್ಯವಹಾರ ಮಂತ್ರಾಲಯಕ್ಕೂ ತಿಳಿಸತಕ್ಕದ್ದು.

5. **ಯುವ ಸಂಸತ್ತಿನಲ್ಲಿ ಭಾಗವಹಿಸುವವರ ಸಂಖ್ಯೆ:–** ಪ್ರತಿಯೊಂದು ಶಾಲೆಯಲ್ಲಿ "ಯುವ ಸಂಸತ್ ಸ್ಪರ್ಧೆಯನ್ನು" ನಡೆಸುವುದಕ್ಕಾಗಿ ಬೇಕಾಗುವ ವಿದ್ಯಾರ್ಥಿಗಳ ಸಂಖ್ಯೆಗೆ ಯಾವುದೇ ಮಿತಿ ಇಲ್ಲ. ಆದಾಗ್ಯೂ, ಅಧಿವೇಶನದ ಅವಧಿಯನ್ನು ಸೀಮಿತಗೊಳಿಸುವುದು ಅಪೇಕ್ಷಣೀಯವಾಗಿರುವ ಕಾರಣ, ಭಾಗವಹಿಸಿರುವ ವಿದ್ಯಾರ್ಥಿಗಳಲ್ಲಿ ಹಲವರು ಸಂಸತ್ತಿನ ಅಧಿವೇಶನದ ಒಂದು ಚಿತ್ರಣವನ್ನು ಮೂಡಿಸುವುದಕ್ಕೆ ಮಾತ್ರವೇ ಸುಮ್ಮನೆ ಕುಳಿತುಕೊಂಡಿರಬೇಕಾಗುತ್ತದೆ ಮಾತ್ರವಲ್ಲದೆ ಅವರಿಗೆ ಮಾತನಾಡುವ ಅಗತ್ಯವಿರುವುದಿಲ್ಲ.

6. **ಯುವ ಸಂಸತ್ತಿನ ಅಧಿವೇಶನದ ಅವಧಿ:–** ಯುವ ಸಂಸತ್ತಿನ ಅಧಿವೇಶನದ ಅವಧಿಯು ಒಂದು ಗಂಟೆ ಅವಧಿಯನ್ನು ಮೀರತಕ್ಕದಲ್ಲ ಮತ್ತು ಇದರಲ್ಲಿ ಸುಮಾರು 20 ನಿಮಿಷಗಳ ಅವಧಿಯನ್ನು ಪ್ರಶ್ನೆಗಳಿಗೆ ಕಾಯ್ದಿರಿಸತಕ್ಕದ್ದು.

7. **ಯುವ ಸಂಸತ್ತಿನ ಅಧಿವೇಶನದಲ್ಲಿಯ ಚರ್ಚೆಯ ವಿಷಯ:–** ಪ್ರಶ್ನೋತ್ತರಗಳಿಗೆ ಅಥವಾ ಇತರ ಚರ್ಚೆಗೆ ಯಾವುದೇ ನಿರ್ದಿಷ್ಟ ವಿಷಯಗಳನ್ನು ಗೊತ್ತುಪಡಿಸಿರುವುದಿಲ್ಲ. ಆದಾಗ್ಯೂ, ಯುವ ಸಂಸತ್ತಿನಲ್ಲಿ ಕೇಳಲಾಗುವ ಪ್ರಶ್ನೆಗಳು, ಕ್ಷೇಮಾಭ್ಯುದಯ ಕಾರ್ಯ ಚಟುವಟಿಕೆಗಳು, ರಾಷ್ಟ್ರದ ರಕ್ಷಣೆ, ಸಾಮಾಜಿಕ ನ್ಯಾಯ, ಸಮಾಜ ಸುಧಾರಣೆಗಳು, ಆರ್ಥಿಕ ಅಭಿವೃದ್ಧಿ, ಮತೀಯ ಸಾಮರಸ್ಯ, ಆರೋಗ್ಯ, ವಿದ್ಯಾರ್ಥಿಗಳಲ್ಲಿ ಶಿಸ್ತು ಮುಂತಾದವುಗಳಿಗೆ ಸಂಬಂಧಿಸಿದ ವಿಷಯಗಳಾಗಿರುವುದು ಅಪೇಕ್ಷಣೀಯ.

8. **ಭಾಷೆ:–** ಭಾಗವಹಿಸುವವರು, ಕನ್ನಡ, ಹಿಂದಿ ಅಥವಾ ಇಂಗ್ಲಿಷ್ ಅಥವಾ ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನಿರ್ದಿಷ್ಟಪಡಿಸಬಹುದಾದಂಥ ಪ್ರಾದೇಶಿಕ ಭಾಷೆಯಲ್ಲಿ ಮಾತನಾಡಬಹುದು.

9. **ಯುವ ಸಂಸತ್ ನಡೆಯುವ ಸ್ಥಳ:–** ಪ್ರತಿಯೊಂದು ಸಂಸ್ಥೆಯು, ಯುವ ಸಂಸತ್ ಸ್ಪರ್ಧೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ತನ್ನದೇ ಆದ ಕಟ್ಟಡದಲ್ಲಿ ಅಥವಾ ತಾನು ಇಚ್ಛಿಸುವಂಥ ಯಾವುದೇ ಇತರ ಸ್ಥಳದಲ್ಲಿ ನಡೆಸತಕ್ಕದ್ದು. ಸ್ಪರ್ಧೆಯಲ್ಲಿ ಭಾಗವಹಿಸುವ ಸಂಸ್ಥೆಗಳು, ಸಂಬಂಧಪಟ್ಟ ರಾಜ್ಯದ ಸಂಸದೀಯ ವ್ಯವಹಾರಗಳ ಇಲಾಖೆಗೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಚರ್ಚೆಯ ವಿಷಯಗಳ ಮಾಹಿತಿಯೊಂದಿಗೆ ಸ್ಪರ್ಧೆ ನಡೆಸುವ ಸ್ಥಳದ ವಿವರಗಳನ್ನು ಸ್ಪರ್ಧೆಯ ದಿನಾಂಕಕ್ಕಿಂತ ಹತ್ತು ದಿನಗಳ ಮೊದಲೇ ತಿಳಿಸತಕ್ಕದ್ದು.

10. **ಬಹುಮಾನಗಳು:–** ಈ ಮುಂದಿನ ಬಹುಮಾನಗಳನ್ನು ಇರಿಸಲಾಗಿದೆ:–

(i) ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಗೆ ಪಾರಿತೋಷಕ (ಸಂಸದೀಯ ಪಾರಿತೋಷಕ).

(ii) ಅರ್ಹತೆಯ ಆಧಾರದ ಮೇಲೆ ಸ್ಪರ್ಧೆಯಲ್ಲಿನ ಉತ್ತಮ ಗುಣಮಟ್ಟದ ಪ್ರದರ್ಶನಕ್ಕಾಗಿ ಮೊದಲ ಐದು ಸ್ಥಾನ ಪಡೆದ ಸಂಸ್ಥೆಗಳಿಗೆ ಟ್ರೋಫಿಗಳು.

(iii) ಪ್ರತಿಯೊಂದು ಸಂಸ್ಥೆಯಿಂದ ಭಾಗವಹಿಸಿರುವ ವಿದ್ಯಾರ್ಥಿಗಳಿಂದ ಆಯ್ಕೆ ಮಾಡಲಾದವರಿಗೆ ಪದಕಗಳು / ಕಪ್ಪುಗಳು/ಪುಸ್ತಕಗಳ ರೂಪದಲ್ಲಿ ವೈಯಕ್ತಿಕ ಬಹುಮಾನಗಳು. ಬಹುಮಾನಗಳ ಒಟ್ಟು ಸಂಖ್ಯೆಯು 80ನ್ನು ಮೀರತಕ್ಕದ್ದಲ್ಲ.

(iv) ಇತರೆ ವೆಚ್ಚಗಳು.

**ಸೂಚನೆ:–** ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಸ್ಥಳೀಯ ಪರಿಸ್ಥಿತಿಗಳಿಗೆ ಅನುಸಾರವಾಗಿ ಮೇಲಿನ ನಾಲ್ಕು ಬಾಬುಗಳಿಗೆ ಸಂಬಂಧಿಸಿದ ವೆಚ್ಚವನ್ನು ವ್ಯತ್ಯಾಸಗೊಳಿಸಬಹುದು. ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದಿಂದ ಮರುಸಂದಾಯವಾಗುವ ಗರಿಷ್ಠ ಮೊಬಲಗು ವಾರ್ಷಿಕವಾಗಿ, ಯೋಜನೆಯ 15ನೇ ಕಂಡಿಕೆಯಲ್ಲಿ ಹೇಳಿರುವುದನ್ನು ಮೀರತಕ್ಕದ್ದಲ್ಲ.

ಪಾರಿತೋಷಕವು ಪರ್ಯಾಯ ಪಾರಿತೋಷಕವಾಗಿದ್ದು ಅದನ್ನು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದ ಸಂಸ್ಥೆಯು ಒಂದು ವರ್ಷದವರೆಗೆ ಉಳಿಸಿಕೊಳ್ಳಬಹುದಾಗಿದೆ. ಆದಾಗ್ಯೂ, ಒಂದೇ ಸಂಸ್ಥೆಯು ಮೂರು ನಿರಂತರ ವರ್ಷಗಳು ಪಾರಿತೋಷಕವನ್ನು ಗೆದ್ದರೆ ಆ ಸಂಸ್ಥೆಯೇ ಅದನ್ನು ಖಾಯಂ ಆಗಿ ಇಟ್ಟುಕೊಳ್ಳುವುದು.

ಅನುಬಂಧ–Iರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಸಂಸ್ಥೆಗಳಿಗೆ ನೀಡತಕ್ಕದ್ದು.

ಅನುಬಂಧ–IIರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನವನ್ನು ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ನೀಡತಕ್ಕದ್ದು.

11. **ತೀರ್ಪುಗಾರರ ಸಮಿತಿ:–** ಪ್ರತಿಯೊಂದು ಸಂಸ್ಥೆಗಳ ಮೌಲ್ಯಮಾಪನಕ್ಕಾಗಿ ತೀರ್ಪುಗಾರರ ಸಮಿತಿಯನ್ನು ಸಂಬಂಧಿಸಿದ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ರಚಿಸತಕ್ಕದ್ದು ಹಾಗೂ ಅದರಲ್ಲಿ ಶಿಕ್ಷಣ ತಜ್ಞರು ವಿಧಾನಸಭೆ/ಪರಿಷತ್ತಿನ ಸದಸ್ಯರು ಮತ್ತು ಸಂಸದೀಯ ಸಂಸ್ಥೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ಇತರರನ್ನು ಒಳಗೊಂಡಿರಬಹುದು. ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯದ ಒಬ್ಬ ಅಧಿಕಾರಿಯು ಸಮಿತಿಯ ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

12. **ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಾಗ ಪರಿಗಣಿಸಬೇಕಾದ ಅಂಶಗಳು.–** ಸ್ಪರ್ಧೆಯಲ್ಲಿ ಸಾಧನೆಯನ್ನು ನಿರ್ಧರಿಸುವಾಗ ಸಮಿತಿಯು, ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟು ಕೊಂಡಿರತಕ್ಕದ್ದು.

13. **ಮರು ಪ್ರದರ್ಶನ:–** ಪ್ರತಿ ವರ್ಷದ ಸ್ಪರ್ಧೆಗಳ ಮುಕ್ತಾಯದ ಸಂದರ್ಭದಲ್ಲಿ ಸಂಬಂಧಿಸಿದ ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನಿರ್ಧರಿಸಬಹುದಾದ ಸ್ಥಳ ಮತ್ತು ದಿನಾಂಕದಂದು ಸ್ಪರ್ಧೆಯ ಬಹುಮಾನ ವಿತರಣೆಯ ಸಮಾರಂಭದಲ್ಲಿ, ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಯು ಮತ್ತೊಮ್ಮೆ ಪ್ರದರ್ಶನ ಮಾಡುವಂತೆ ಅಗತ್ಯಪಡಿಸಬಹುದು.

14. **ವರದಿ:–** ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಸ್ಪರ್ಧೆಯು ಮುಗಿದ ಮೇಲೆ ಅನುಬಂಧ–IIIರಲ್ಲಿ ನಿಯಮಿಸಲಾದ ನಮೂನೆಯಲ್ಲಿ, ಅದರಲ್ಲಿ ಮೆರಿಟ್ ಆಧಾರದ ಮೇಲೆ, ಮೊದಲನೇ ಐದು ಸ್ಥಾನ ಪಡೆದ ಶಾಲೆಗಳೂ ಸೇರಿದಂತೆ ಭಾಗವಹಿಸಿದ ಎಲ್ಲಾ ಶಾಲೆಗಳ ಸಂಖ್ಯೆಯನ್ನು ಸೂಚಿಸಿ ವೈಯಕ್ತಿಕ ಬಹುಮಾನಗಳ ಸಂಖ್ಯೆ ಮುಂತಾದವುಗಳನ್ನು

ಒಳಗೊಂಡ ಒಂದು ವರದಿಯನ್ನು ತಯಾರಿಸತಕ್ಕದ್ದು. ವರದಿಯಲ್ಲಿ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಕ್ಕೆ ಮರುಸಂದಾಯ ಮಾಡಬೇಕಾದ ಮೊಬಲಗನ್ನು ಸ್ಪಷ್ಟವಾಗಿ ಮತ್ತು ಪ್ರತ್ಯೇಕವಾಗಿ ಸೂಚಿಸತಕ್ಕದ್ದು. ವರದಿಯನ್ನು ಸಂಬಂಧಿಸಿದ ರಾಜ್ಯ/ ಕೇಂದ್ರಾಡಳಿತ ಪ್ರದೇಶದಲ್ಲಿ ಯೋಜನೆಯ ಪ್ರಭಾರವನ್ನು ಹೊಂದಿರುವ ಇಲಾಖೆಯ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ಪ್ರತಿನಿಧಿಯು ಸಹಿ ಮಾಡತಕ್ಕದ್ದು. ಚೆಕ್ಕನ್ನು ಯಾರಿಗೆ ಸಂದಾಯ ಮಾಡಲು ಬರೆಯಬೇಕು ಮತ್ತು ಲೆಕ್ಕ ಶೀರ್ಷಿಕೆ ಮುಂತಾದ ವಿವರಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ನಿಯಮಿಸಲಾದ ನಮೂನೆಯಲ್ಲಿನ ವರದಿಯನ್ನು ಯೋಜನೆಯ ಅಡಿಯಲ್ಲಿ ಹಣಕಾಸಿನ ನೆರವಿನ ಕೋರಿಕೆಯೊಂದಿಗೆ ಸಂಸದೀಯ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರಿಗೆ ಕಳುಹಿಸತಕ್ಕದ್ದು.

15. **ವೆಚ್ಚದ ಮರುಸಂದಾಯದ ಪರಿಮಿತಿ:–** ರಾಜ್ಯ/ಕೇಂದ್ರಾಡಳಿತ ಪ್ರದೇಶ ಸರ್ಕಾರಗಳು ಮಾಡಿದ ವಾಸ್ತವಿಕ ವೆಚ್ಚವನ್ನು, ವರದಿಯನ್ನು ಆಧರಿಸಿ ಈ ಮುಂದಿನ ಮಿತಿಗೊಳಪಟ್ಟು ಸಂಸದೀಯ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರದಿಂದ ಮರುಸಂದಾಯ ಮಾಡಲಾಗುವುದು:

| | |
|---|---|
| (ಎ) 100ರವರೆಗೆ ಸದಸ್ಯರುಗಳನ್ನು ಹೊಂದಿರುವ ವಿಧಾನ ಮಂಡಲಗಳು | ಪ್ರತಿವರ್ಷಕ್ಕೆ 3 ಲಕ್ಷ ರೂಪಾಯಿಗಳು |
| (ಬಿ) 100ರಿಂದ 200ರ ನಡುವೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ಪ್ರತಿವರ್ಷಕ್ಕೆ 4 ಲಕ್ಷ ರೂಪಾಯಿಗಳು |
| (ಸಿ) 200ಕ್ಕೂ ಹೆಚ್ಚಿನ ಸದಸ್ಯರುಗಳನ್ನು ಹೊಂದಿರುವ ವಿಧಾನ ಮಂಡಲಗಳು | ಪ್ರತಿ ವರ್ಷಕ್ಕೆ 5 ಲಕ್ಷ ರೂಪಾಯಿಗಳು |

(ವಿಧಾನಮಂಡಲಗಳನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶಗಳ ಸಂಬಂಧದಲ್ಲಿ ಮಿತಿಯು ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶಕ್ಕೆ ಪ್ರತಿವರ್ಷಕ್ಕೆ 2,00,000/– ರೂಪಾಯಿಗಳು ಆಗಿರುತ್ತದೆ)

* * *

*ಅನುಬಂಧ – I*

**ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ**

**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/ನಿರ್ದೇಶನಾಲಯ**

**"ಯುವ ಸಂಸತ್ ಸ್ಪರ್ಧೆ"**

------------------------------ ಶಾಲೆಯ -------------------- ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ ------------------------------ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರು -------ನೇ ವರ್ಷದಲ್ಲಿ ನಡೆಸಿದ "ಯುವ ಸಂಸತ್" ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆಂದು ಪ್ರಮಾಣೀಕರಿಸಲಾಗಿದೆ.

**ಸಕ್ಷಮ ಪ್ರಾಧಿಕಾರಿ**
ಸಂಸದೀಯ ವ್ಯವಹಾರಗಳ ಇಲಾಖೆ/
ನೋಡಲ್ ಕಚೇರಿ/ನಿರ್ದೇಶನಾಲಯ

**ಅನುಬಂಧ – II**

**ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ**

**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/ನಿರ್ದೇಶನಾಲಯ**

**"ಯುವ ಸಂಸತ್ ಸ್ಪರ್ಧೆ"**

-------------------------------- ಶಾಲೆಯ ------------------ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ -------------------------------- ಅವರಿಗೆ ------------- ವರ್ಷದಲ್ಲಿ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರ ನೇತೃತ್ವದಲ್ಲಿ ನಡೆಸಲಾದ "ಯುವ ಸಂಸತ್ ಸ್ಪರ್ಧೆ" ಯಲ್ಲಿನ ಅತ್ಯುತ್ತಮ ಸಾಧನೆಗೆ ------------------------- ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

**ಸಕ್ಷಮ ಪ್ರಾಧಿಕಾರಿ**
ಸಂಸದೀಯ ವ್ಯವಹಾರಗಳ ಇಲಾಖೆ/
ನೋಡಲ್ ಕಚೇರಿ/ನಿರ್ದೇಶನಾಲಯ

## ಅನುಬಂಧ – III

**ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ *ಸರ್ಕಾರವು --------ವರ್ಷದಲ್ಲಿ ನಡೆಸಿದ ಯುವ ಸಂಸತ್ ಸ್ಪರ್ಧೆಯ ವರದಿ–ಹಣಕಾಸು ನೆರವಿನ ಕೋರಿಕೆ.**

| | | | |
|---|---|---|---|
| 1. | ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಹೆಸರು: | | |
| 2. | ಯುವ ಸಂಸತ್ ಸ್ಪರ್ಧೆಯನ್ನು ನಡೆಸಿದ ಮತ್ತು ಮರು ಸಂದಾಯದ ಕ್ಲೇಮನ್ನು ಮಾಡಿದ ಹಣಕಾಸಿನ ವರ್ಷ: | | |
| 3. | ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗಳ ಸಂಖ್ಯೆ: | | |
| 4. | ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: | | |
| 5. | ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ: | | |
| 6. | ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನಗಳನ್ನು ಗಳಿಸಿದ ಶಾಲೆಗಳ, ಮೆರಿಟ್ ಆಧಾರದ ಮೇಲೆ, ಹೆಸರು ಮತ್ತು ವಿಳಾಸ: | | |
| 7. | ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರವು ಕ್ಲೇಮು ಮಾಡಿದ ಮೊಬಲಗು: | | |
| | **ವೆಚ್ಚಗಳ ಬಾಬು** | **ವೆಚ್ಚ ಮಾಡಿದ ಒಟ್ಟು ಮೊಬಲಗು** | **ಕ್ಲೇಮು ಮಾಡಿದ ಮೊಬಲಗು** |
| | **ವಿಷಯಾಭಿಮುಖ ಶಿಕ್ಷಣಕ್ಕಾಗಿ**<br>1.<br>2. | | |
| | **ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆಗಾಗಿ**<br>1.<br>2. | | |
| | **ಬಹುಮಾನ ವಿತರಣೆ ಸಮಾರಂಭಕ್ಕಾಗಿ**<br>1.<br>2. | | |
| 8. | ಚೆಕ್ಕನ್ನು ಯಾರ ಹೆಸರಿಗೆ ನೀಡಬೇಕೋ ಅವರ ಹೆಸರು/ವಿಳಾಸ/ದೂರವಾಣಿ ಸಂಖ್ಯೆ ಮತ್ತು ಲೆಕ್ಕಶೀರ್ಷಿಕೆಯ ವಿವರ. | | |

1. ಮೇಲೆ ಸೂಚಿಸಿದಂತೆ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ನಡೆಸಲಾಯಿತು.

2. ವೆಚ್ಚದ ಮರುಸಂದಾಯದ ಕ್ಲೇಮುಗಳನ್ನು ಮೂಲ ಓಚರುಗಳೊಂದಿಗೆ ತಾಳೆ ನೋಡಲಾಗಿದ್ದು ಅವುಗಳು ಸರಿಯಾಗಿದೆ ಎಂದು ಕಂಡುಬಂದಿದೆ– ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ:

(ಹೆಸರು)

ಪದನಾಮದ

(ಉಪಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳು ಸಹಿ ಮಾಡುವುದು)

ರಾಜ್ಯ/ಕೇಂದ್ರಾಡಳಿತ ಪ್ರದೇಶ ಸರ್ಕಾರದ ವಿಳಾಸ

ದೂರವಾಣಿ ಸಂಖ್ಯೆ/ ಇಮೇಲ್ ಐ.ಡಿ.

**ಸೂಚನೆ:–**

**ವಿಷಯಾಭಿಮುಖ ಶಿಕ್ಷಣ** ಎಂದರೆ ಯುವ ಸಂಸತ್ತನ್ನು ನಡೆಸುವುದರ ಪ್ರಭಾರದಲ್ಲಿರುವ ಶಿಕ್ಷಕರ/ಶಿಕ್ಷಣ ಅಧಿಕಾರಿಗಳ ಪ್ರಯೋಜನಕ್ಕಾಗಿ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ನೋಡಲ್ ಪ್ರಾಧಿಕಾರಿಗಳು ನಡೆಸುವ ಒಂದು ಕೋರ್ಸು. ಭಾಗವಹಿಸುವವರಿಗೆ ಹಂಚುವ ಸಾಹಿತ್ಯ/ಲೇಖನ ಸಾಮಗ್ರಿಗಳ ರೂಪದಲ್ಲಿ ವೆಚ್ಚಗಳುಂಟಾಗುತ್ತವೆ.

**ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ** ಎಂದರೆ, ಸ್ಪರ್ಧೆಯನ್ನು ನಡೆಸುವುದಕ್ಕೆ ವಹಿಸಿದ ವೆಚ್ಚ, ಇದು ಉಪಹಾರಕ್ಕೆ, ಭಾಗವಹಿಸುವ ವಿದ್ಯಾರ್ಥಿಗಳ ಸಾರಿಗೆ ವ್ಯವಸ್ಥೆಗೆ, ಬಹುಮಾನ/ಪಾರಿತೋಷಕ ಮುಂತಾದವುಗಳಿಗೆ ತಗಲಿದ ವೆಚ್ಚವನ್ನು ಒಳಗೊಳ್ಳುತ್ತದೆ.

**ಬಹುಮಾನ ವಿತರಣೆ ಸಮಾರಂಭ** ಎಂದರೆ, ರಾಜ್ಯ ಮಟ್ಟದ ಬಹುಮಾನ ವಿಜೇತರು ಮುಂತಾದವರಿಗೆ ಬಹುಮಾನಗಳು/ಷೀಲ್ಡ್‌ಗಳನ್ನು (ಪಾರಿತೋಷಕಗಳನ್ನು) ವಿತರಣೆ ಮಾಡುವುದಕ್ಕಾಗಿ ನಡೆಸಿದ ಸಮಾರಂಭ, ಇದು ಪ್ರತಿಭಾನ್ವಿತ ಶಾಲೆಗಳು ಮತ್ತು ವಿದ್ಯಾರ್ಥಿಗಳಿಗೆ ಪುಸ್ತಕಗಳು, ನೆನಪಿನ ಕಾಣಿಕೆಗಳು, ಪ್ರಮಾಣ ಪತ್ರಗಳು, ಷೀಲ್ಡ್‌ಗಳ (ಪಾರಿತೋಷಕಗಳು) ರೂಪದಲ್ಲಿ ಬಹುಮಾನ ಮುಂತಾದವುಗಳಿಗಾಗಿ ವಹಿಸಿದ ವೆಚ್ಚವನ್ನು ಒಳಗೊಳ್ಳುತ್ತದೆ.

(ಮರುಸಂದಾಯದ ಕ್ಲೇಮಿನಲ್ಲಿ, ಶಿಕ್ಷಕರಿಗೆ / ಅಧಿಕಾರಿಗಳಿಗೆ, ಪ್ರಯಾಣಭತ್ಯೆ / ದಿನಭತ್ಯೆಗಳ ವೆಚ್ಚಗಳನ್ನು ಸೇರಿಸತಕ್ಕದ್ದಲ್ಲ)

*ಸ್ಪರ್ಧೆಗಾಗಿ ವಹಿಸಿದ ವೆಚ್ಚಗಳ ಮರುಸಂದಾಯಕ್ಕಾಗಿ "ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ಯೋಜನೆ"ಯ 14ನೇ ಕಂಡಿಕೆಯಲ್ಲಿ ಹೇಳಿರುವಂತೆ, ಯುವ ಸಂಸತ್ ಸ್ಪರ್ಧೆಗಳು ಮುಕ್ತಾಯವಾದ ಮೇಲೆ, ರಾಜ್ಯ/ಕೇಂದ್ರಾಡಳಿತ ಸರ್ಕಾರಗಳು ಭರ್ತಿ ಮಾಡಿ ಕಳುಹಿಸಬೇಕು.

# ಜಿಲ್ಲಾಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು

**1. ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ:–** (ಎ) ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಮ್ಮ ಜಿಲ್ಲೆಯ ನೋಡಲ್ ಅಧಿಕಾರಿ ಹಾಗೂ ಇತರ ಸಿಬ್ಬಂದಿಯ ಸಮನ್ವಯದೊಂದಿಗೆ ಯುವ ಸಂಸತ್ ಸ್ಪರ್ಧೆಯನ್ನು ಸರ್ಕಾರ ನಿಗದಿಪಡಿಸಿದ ಕಾಲಮಿತಿಯೊಳಗೆ ವ್ಯವಸ್ಥಿತವಾಗಿ ನಡೆಸತಕ್ಕದ್ದು. ಸ್ಪರ್ಧೆಗಾಗಿ ಉತ್ತಮ ವೇದಿಕೆ, ಧ್ವನಿವರ್ಧಕ, ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಉಪಹಾರ, ಸ್ಪರ್ಧಾ ವಿಜೇತರಿಗೆ ಬಹುಮಾನ, ಮುಂತಾದವನ್ನು ಪ್ರತಿ ಜಿಲ್ಲೆಗೆ ನೀಡಲಾಗುವ ಅನುದಾನದಿಂದ ಏರ್ಪಾಡು ಮಾಡತಕ್ಕದ್ದು.

(ಬಿ) ಜಿಲ್ಲಾ ಮಟ್ಟದ ಸ್ಪರ್ಧೆಗೆ 2012–13ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರತಿಯೊಂದು ಜಿಲ್ಲೆಗೆ ರೂ. 6,000/– (ಆರು ಸಾವಿರ ರೂಪಾಯಿಗಳು ಮಾತ್ರ) ಅಥವಾ ಸ್ಪರ್ಧೆಯ ವಾಸ್ತವ ವೆಚ್ಚ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಮೂಲಕ ನೀಡಲಾಗುವುದು.

**2. ಯುವ ಸಂಸತ್ ಸ್ಪರ್ಧೆಗಳಿಗೆ ವಿಧ್ಯಾರ್ಥಿಗಳನ್ನು ಆಯ್ಕೆ ಮಾಡುವ ವಿಧಾನ.–** ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗಳಿಗೆ ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಎಲ್ಲಾ ಪ್ರೌಢ ಶಾಲೆಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿರುವುದರಿಂದ ಸುಮಾರು 60 ರಿಂದ 90 ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಅವಕಾಶ ನೀಡಬೇಕು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಈ ಮುಂದೆ ಹೇಳಿದ ಅರ್ಹತೆಗಳನ್ನು ಸಾಮಾನ್ಯವಾಗಿ ಪರಿಗಣಿಸಬೇಕು.

(1) ಚರ್ಚಿಸುವ ಸಾಮರ್ಥ್ಯವಿರುವ ವಿದ್ಯಾರ್ಥಿಗಳು.

(2) ನಮ್ಮ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ಸಾಕಷ್ಟು ಚೆನ್ನಾಗಿ ತಿಳಿದುಕೊಂಡ ವಿದ್ಯಾರ್ಥಿಗಳು.

(3) ತಮ್ಮ ತಮ್ಮ ತರಗತಿಗಳಲ್ಲಿ ಉತ್ತಮ ಮೆರಿಟ್ ಪಡೆದಿರುವ ವಿದ್ಯಾರ್ಥಿಗಳು.

(4) ಮುಖಂಡತ್ವದ ಗುಣಗಳಿರುವ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು.

(5) ಮಾಧ್ಯಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.

ಪ್ರತಿ ವರ್ಷವೂ ಹೊಸ ವಿದ್ಯಾರ್ಥಿಗಳ ಗುಂಪುಗಳಿಗೆ ಆದ್ಯತೆ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ನೋಡಿಕೊಳ್ಳಬೇಕೆಂದು ಮತ್ತು ಪ್ರಶ್ನೋತ್ತರ ಅವಧಿಯಲ್ಲಿ ಮತ್ತು ಇತರ ಶಾಸನ–ಕಲಾಪಗಳ ಅವಧಿಯಲ್ಲಿ ಆಯ್ಕೆ ಮಾಡಿದ ವಿಷಯಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸುವಂತೆ ಅವರಿಗೆ ಸೂಚಿಸಬೇಕು. ವಿದ್ಯಾರ್ಥಿನಿಯರಿಗೂ ಯುವ ಸಂಸತ್ತಿನಲ್ಲಿ ಭಾಗವಹಿಸಲು ಸಮಾನ ಅವಕಾಶ ನೀಡತಕ್ಕದ್ದು.

**3. ಯುವ ಸಂಸತ್ ರಚನೆ.–** (ಎ) ಪ್ರತಿ ಜಿಲ್ಲೆಯಲ್ಲಿ, ನಿಗದಿತ ದಿನಾಂಕ ಹಾಗೂ ಸ್ಥಳದಲ್ಲಿ ಅಧಿವೇಶನದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಹತ್ತು ಗಂಟೆಗೆ ತಮ್ಮ ಹೆಸರನ್ನು ನೋಂದಾಯಿಸುವರು.

(ಬಿ) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯಿಂದ ನಿಯೋಜಿತ ತೀರ್ಪುಗಾರರ ಸಮಿತಿಯ ಸದಸ್ಯರು ವಿದ್ಯಾರ್ಥಿಗಳನ್ನು,–

ಶೇಕಡ 60 – ಆಡಳಿತ ಪಕ್ಷದ ಸದಸ್ಯರು.

ಶೇಕಡ 40 – ವಿರೋಧ ಪಕ್ಷದ ಸದಸ್ಯರನ್ನಾಗಿ ವಿಂಗಡಿಸುವರು.

(ಸಿ) ಆಡಳಿತ ಪಕ್ಷದ ಸದಸ್ಯರು ತಮ್ಮೊಳಗೆ ಇಬ್ಬರನ್ನು ಆರಿಸುವರು. ಇವರಲ್ಲಿ ಒಬ್ಬರನ್ನು "ಮುಖ್ಯಮಂತ್ರಿ" ಎಂದು ಕರೆಯಲಾಗುವುದು. ಹಾಗೂ ಇನ್ನೊಬ್ಬರನ್ನು ಸಭಾಧ್ಯಕ್ಷರು (speaker) ಎಂದು ಕರೆಯಲಾಗುವುದು. ಮುಖ್ಯಮಂತ್ರಿಯವರು ಆಡಳಿತ ಪಕ್ಷದ 5 ಸದಸ್ಯರನ್ನು ಮಂತ್ರಿಗಳನ್ನಾಗಿ ಆರಿಸುವರು. ಇವರನ್ನು

(ಅ) ಶಿಕ್ಷಣ ಸಚಿವರು.

(ಆ) ಗೃಹ ಸಚಿವರು.

(ಇ) ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.

(ಈ) ಆರೋಗ್ಯ ಸಚಿವರು; ಹಾಗೂ

(ಉ) ಸಮಾಜ ಕಲ್ಯಾಣ ಸಚಿವರು.

ಎಂದು ನಾಮಕರಣ ಮಾಡಲಾಗುವುದು.

(ಡಿ) ವಿರೋಧ ಪಕ್ಷದ ಸದಸ್ಯರು ಸಮನಾದ ಮೂರು ಪಂಗಡಗಳಲ್ಲಿ ವಿಭಜಿಸಿಕೊಳ್ಳುವರು, ಪ್ರತಿಯೊಂದು ವಿರೋಧ ಪಕ್ಷವನ್ನು

(ಅ) ವಿರೋಧ ಪಕ್ಷ–1

(ಆ) ವಿರೋಧ ಪಕ್ಷ–2

(ಇ) ವಿರೋಧ ಪಕ್ಷ–3

ಎಂದು ಕರೆಯಲಾಗುವುದು. ವಿರೋಧ ಪಕ್ಷದ ಸದಸ್ಯರು ತಮ್ಮೊಳಗೆ ಒಬ್ಬ ನಾಯಕನನ್ನು ಆರಿಸುವರು. ಅವರನ್ನು ಆಯಾ ವಿರೋಧ ಪಕ್ಷದ ಹೆಸರಿನ ನಾಯಕರೆಂದು ಕರೆಯಲಾಗುವುದು.

4. **ಆಸನಗಳ ವ್ಯವಸ್ಥೆ.–** (ಎ) ಆಡಳಿತ ಪಕ್ಷದ ಸದಸ್ಯರು ಕೊಠಡಿಯ (ಇನ್ನು ಮುಂದೆ ಸದನ ಎಂದು ಕರೆಯಲಾಗುವುದು) ಬಲ ಭಾಗದಲ್ಲಿ, ವಿರೋಧ ಪಕ್ಷದ ಸದಸ್ಯರು ಸದನದ ಎಡಭಾಗದಲ್ಲಿ ಕುಳಿತು ಕೊಳ್ಳುವರು. ಸಭಾಧ್ಯಕ್ಷರ ಆಸನವು ಸದನದ ವೇದಿಕೆಯಲ್ಲಿ ಇರುವುದು. ಮುಖ್ಯಮಂತ್ರಿ ಹಾಗೂ ಇತರ ಸಚಿವರು ಆಡಳಿತ ಪಕ್ಷದ ಆಸನಗಳಲ್ಲಿ ಮುಂದಿನ ಸ್ಥಾನಗಳನ್ನು, ವಿರೋಧ ಪಕ್ಷದ ಮುಖಂಡರು ತಮ್ಮ ಪಕ್ಷದ ವಿಭಾಗದಲ್ಲಿ ಮುಂದಿನ ಸ್ಥಳಗಳಲ್ಲಿ ಆಸೀನರಾಗುವರು.

(ಬಿ) ತೀರ್ಪುಗಾರರ ಸಮಿತಿಯ ಸದಸ್ಯರು ಎಲ್ಲಾ ಸದಸ್ಯರನ್ನು ವೀಕ್ಷಿಸಲು ಹಾಗೂ ಆಲಿಸಲು ಸಾಧ್ಯವಾಗುವಂತಹ ಸೂಕ್ತ ಸ್ಥಳದಲ್ಲಿ ಆಸೀನರಾಗುವರು.

5. **ಸ್ಪರ್ಧೆಗಳನ್ನು ನಡೆಸುವ ವಿಧಾನ.**–(ಎ) ಮೊದಲಿಗೆ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ನಾಯಕರನ್ನು ಆಯ್ಕೆ ಮಾಡಲು ವಿಫಲರಾದಲ್ಲಿ ತೀರ್ಪುಗಾರರ ಸಮಿತಿಯ ಸದಸ್ಯರು ಅವರಿಗೆ ಮಾರ್ಗದರ್ಶನ ನೀಡುವರು ಅಥವಾ ಸೂಕ್ತ ವಿದ್ಯಾರ್ಥಿಯನ್ನು ನಾಮನಿರ್ದೇಶನ ಮಾಡುವರು. ಮೇಲಿನ ಪ್ರಕಾರ್ಯಗಳು 10–00 ಗಂಟೆಯಿಂದ 10–55 ರೊಳಗೆ ಮುಕ್ತಾಯಗೊಳ್ಳಬೇಕಾಗಿದೆ.

(ಬಿ) 11–00 ಗಂಟೆಗೆ "ಸಭಾಧ್ಯಕ್ಷರು ಸದನಕ್ಕೆ ಆಗಮಿಸುತ್ತಿದ್ದಾರೆ"ಯೆಂಬುದಾಗಿ ಶಾಲಾ ಸಿಬ್ಬಂದಿಯೊಬ್ಬರು ಘೋಷಿಸುವರು.

(ಸಿ) ಸದನದ ಸದಸ್ಯರು ತಮ್ಮ ಆಸನಗಳಿಂದ ಎದ್ದು ನಿಲ್ಲುವರು. ಸಭಾಧ್ಯಕ್ಷರು ತಮ್ಮ ಸ್ಥಾನದಲ್ಲಿ ಕುಳಿತ ನಂತರ ಸದಸ್ಯರು ಆಸೀನರಾಗುವರು.

(ಡಿ) ಸಭಾಧ್ಯಕ್ಷರು.– 1. ಪ್ರಶ್ನೋತ್ತರ

ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳು

ಪ್ರಶ್ನೆ ಸಂಖ್ಯೆ–1

ಸಚಿವರು – ಉತ್ತರ ಒದಗಿಸಲಾಗಿದೆ.

ಸಭಾಧ್ಯಕ್ಷರು – ಪ್ರಶ್ನೆ ಸಂಖ್ಯೆ –2

ಸಚಿವರು – ಉತ್ತರ ಒದಗಿಸಲಾಗಿದೆ.

(ಇದೇ ಕ್ರಮವನ್ನು ಅನುಬಂಧ–3 ರ ಪ್ರಶ್ನೆಗಳ ಬಗ್ಗೆ ಅನುಸರಿಸಲಾಗುವುದು)

ಸಭಾಧ್ಯಕ್ಷರು – ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ)

ಪ್ರಶ್ನೆಗಳು ಮುಗಿದಿವೆ.

ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳು

ಸಚಿವರು – ಉತ್ತರಗಳನ್ನು ಕಳುಹಿಸಲಾಗಿದೆ.

ಪ್ರಶ್ನೆ ಕೇಳುವ ಸದಸ್ಯರು– (ಅ) ಉತ್ತರಗಳು ತೃಪ್ತಿಕರವಿಲ್ಲ;

(ಆ) ಉತ್ತರಗಳು ಸತ್ಯಕ್ಕೆ ದೂರವಾಗಿದೆ.

(ಇ) ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕು.

(ಮುಂತಾದ ವಿಷಯಗಳ ಬಗ್ಗೆ ಮಾತಾಡುವರು)

ಇತರೆ ಸದಸ್ಯರು – ಅಧ್ಯಕ್ಷರ ಅನುಮತಿಯೊಂದಿಗೆ ಉತ್ತರಗಳ ಬಗ್ಗೆ ಮಾತಾಡಬಹುದು.

(ಇದೇ ಕ್ರಮವನ್ನು ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಬಗ್ಗೆ ಜರುಗಿಸುವುದು)

(ಇ) **ಶೂನ್ಯವೇಳೆ.**– ವಿಧಾನ ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಿಗದಿಪಡಿಸಿರುವ ಒಂದು ಕಾರ್ಯಕಲಾಪವನ್ನು ಪೂರೈಸಿದನಂತರ ಇನ್ನೊಂದು ಕಾರ್ಯಕಲಾಪ ಪ್ರಾರಂಭಿಸುವ ಅವಧಿಯನ್ನು "ಶೂನ್ಯ ವೇಳೆ"ಯೆಂದು ಕರೆಯಲಾಗುವುದು. ಪ್ರಸ್ತುತ ಅಧಿವೇಶನದಲ್ಲಿ ಪ್ರಶ್ನೋತ್ತರ ಮುಗಿದಿದೆ. "ಗಮನ ಸೆಳೆಯುವ

ಸೂಚನೆ" ಗಳನ್ನು ತೆಗೆದು ಕೊಳ್ಳಬೇಕಾಗಿದೆ. ಈ ಶೂನ್ಯವೇಳೆಯಲ್ಲಿ ಅನೇಕ ಶಾಸಕರು ಪ್ರಸ್ತುತ ನಡೆಯುತ್ತಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ "ವಿಜ್ಞಾನ" ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವ ವಿಷಯದ ಬಗ್ಗೆ ಪ್ರಸ್ತಾಪಿಸಲು ಎದ್ದು ನಿಂತು ಅಧ್ಯಕ್ಷರ ಅನುಮತಿ ಕೋರುವರು.

ಸದಸ್ಯರು: ಪ್ರಸ್ತುತ ನಡೆಯುತ್ತಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಯ ವಿಜ್ಞಾನ ವಿಷಯದ ಪ್ರಶ್ನೆ ಪತ್ರಿಕೆ ನೂರು ರೂಪಾಯಿಗೆ ದೊರೆಯುತ್ತಿದೆ. ಇದರ ಬಗ್ಗೆ ಪ್ರಸ್ತಾಪಿಸಲು ನಮಗೆ ಅನುಮತಿ ಕೊಡಬೇಕು ಇತ್ಯಾದಿ.

ಸಭಾಧ್ಯಕ್ಷರು: ತಾವು ಎತ್ತ ಬೇಕೆಂದಿರುವ ವಿಷಯದ ಬಗ್ಗೆ ಸೂಚನಾ ಪತ್ರ ಕೊಡಿ. ಮಾನ್ಯ ಸಚಿವರು ಅದಕ್ಕೆ ಉತ್ತರಿಸಲು ಕಾಲಾವಕಾಶ ಬೇಕು. ನಂತರ ತೆಗೆದುಕೊಳ್ಳೋಣ.

ಸದಸ್ಯರು: ಇದು ಅತ್ಯಂತ ಗಂಭೀರವಾದ ತುರ್ತು ವಿಷಯ ನಡೆಯುತ್ತಿರುವ ಪರೀಕ್ಷೆಗಳು ತುರ್ತಾಗಿ ನಿಲ್ಲಬೇಕು. ಉಳಿದ ಕಲಾಪಗಳನ್ನು ನಂತರ ತೆಗೆದುಕೊಳ್ಳಬಹುದು.

ಸಂಬಂಧಪಟ್ಟ ಸಚಿವರು: ಈಗಾಗಲೇ ನಾನು ಎಸ್.ಎಸ್.ಎಲ್.ಸಿ. ಪರೀಕ್ಷಾ ಮಂಡಳಿಯಿಂದ ವರದಿ ಕೋರಿದ್ದೇನೆ. ಇಂದು ಸಂಜೆ ವರದಿ ತಲುಪುವ ನಿರೀಕ್ಷೆಯಿದೆ. ನಾಳೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಸಭಾಧ್ಯಕ್ಷರು: ವಿಷಯವನ್ನು ನಾಳಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ "ಗಮನ ಸೆಳೆಯುವ ಸೂಚನೆಗಳಡಿಯಲ್ಲಿ ತೆಗೆದುಕೊಳ್ಳಲಾಗುವುದು" ಮುಂದಿನ ಕಾರ್ಯಕಲಾಪ "ಗಮನ ಸೆಳೆಯುವ ಸೂಚನೆ".

(ಎಫ್) **ಗಮನ ಸೆಳೆಯುವ ಸೂಚನೆ.–** ಪುಟ ಸಂಖ್ಯೆ 65–69 ರಲ್ಲಿರುವ ವಿಷಯದ ಬಗ್ಗೆ ಸಂಬಂಧಪಟ್ಟ ಸಚಿವರು ವಿವರಣೆಯನ್ನು ನೀಡುವರು. ಪುಟ 65 ರಿಂದ 69ರ ಮಾದರಿಗಳನ್ನು ನೋಡಿ.

ಗಮನ ಸೆಳೆಯುವ ಸೂಚನೆ ನೀಡಿರುವ ಶಾಸಕರು "ವಿವರಣೆ ತೃಪ್ತಿಕರವಾಗಿಲ್ಲ". ವಾಸ್ತವಿಕತೆ ದೂರವಾಗಿದೆ, ಸರ್ಕಾರವು ತಮ್ಮ ಅಸಮರ್ಥತೆಯನ್ನು ಒಪ್ಪಿಕೊಳ್ಳಬೇಕು. ಸದನ ಸಮಿತಿ ರಚಿಸಬೇಕು ಇತ್ಯಾದಿ ವಿಷಯಗಳ ಬಗ್ಗೆ ಮಾತಾಡುವರು.

ಉಳಿದ ಶಾಸಕರು ಅಧ್ಯಕ್ಷರ ಅನುಮತಿಯ ಮೇರೆಗೆ ಚರ್ಚೆಯಲ್ಲಿ ಭಾಗವಹಿಸಬಹುದು. ನಂತರ ಸಚಿವರು ಉತ್ತರ/ ಆಶ್ವಾಸನೆ ನೀಡುವರು.

(ಜಿ) **ಅಲ್ಪ ಕಾಲಾವಧಿ ಚರ್ಚೆ.–** ಪುಟ ಸಂಖ್ಯೆ 71ರ ಮಾದರಿಗಳನ್ವಯ ಸೂಚನೆಯನ್ನು ಕೊಟ್ಟಿರುವ ಸದಸ್ಯರು ಒಂದು ಸಂಕ್ಷಿಪ್ತ ಹೇಳಿಕೆಯನ್ನು ಕೊಡುವರು. ಸಂಬಂಧಪಟ್ಟ ಮಂತ್ರಿಯವರು ಸಂಕ್ಷಿಪ್ತ ಉತ್ತರ ನೀಡುವರು. ಕೆಲವು ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಚರ್ಚೆಯಲ್ಲಿ ಭಾಗವಹಿಸುವರು.

(ಹೆಚ್) **ವಿಧೇಯಕದ ಮಂಡನೆ.–** ಪುಟ ಸಂಖ್ಯೆ 72–82ರ ಮಾದರಿಗಳನ್ವಯ ವಿಧೇಯಕವನ್ನು ಮಂಡಿಸುವಂತೆ ಸಂಬಂಧಪಟ್ಟ ಸಚಿವರಿಗೆ ಸಭಾಧ್ಯಕ್ಷರು ಸೂಚಿಸುವರು.

ಸಂಬಂಧಪಟ್ಟ ಸಚಿವರು (ಮಾನ್ಯ ಉನ್ನತ ಶಿಕ್ಷಣ ಸಚಿವರು) ಎದ್ದು ನಿಂತು.– ನಾನು ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2012ನ್ನು ಮಂಡಿಸುತ್ತಿದ್ದೇನೆ.

ಸಭಾಧ್ಯಕ್ಷರು – ವಿಧೇಯಕವನ್ನು ಮಂಡಿಸಲಾಗಿದೆ.

(ಐ) **ವಿಧೇಯಕದ ಪರ್ಯಾಲೋಚನೆ.–** ಸಂಬಂಧಪಟ್ಟ ಸಚಿವರು ವಿಧೇಯಕದ ಉದ್ದೇಶವನ್ನು ವಿವರಿಸುವರು ಹಾಗೂ ಮುಗಿಸಿದನಂತರ ಕುಳಿತು ಕೊಳ್ಳುವರು.

ಸಭಾಧ್ಯಕ್ಷರು: ವಿಧೇಯಕದ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಳ್ಳಲು ಸೂಚನೆ ನೀಡಿರುವ ಶಾಸಕರ ಹೆಸರನ್ನು ಕರೆಯುವರು – ತಮ್ಮ ತಮ್ಮ ಸರದಿಯನ್ವಯ ಶಾಸಕರು ಚರ್ಚೆಯಲ್ಲಿ ಭಾಗವಹಿಸಿ ಸಲಹೆ/ಸೂಚನೆ ನೀಡುವರು.

ಸಂಬಂಧಪಟ್ಟ ಸಚಿವರು: ಸಲಹೆಗಳ ಬಗ್ಗೆ ಉತ್ತರಿಸುವರು. ಇದಾದ ನಂತರ

ಸಭಾಧ್ಯಕ್ಷರು: ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕಲಾಗಿದೆ. ವಿಧೇಯಕದ ಪರವಾಗಿರುವವರು "ಹೌದು" ಎಂದು ಉತ್ತರಿಸಬೇಕು. ವಿಧೇಯಕಕ್ಕೆ ವಿರುದ್ಧವಾಗಿರುವವರು "ಇಲ್ಲ" ಎಂದು ಉತ್ತರಿಸಬೇಕು ಎಂದು ಹೇಳುವರು.

(ಸದಸ್ಯರು ತಮ್ಮ ತಮ್ಮ ನಿರ್ಣಯಗಳನ್ನು "ಹೌದು" ಅಥವಾ "ಇಲ್ಲ" ಎಂದು ಉತ್ತರಿಸುವರು.)

ಸಭಾಧ್ಯಕ್ಷರು – ವಿಧೇಯಕ ಅಂಗೀಕಾರವಾಗಿದೆ.

ಸಭಾಧ್ಯಕ್ಷರು – ಇಂದಿನ ಕಾರ್ಯಕಲಾಪಗಳು ಮುಗಿದಿವೆ. ನಾಳೆ ಪೂರ್ವಾಹ್ನ 11–00 ಗಂಟೆಗೆ ಸೇರಲಾಗುವುದು.

ಎಂದು ತಿಳಿಸುವರು. ಸದಸ್ಯರೆಲ್ಲರೂ ಎದ್ದು ನಿಲ್ಲುವರು. ಸಭಾ ಸದಸ್ಯರು ನಿರ್ಗಮಿಸಿದ ನಂತರ ಸದಸ್ಯರು ತಮ್ಮ ಆಸನಗಳಿಂದ ನಿರ್ಗಮಿಸುವರು.

ಮಾದರಿ ಕಾರ್ಯಕ್ರಮ ಹಾಗೂ ಕಡ್ಡಾಯ ವಿಷಯಗಳ ಪಟ್ಟಿಯನ್ನು ಕ್ರಮವಾಗಿ ಅನುಬಂಧ–ಎ ಮತ್ತು ಅನುಬಂಧ–ಬಿ ಯಲ್ಲಿ ಒದಗಿಸಲಾಗಿದೆ.

**(ಜೆ) ಶಿಷ್ಟಾಚಾರ ಸಂಹಿತೆ –** ಸ್ಪರ್ಧೆಗೆ ಭಾಗವಹಿಸುವ ವಿದ್ಯಾರ್ಥಿಗಳು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.–

(1) ವಿದ್ಯಾರ್ಥಿಗಳು ಕೊಟ್ಟ ವಿಷಯವನ್ನು ಮಾತನಾಡಬೇಕಾಗುತ್ತದೆ. ವಿಷಯವನ್ನು ಮೀರಿ ಮಾಡನಾಡಲು ಅವಕಾಶವಿರುವುದಿಲ್ಲ.

(2) ಶಿಸ್ತು ಸಂಯಮಗಳು, ನಿಯಮಗಳು ಸ್ಪರ್ಧೆಯ ಎಲ್ಲಾ ವಿದ್ಯಾರ್ಥಿಗಳಿಗೆ ಮೀಸಲಾಗಿರುತ್ತದೆ.

**6. ತೀರ್ಪುಗಾರರ ಸಮಿತಿಯ ರಚನೆ:–** ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ತೀರ್ಪುಗಾರರ ಸಮಿತಿಯಲ್ಲಿ,–

**(1) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ನಿಯೋಜಿತ ಅಧಿಕಾರಿ;**

**(2) ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ;**

**(3) ಸ್ಥಳೀಯ ಶಾಸಕರು/ಜಿಲ್ಲಾ ಪಂಚಾಯತ್/ ತಾಲ್ಲೂಕ್ ಪಂಚಾಯತ್ ಸದಸ್ಯರು ಇರತಕ್ಕದ್ದು.**

7. ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವುದು ಹಾಗೂ ಬಹುಮಾನ:– **ಮೆರಿಟ್ ಪಟ್ಟಿ ಹಾಗೂ ವರದಿಯನ್ನು ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಗೆ ನಿಗದಿ ಪಡಿಸಿರುವ ಮಾದರಿಯಲ್ಲೇ ಸಿದ್ಧಪಡಿಸತಕ್ಕದ್ದು. ಬಹುಮಾನಗಳನ್ನು ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಮೊದಲ 5 ಸ್ಥಾನ ಗಳಿಸಿದವರಿಗೆ ಉತ್ತಮ ನಿರ್ವಹಣೆಗಾಗಿ ಬಹುಮಾನಗಳನ್ನು ನೀಡುವುದರೊಂದಿಗೆ, ಸ್ಪರ್ಧಿಗಳಿಗೆ ಬಹುಮಾನ ನೀಡುವುದನ್ನು ತೀರ್ಪುಗಾರರ ಸಮಿತಿಯು ನಿರ್ಧರಿಸಬಹುದು. ಜಿಲ್ಲಾ ಮಟ್ಟದ ಸ್ಪರ್ಧಿಗಳಿಗೆ/ಶಾಲೆಗಳಿಗೆ ಅನುಬಂಧ–IV (ಪುಟ 25 ನೋಡಿ) ಮತ್ತು V (ಪುಟ 26 ನೋಡಿ)ರಲ್ಲಿ ನಿಗದಿ ಪಡಿಸಿದ ರೀತ್ಯಾ ಪ್ರಮಾಣ ಪತ್ರಗಳನ್ನು ಸ್ಪರ್ಧೆಯ ಸ್ಥಳದಲ್ಲೇ ನೀಡಲಾಗುವುದು.**

ಅನುಬಂಧ – ಎ

**ಮಾದರಿ ಕಾರ್ಯಕ್ರಮಗಳು**

| | | |
|---|---|---|
| ಪೂರ್ವಾಹ್ನ | 11.00 ರಿಂದ 11.30 ರವರೆಗೆ | ಉದ್ಘಾಟನೆ |
| | 11.30 ರಿಂದ 11.45 ರವರೆಗೆ | ಆಸನಗಳ ಜೋಡಣೆ ಇತ್ಯಾದಿ |
| | 11.45 ರಿಂದ ಅ. 1.00 ರವರೆಗೆ | ಮೊದಲನೆ ತಂಡದ ಪ್ರದರ್ಶನ |
| ಅಪರಾಹ್ನ | 1.00 ರಿಂದ 2.00 ರವರೆಗೆ | ಊಟದ ವಿರಾಮ |
| | 2.00 ರಿಂದ 3.15 ರವರೆಗೆ | ಎರಡನೆ ತಂಡದ ಪ್ರದರ್ಶನ |
| | 3.15 ರಿಂದ 3.45 ರವರೆಗೆ | ಫಲಿತಾಂಶ ನಿರ್ಣಯ |
| | 3.45 ರಿಂದ 4.14 ರವರೆಗೆ | ಮುಕ್ತಾಯ |

**ಅನುಬಂಧ – ಬಿ**

ಭಾಗ – 1 ಕಡ್ಡಾಯ ವಿಷಯಗಳ ಪಟ್ಟಿ

1. **ಸಭಾಧ್ಯಕ್ಷರ ಆಗಮನ**
2. **ಪ್ರಶ್ನೋತ್ತರ ವೇಳೆ**
3. **ಗಮನ ಸೆಳೆಯುವ ಸೂಚನೆಗಳು**
4. **ಅಲ್ಪ ಕಾಲಾವಧಿ ಚರ್ಚೆ**
5. **ವಿಧೇಯಕಗಳ ಮಂಡನೆ**

ಭಾಗ –2 ಐಚ್ಛಿಕ ವಿಷಯಗಳ ಪಟ್ಟಿ

1. **ಸಂತಾಪ ಸೂಚನೆಗಳು**
2. **ಶೂನ್ಯವೇಳೆ**
3. **ವಿಧೇಯಕಗಳ ಪರಿಶೀಲನೆ / ಅಂಗೀಕಾರ**
4. **ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ**
5. **ಖಾಸಗೀ ಕಲಾಪಗಳು (ನಿರ್ಣಯ ಅಥವಾ ಖಾಸಗೀ ವಿಧೇಯಕದ ಮಂಡನೆ ಇತ್ಯಾದಿ)**

**ಸ್ಪರ್ಧೆಯ ಬಗ್ಗೆ ಸ್ಪಷ್ಟೀಕರಣ ಅಗತ್ಯತೆ ಇದ್ದಲ್ಲಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., 100 ಅಡಿ ರಿಂಗ್ ರಸ್ತೆ, ಹೊಸಕೆರೆ ಹಳ್ಳಿ, ಬೆಂಗಳೂರು ಅಥವಾ ಉಪ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ವಿಧಾನಸೌಧ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.**

ಅನುಬಂಧ – IV

ಕರ್ನಾಟಕ ಸರ್ಕಾರ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ

ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ 2012 – 2013

**------------------------------ ಶಾಲೆಯ -------------------- ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ -----------------------------ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ 2012–2013ನೇ ಶೈಕ್ಷಣಿಕ ವರ್ಷದಲ್ಲಿ ನಡೆಸಿದ "ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ" ಭಾಗವಹಿಸಿದ್ದಾರೆಂದು ಪ್ರಮಾಣೀಕರಿಸಲಾಗಿದೆ.**

| | | |
|---|---|---|
| ಸ್ಥಳ: __________ | ಉಪ ನಿರ್ದೇಶಕರು | ಸಕ್ಷಮ ಪ್ರಾಧಿಕಾರಿ |
| ದಿನಾಂಕ: __________ | ಸಾರ್ವಜನಿಕ ಶಿಕ್ಷಣ ಇಲಾಖೆ | ಸಂಸದೀಯ ವ್ಯವಹಾರಗಳು ಮತ್ತು |
| | ________________ ಜಿಲ್ಲೆ | ಶಾಸನ ರಚನೆ ಇಲಾಖೆ |

ಅನುಬಂಧ – V

ಕರ್ನಾಟಕ ಸರ್ಕಾರ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ

"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ" 2012 – 2013

**------------------------------ ಶಾಲೆಯ --------------------- ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ ---------------------------------- ಅವರಿಗೆ 2012 – 2013ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಹಭಾಗಿತ್ವದಲ್ಲಿ ನಡೆಸಲಾದ "ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ"ಯಲ್ಲಿ ಅತ್ಯುತ್ತಮ ಸಾಧನೆಗೆ ---------------------------------- ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.**

| | | |
|---|---|---|
| ಸ್ಥಳ: __________ | ಉಪ ನಿರ್ದೇಶಕರು | ಸಕ್ಷಮ ಪ್ರಾಧಿಕಾರಿ |
| ದಿನಾಂಕ: __________ | ಸಾರ್ವಜನಿಕ ಶಿಕ್ಷಣ ಇಲಾಖೆ | ಸಂಸದೀಯ ವ್ಯವಹಾರಗಳು ಮತ್ತು |
| | ________________ ಜಿಲ್ಲೆ | ಶಾಸನ ರಚನೆ ಇಲಾಖೆ |

ಕರ್ನಾಟಕ ರಾಜ್ಯದ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ
ಯುವ ಸಂಸತ್ ಸ್ಪರ್ಧೆಗೆ ಪೂರಕವಾಗಿ ಸಂಸತ್ ಕಾರ್ಯಕಲಾಪಗಳ ಬಗೆಗೆ ಕೆಲವು ವಿಶೇಷ ಮಾಹಿತಿಗಳು:

ಅಖಿಲ ಭಾರತ ಮುಖ್ಯ ಸಚೇತಕರ ಸಮ್ಮೇಳನವು ಮಾಡಿರುವ ಶಿಫಾರಸ್ಸುಗಳನ್ವಯ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬಗ್ಗೆ ಸಂಸತ್ತು, ವಿಧಾನ ಮಂಡಲದ ಅಧಿವೇಶನಗಳ ಬಗ್ಗೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಉದ್ದೇಶದಿಂದ ಕರ್ನಾಟಕ ರಾಜ್ಯದಲ್ಲಿ "ಯುವ ಸಂಸತ್" ಸ್ಪರ್ಧೆಗಳನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಡೆಸಲಾಗುತ್ತಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ "ವಿಧಾನ ಸಭೆಯ" ಮಾದರಿ ಅಧಿವೇಶನವನ್ನು ನಡೆಸುವ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**2. ವಿಧಾನ ಸಭೆಯ ರಚನೆ.–** ಭಾರತ ಸಂವಿಧಾನದ 170ನೇ ಅನುಚ್ಛೇದದ ಅನ್ವಯ ಕರ್ನಾಟಕ ರಾಜ್ಯದ ವಿಧಾನ ಸಭೆಯಲ್ಲಿ 224 ಚುನಾಯಿತ ಸದಸ್ಯರು ಹಾಗೂ ನಾಮನಿರ್ದೇಶಿತ ಒಬ್ಬ ಆಂಗ್ಲೋ ಇಂಡಿಯನ್ ಸದಸ್ಯರಿದ್ದಾರೆ.

**3. ವಿಧಾನ ಸಭೆಯ ಕಾರ್ಯಕಲಾಪಗಳು.–** ವಿಧಾನ ಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ವಿಧಾನ ಸಭಾಧ್ಯಕ್ಷರ ಅನುಮೋದನೆಯೊಂದಿಗೆ ವಿಧಾನ ಸಭಾ ಸಚಿವಾಲಯದ ಕಾರ್ಯದರ್ಶಿಯವರು ಹೊರಡಿಸುವರು. ಕಾರ್ಯಕಲಾಪಗಳ ಪಟ್ಟಿಯಲ್ಲಿ,–

(ಅ) ಸಂತಾಪ ಸೂಚನೆ

(ಆ) ಪ್ರಶ್ನೋತ್ತರ

(ಇ) ವರದಿಗಳನ್ನು ಒಪ್ಪಿಸುವುದು

(ಈ) ಗಮನ ಸೆಳೆಯುವ ಸೂಚನೆಗಳು

(ಉ) ವಿತ್ತೀಯ ಕಾರ್ಯಕಲಾಪಗಳು

(ಊ) ಪೂರಕ ಕಾರ್ಯಕಲಾಪಗಳ ಪಟ್ಟಿ

(ಋ) ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವಗಳ ಜರೂರು ವಿಷಯದ ಚರ್ಚೆ.

(ಎ) ಶಾಸನ ರಚನೆ.

ಹಾಗೂ ಇನ್ನಿತರೆ ವಿಷಯಗಳನ್ನು ಸೇರಿಸಬಹುದು. ಪ್ರಸ್ತುತ ಅಧಿವೇಶನದ ಮಾದರಿ ಕಾರ್ಯಕಲಾಪಗಳ ಪಟ್ಟಿಯನ್ನು ಅನುಬಂಧ – VIರಲ್ಲಿ ಒದಗಿಸಲಾಗಿದೆ.

**4. ಸಂತಾಪ ಸೂಚನೆಗಳು:** ಅಧಿವೇಶನ ಪ್ರಾರಂಭವಾದ ದಿನದ ಮೊದಲಿಗೆ ಅಗಲಿದ ಗಣ್ಯ ವ್ಯಕ್ತಿಗಳಿಗೆ ಸಭಾಧ್ಯಕ್ಷರಿಂದ ಸಂತಾಪ ಸೂಚನೆ. ಸಂತಾಪ ಸೂಚನೆಯನ್ನು ಪುಟ ಸಂಖ್ಯೆ 34–36ರಲ್ಲಿ ಒದಗಿಸಲಾಗಿದೆ.

**5. ಪ್ರಶ್ನೋತ್ತರಗಳು.–** (1) ಪ್ರತಿಯೊಂದು ದಿನದ ಅಧಿವೇಶನದ ಮೊದಲನೆಯ ಒಂದು ಗಂಟೆಯ ಅವಧಿಯನ್ನು ಪ್ರಶ್ನೆ ಕೇಳುವುದಕ್ಕೆ ಮತ್ತು ಉತ್ತರಿಸುವುದಕ್ಕೆ ಮೀಸಲಿಡಲಾಗುವುದು. ಸದರಿ ವಿಷಯದಲ್ಲಿ ಒಂದು ಉಪ ಪ್ರಶ್ನೆಗೆ ಅವಕಾಶವಿರುತ್ತದೆ.

(2) ಪ್ರಶ್ನೆಯನ್ನು ಕೇಳಲಿಚ್ಛಿಸುವ ಸದಸ್ಯರು 15 ದಿನಗಳಿಗೆ ಕಡಿಮೆ ಇಲ್ಲದೆ ಪ್ರಶ್ನೆಯ ಬಗ್ಗೆ ಸೂಚನಾ ಪತ್ರವನ್ನು ವಿಧಾನ ಸಭೆಯ ಕಾರ್ಯದರ್ಶಿಯವರಿಗೆ ಕೊಡಬೇಕು. ಪ್ರಶ್ನೆಯು ಲಿಖಿತ ರೂಪದಲ್ಲಿರಬೇಕು ಹಾಗೂ ಅದರಲ್ಲಿ ಯಾರಿಗೆ ಪ್ರಶ್ನೆ ಕೇಳಲಾಗಿದೆಯೋ ಆ ಸಚಿವರ ಪದನಾಮವನ್ನು ನಮೂದಿಸಬೇಕು.

(3) ಪ್ರಶ್ನೆಗಳನ್ನು,-

(ಅ) ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳು; ಹಾಗೂ

(ಆ) ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳು ಎಂದು ವಿಂಗಡಿಸಲಾಗಿದೆ.

(4) ಪ್ರಶ್ನೆ ಕೇಳುವ ಬಗ್ಗೆ ಕೆಳಕಂಡ ಕೆಲವು ಪ್ರಮುಖ ಷರತ್ತುಗಳಿವೆ,-

(ಎ) ಒಂದು ಪ್ರಶ್ನೆಯು ಒಂದೇ ವಿಚಾರಕ್ಕೆ ಸಂಬಂಧ ಪಟ್ಟಿರಬೇಕು.

(ಬಿ) ಪ್ರಶ್ನೆಯು ಅರ್ಥವಾಗುವಂತೆ ಇರಬೇಕು.

(ಸಿ) ಪ್ರಶ್ನೆಯು ಸಾಮಾನ್ಯವಾಗಿ 150 ಪದಗಳನ್ನು ಮೀರತಕ್ಕದ್ದಲ್ಲ.

(ಡಿ) ಸರ್ಕಾರಕ್ಕೆ ಸಂಬಂಧಪಡದ ಯಾವುದೇ ವಿಷಯಗಳ ಬಗ್ಗೆ ಪ್ರಶ್ನೆ ಕೇಳತಕ್ಕದ್ದಲ್ಲ.

(ಇ) ಕ್ಷುಲ್ಲಕ, ಸುಲಭವಾಗಿ ದೊರೆಯುವ ಮಾಹಿತಿಗಳನ್ನು ಕೇಳತಕ್ಕದ್ದಲ್ಲ.

(ಎಫ್) ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ವಿಷಯವನ್ನು ಪ್ರಶ್ನಿಸುವಂತಿಲ್ಲ. ಇತ್ಯಾದಿ.

(5) ವಿದ್ಯಾರ್ಥಿಗಳ ಉಪಯೋಗಕ್ಕಾಗಿ, ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಕೆಲವು ಮಾದರಿಗಳನ್ನು ಪುಟ ಸಂಖ್ಯೆ 37-69ರಲ್ಲಿ ಒದಗಿಸಲಾಗಿದೆ.

**6. ಗಮನ ಸೆಳೆಯುವ ಸೂಚನೆಗಳು.-** (1) ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮಂತ್ರಿಯವರ ಗಮನಕ್ಕೆ ತರಬಹುದು. ಮಂತ್ರಿಯವರು ಸಂಕ್ಷಿಪ್ತವಾಗಿ ಒಂದು ಹೇಳಿಕೆಯನ್ನು ಕೊಡಬಹುದು ಅಥವಾ ಇನ್ನೊಂದು ದಿನ ತಮ್ಮ ಹೇಳಿಕೆ ನೀಡಲು ಕಾಲಾವಕಾಶ ಕೋರಬಹುದು.

(2) (ಅ) ಗಮನ ಸೆಳೆಯುವ ಸೂಚನೆಯನ್ನು ಒಂದಕ್ಕಿಂತ ಹೆಚ್ಚು ಸದಸ್ಯರು ಸಹಿ ಮಾಡಿದ್ದಲ್ಲಿ, ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿಸಿರುವ ಸದಸ್ಯರು ಗಮನ ಸೆಳೆಯಬಹುದು.

(ಆ) ಗಮನ ಸೆಳೆಯುವ ಕಾರ್ಯಕಲಾಪದಲ್ಲಿ ಚರ್ಚೆಗೆ ಅವಕಾಶವಿಲ್ಲ. ಆದರೆ ಸಭಾಧ್ಯಕ್ಷರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೋರಬಹುದು. ಗಮನ ಸೆಳೆಯುವ ಸೂಚನೆಗಳ ಮಾದರಿಗಳನ್ನು ಪುಟ ಸಂಖ್ಯೆ 70-71ರಲ್ಲಿ ನೀಡಲಾಗಿದೆ.

7. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಅಲ್ಪಕಾಲಾವಧಿ ಚರ್ಚೆಯ ಸೂಚನೆ ಹಾಗೂ ಉತ್ತರದ ಮಾದರಿ - ಪುಟ ಸಂಖ್ಯೆ.70-71.

8. ಅನುಬಂಧ-VIII ಅಲ್ಪಕಾಲಾವಧಿ ಚರ್ಚೆ. ಪುಟ 72-73

9. ಸಾರ್ವಜನಿಕ ಮಹತ್ವದ ಜರೂರು ವಿಷಯದ ಅಲ್ಪಕಾಲಾವಧಿ ಚರ್ಚೆ.- ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸಲು ಅಪೇಕ್ಷಿಸುವ ಸದಸ್ಯರು ಬರಹದ ಮೂಲಕ ಸೂಚನೆಯನ್ನು ವಿವರಣಾತ್ಮಕ ಟಿಪ್ಪಣಿಯೊಂದಿಗೆ ಕಾರ್ಯದರ್ಶಿಯವರಿಗೆ ಕೊಡಬಹುದು. ಆ ಸೂಚನೆಗೆ ಕನಿಷ್ಠ ಬೇರೆ ಇಬ್ಬರು ಸದಸ್ಯರು ತಮ್ಮ ಸಹಿಗಳನ್ನು ಹಾಕುವುದರ ಮೂಲಕ ಬೆಂಬಲಿಸಲ್ಪಟ್ಟಿರಬೇಕು. ನಿಯಮದ ಅಡಿಯಲ್ಲಿ ಸೂಚನೆಯನ್ನು ಕೊಟ್ಟಿರುವ ಸದಸ್ಯನು ಒಂದು ಸಂಕ್ಷಿಪ್ತ ಹೇಳಿಕೆಯನ್ನು ನೀಡಬಹುದು ಮತ್ತು ಮಂತ್ರಿಗಳು ಸಂಕ್ಷಿಪ್ತವಾಗಿ ಉತ್ತರ ನೀಡಬೇಕು. ಅಧ್ಯಕ್ಷರ ಅನುಮತಿ ಪಡೆದ ಸದಸ್ಯರು ಚರ್ಚೆಯಲ್ಲಿ

ಭಾಗವಹಿಸಬಹುದು. ಈ ನಿಯಮದಡಿ ನೀಡುವ ಮಾದರಿ ಸೂಚನೆಯನ್ನು ಪುಟ ಸಂಖ್ಯೆ 79–85ರಲ್ಲಿ ಒದಗಿಸಿದೆ.

10. ಅರ್ಧ ಗಂಟೆ ಕಾಲಾವಧಿ ಚರ್ಚೆ– ಮಾಹಿತಿ.

11. ಶಾಸನ ರಚನೆ.– (1) ಶಾಸನ ರಚನೆಯು ಶಾಸಕರ ಪ್ರಮುಖ ಅಧಿಕಾರ ಮತ್ತು ಕರ್ತವ್ಯಗಳಲ್ಲಿ ಒಂದು. ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿ (ರಾಜ್ಯ ಪಟ್ಟಿ) ಹಾಗೂ ಮೂರನೇ ಪಟ್ಟಿ (ಸಂಯುಕ್ತ ಪಟ್ಟಿ) ಯಲ್ಲಿರುವ ವಿಷಯಗಳ ಬಗ್ಗೆ, ವಿಧಾನ ಸಭೆಯು ಶಾಸನಗಳನ್ನು ರಚಿಸಲು ಅಧಿಕಾರ ಹೊಂದಿದೆ.

(2) ಶಾಸನ ರಚನೆಯಲ್ಲಿ,–

(ಅ) ವಿಧೇಯಕವನ್ನು ಮಂಡಿಸುವುದು;

(ಆ) ವಿಧೇಯಕವನ್ನು ಪರ್ಯಾಲೋಚಿಸುವುದು; ಹಾಗೂ

(ಇ) ವಿಧೇಯಕವನ್ನು ಅಂಗೀಕರಿಸುವುದು.

ಈ ರೀತಿ ಮೂರು ಹಂತಗಳಿವೆ.

(3) ವಿಧೇಯಕಗಳನ್ನು ಸರ್ಕಾರವು ಸಂಬಂಧಪಟ್ಟ ಸಚಿವರ ಮುಖಾಂತರ ವಿಧಾನ ಸಭೆಯಲ್ಲಿ ಮಂಡಿಸುವುದು. ವಿಧೇಯಕದ ಪರ್ಯಾಲೋಚನೆಯಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ಸಲಹೆಗಳನ್ನು ನೀಡಬಹುದು ಹಾಗೂ ತಿದ್ದುಪಡಿಗಳನ್ನು ಸೂಚಿಸಬಹುದು. ಪರ್ಯಾಲೋಚನೆಯ ನಂತರ ವಿಧೇಯಕವನ್ನು ಖಂಡ ಖಂಡವಾಗಿ (clause by clause) ಮತಕ್ಕೆ ಹಾಕಲಾಗುವುದು ಹಾಗೂ ಅಂಗೀಕರಿಸಲಾಗುವುದು.

(4) ವಿಧೇಯಕದ ಮಾದರಿಯನ್ನು ಪುಟ ಸಂಖ್ಯೆ 82–87ರಲ್ಲಿ ಕೊಡಲಾಗಿದೆ. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯ ಪ್ರಸ್ತಾವನೆ. (ಪುಟ–81)

ವಿಶೇಷ ಪ್ರಸ್ತಾವನೆ (ಪುಟ 81).

**ಅನುಬಂಧ – VI**

**ಮಾದರಿ – 1**

**(ಕರ್ನಾಟಕ ವಿಧಾನ ಸಭೆಯ ಮಾದರಿ ಕಾರ್ಯಕಲಾಪಗಳ ಪಟ್ಟಿ)**

**ಕರ್ನಾಟಕ ವಿಧಾನ ಸಭೆ**

**ಹದಿಮೂರನೇ ವಿಧಾನ ಸಭೆ**

**(ಮೊದಲನೇ ಅಧಿವೇಶನ)**

**ಕಾರ್ಯಕಲಾಪಗಳ ಪಟ್ಟಿ**

**ದಿನಾಂಕ: 28.03.2012**

**(ಸಮಯ: ಬೆಳಿಗ್ಗೆ 10.00 ಗಂಟೆಗೆ)**

---

**1. ಪ್ರಶ್ನೋತ್ತರ**

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಮೂರನೇ ಪಟ್ಟಿ

ಆ) ದಿನಾಂಕ: 9ನೇ ಮಾರ್ಚ್ 2012ರ ಐದನೇ ಪಟ್ಟಿಯಿಂದ ತಡೆಹಿಡಿಯಲಾದ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 113(92) : ಶ್ರೀ ಕೆ. ರಾಜು ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು

ದಿನಾಂಕ: 28ನೇ ಫೆಬ್ರವರಿ 2012ರ ಎರಡನೇ ಪಟ್ಟಿಯಿಂದ ತಡೆಹಿಡಿಯಲಾದ ಶ್ರೀ ಅಪ್ಪಾಜಿ ಶಂಕರರಾವ್ ನಾಡಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:27(333) : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಇ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಹದಿಮೂರನೇ ಪಟ್ಟಿ

**2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ಶ್ರೀ (ಮಾನ್ಯ ಮುಖ್ಯಮಂತ್ರಿಯವರು) ಅವರು:–**

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2012ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕಪರಿಶೋಧನಾ (ವಾಣಿಜ್ಯ) ವರದಿಯನ್ನು ಸಭೆಯ ಮುಂದಿಡುವುದು.

2. ಸದಸ್ಯರಿಗೆ ಈಗಾಗಲೇ ಪ್ರತ್ಯೇಕವಾಗಿ ಕಳುಹಿಸಲಾಗಿರುವ ಮೂರು ಹಾಗೂ ನಾಲ್ಕನೇ ಪಟ್ಟಿಯ ರಿತ್ಯಾ

**3. ಅರ್ಜಿಯನ್ನು ಒಪ್ಪಿಸುವುದು**

**ಶ್ರೀ ಎನ್. ಯೋಗೀಶ್ ಭಟ್ (ಉಪ ಸಭಾಧ್ಯಕ್ಷರು ಹಾಗೂ ಅಧ್ಯಕ್ಷರು, ಅರ್ಜಿಗಳ ಸಮಿತಿ)** ಅವರು– ಕುದುರೆಮುಖದ ಕಬ್ಬಿಣದ ಅದಿರು ಮತ್ತು ಇತರೆ ವಸ್ತುಗಳು ಲಕ್ಯಾ ಡ್ಯಾಮ್, ಕುದುರೆಮುಖ ಇಲ್ಲಿ ಸಂಗ್ರಹವಾಗಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುವುದು.

**4. ಶಾಸನ ರಚನೆ**

**1. ವಿಧೇಯಕವನ್ನು ಮಂಡಿಸುವುದು**

**1. ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ)(ತಿದ್ದುಪಡಿ) ವಿಧೇಯಕ, 2012**

**ಶ್ರೀ ಎಸ್.ಎ. ರವೀಂದ್ರ ನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) ಅವರು:–**

ಅ. 2012ನೇ ಸಾಲಿನ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು

ಆ. ಹಾಗೂ ವಿಧೇಯಕವನ್ನು ಮಂಡಿಸುವುದು.

**2. ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ವಿಧೇಯಕ, 2011**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಅವರು:–**

ಅ. 2011ನೇ ಸಾಲಿನ ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು;

ಆ. ಹಾಗೂ ವಿಧೇಯವನ್ನು ಮಂಡಿಸುವುದು.

**II ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**1. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2011**

**ಶ್ರೀ ಲಕ್ಷ್ಮಣ ಎಸ್. ಸವದಿ (ಕೃಷಿ ಮಾರುಕಟ್ಟೆ ಮತ್ತು ಸಹಕಾರ ಸಚಿವರು) ಅವರು:–**

ಅ. ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2012ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

ಆ. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**2. ಕಾರ್ಖಾನೆಗಳ ಕರ್ನಾಟಕ (ತಿದ್ದುಪಡಿ) ವಿಧೇಯಕ, 2011**

**ಶ್ರೀ ಬಿ.ಎನ್.ಬಚ್ಚೇಗೌಡ, (ಕಾರ್ಮಿಕ ಸಚಿವರು) ಅವರು:–**

ಅ. 2011ನೇ ಸಾಲಿನ ಕಾರ್ಖಾನೆಗಳ ಕರ್ನಾಟಕ (ತಿದ್ದುಪಡಿ) ವಿಧೇಯಕವನ್ನು ಪರ್ಯಾ ಲೋಚಿಸಬೇಕೆಂದು ಸೂಚಿಸುವುದು;

ಆ. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**3. ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2011**

**ಶ್ರೀ ಜಗದೀಶ್ ಶೆಟ್ಟರ್, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅವರು:–**

ಅ. 2011ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**4. ಕರ್ನಾಟಕ ಗೃಹ ರಕ್ಷಕ ದಳ (ತಿದ್ದುಪಡಿ) ವಿಧೇಯಕ, 2012**

**ಶ್ರೀ ಆರ್. ಅಶೋಕ, (ಗೃಹ ಮತ್ತು ಸಾರಿಗೆ ಸಚಿವರು) ಅವರು:–**

ಅ. 2012ನೇ ಸಾಲಿನ ಕರ್ನಾಟಕ ಗೃಹ ರಕ್ಷಕ ದಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**5. ಕರ್ನಾಟಕ ರಾಜ್ಯ ನವೀನಾತ್ಮಕ ವಿಶ್ವವಿದ್ಯಾಲಯಗಳ ವಿಧೇಯಕ, 2011**

ಡಾ॥ ವಿ. ಎಸ್. ಆಚಾರ್ಯ, (ಉನ್ನತ ಶಿಕ್ಷಣ, ಯೋಜನಾ, ಸಾಂಖ್ಯಿಕ, ಮುಜರಾಯಿ,

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) ಅವರು:–

ಅ. 2011ನೇ ಸಾಲಿನ ಕರ್ನಾಟಕ ರಾಜ್ಯ ನವೀನಾತ್ಮಕ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**6. ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2011**

**ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಪೌರಾಡಳಿತ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮಂಡಳಿ ಸಚಿವರು)ಅವರು:–**

ಅ. 2011ನೇ ಸಾಲಿನ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**7. ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಹಾಗೂ ನಿಯಂತ್ರಣ) ವಿಧೇಯಕ, 2011**

**ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) ಅವರು:–**

ಅ. 2011ನೇ ಸಾಲಿನ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಹಾಗೂ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**8. ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2011**

**(ಉನ್ನತ ಶಿಕ್ಷಣ, ಯೋಜನಾ, ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) ಅವರು:–**

ಅ. 2011ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**9. ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ವಿನಿಯಮನ ಹಾಗೂ ನಿಯಂತ್ರಣ ವಿಧೇಯಕ, 2011**

**ಶ್ರೀ ಸಿ. ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು) ಅವರು:–**

ಅ. 2011ನೇ ಸಾಲಿನ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ವಿನಿಯಮನ ಹಾಗೂ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ. ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**ಕರ್ನಾಟಕ ವಿಧಾನ ಪರಿಷತ್ತು**

**ನೂರ ಹದಿನಾಲ್ಕನೆಯ ಅಧಿವೇಶನ**

**(ಮುಂದುವರೆದ ಉಪವೇಶನ)**

**ಕಾರ್ಯಕಲಾಪಗಳ ಪಟ್ಟಿ**

**ದಿನಾಂಕ: 09–03–2012**

**(ಸಮಯ: ಬೆಳಿಗ್ಗೆ 10.00 ಗಂಟೆಗೆ)**

---

**1. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ಅ) (ಮಾನ್ಯ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು) ಅವರು:–**

ಭಾರತ ಸಂವಿಧಾನದ 151(2)ನೆಯ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2012ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕಪರಿಶೋಧನಾ (ವಾಣಿಜ್ಯ) ವರದಿಯನ್ನು ಸಭೆಯ ಮುಂದಿಡುವುದು.

**ಆ) ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು:–**

01. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2012
02. ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 2012
03. ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2012
04. ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2012
05. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2012
06. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2012

**2. ವಿತ್ತೀಯ ಕಾರ್ಯಕಲಾಪ**

**2012–2013ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

**3. ಪ್ರಶ್ನೋತ್ತರ**

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಒಂಭತ್ತನೆಯ ಪಟ್ಟಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಒಂಭತ್ತನೆಯ ಪಟ್ಟಿ

## ಅನುಬಂಧ – VII

## ಕರ್ನಾಟಕ ವಿಧಾನ ಪರಿಷತ್ತು

## 112ನೇ ಅಧಿವೇಶನ

## ಸಂತಾಪ ಸೂಚನೆ

**ಮಾನ್ಯ ಸಭಾಧ್ಯಕ್ಷರು:**

ಸಮಾಜವಾದಿ ನೇತಾರ, ರಾಜ್ಯದ ಮಾಜಿ ಮುಖ್ಯಮಂತ್ರಿಯವರಾಗಿದ್ದ ಶ್ರೀ ಎಸ್. ಬಂಗಾರಪ್ಪ ಮತ್ತು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಮಂಚನಹಳ್ಳಿ ಮಹದೇವ, ರಾಮಾ ಸಿದ್ಧಲಿಂಗ ನಡೋಣಿ, ಸೋಮಪ್ಪ ಸುವರ್ಣ ಹಾಗೂ ಖ್ಯಾತ ಸಾಹಿತಿ ಎಲ್. ಬಸವರಾಜು ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

### 1. ಎಸ್. ಬಂಗಾರಪ್ಪ

ಎಸ್. ಬಂಗಾರಪ್ಪ ಅವರು 1933 ಅಕ್ಟೋಬರ್ 26ರಂದು ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಕುಬಟೂರಿನಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರಲ್ಲದೆ ಡಿಪ್ಲೋಮೊ ಇನ್ ಸೋಷಿಯಲ್ ಸೈನ್ಸ್ ಸಹ ವ್ಯಾಸಂಗ ಮಾಡಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ದಿವಂಗತರು ನ್ಯಾಯವಾದಿಯಾಗಿದ್ದರಲ್ಲದೆ ಸಮಾಜವಾದಿ ಚಿಂತಕರಾಗಿದ್ದರು.

1962ರಲ್ಲಿ ಪ್ರಜಾ ಸೋಷಿಯಲಿಸ್ಟ್ ಪಕ್ಷಕ್ಕೆ ಸೇರ್ಪಡೆಗೊಳ್ಳುವುದರ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿರುವ ಶ್ರೀಯುತರು ಸೊರಬ ಕ್ಷೇತ್ರದಿಂದ ನಾಲ್ಕು, ಐದನೇ ವಿಧಾನ ಸಭೆಗೆ ಕ್ರಮವಾಗಿ 1967 ಮತ್ತು 1972ರಲ್ಲಿ ಸಂಯುಕ್ತ ಸಮಾಜವಾದಿ ಪಕ್ಷದಿಂದ ಹಾಗೂ ಆರು, ಏಳು, ಎಂಟು ಮತ್ತು ಒಂಭತ್ತನೇ ವಿಧಾನ ಸಭೆಗೆ ಅನುಕ್ರಮವಾಗಿ 1978, 1983, 1985, 1989ರಲ್ಲಿ ಕಾಂಗ್ರೆಸ್ ಪಕ್ಷದ ಮೂಲಕ ಸತತವಾಗಿ ವಿಧಾನಸಭೆಗೆ ಆಯ್ಕೆಯಾಗಿರುತ್ತಾರಲ್ಲದೆ, 1994ರಲ್ಲಿ ಹತ್ತನೇ ವಿಧಾನ ಸಭೆಗೆ ಕರ್ನಾಟಕ ಕಾಂಗ್ರೆಸ್ ಪಕ್ಷದಿಂದ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

1977ರಲ್ಲಿ ರಾಜ್ಯದ ಗೃಹ ಮತ್ತು ಬಂದೀಖಾನೆ ಖಾತೆ ರಾಜ್ಯ ಸಚಿವರಾಗಿ, 1978 ರಿಂದ 1979 ವರೆಗೆ ಲೋಕೋಪಯೋಗಿ ಸಚಿವರಾಗಿ, 1980ರಿಂದ 1981ರ ವರೆಗೆ ಕಂದಾಯ ಮತ್ತು ಕೃಷಿ ಸಚಿವರಾಗಿ, 1985 ರಿಂದ 1987ರ ವರೆಗೆ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿ, 1989 ರಿಂದ 1990ರ ವರೆಗೆ ಕೃಷಿ ಮತ್ತು ತೋಟಗಾರಿಕೆ ಸಚಿವರಾಗಿ ಹಾಗೂ 1990 ರಿಂದ 1992ರ ವರೆಗೆ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿರುತ್ತಾರೆ.

1996ರಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷದಿಂದ ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಸಂಸತ್‌ಗೆ ಆಯ್ಕೆಯಾಗಿದ್ದರಲ್ಲದೆ 1999ರಲ್ಲಿ ಕಾಂಗ್ರೆಸ್ ಪಕ್ಷದಿಂದ ಮತ್ತು 2004ರಲ್ಲಿ ಬಿ.ಜೆ.ಪಿ.ಯಿಂದ ಸಂಸತ್‌ಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. 2005ರಲ್ಲಿ ಸಂಸತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಲ್ಲದೇ, ಅದೇ ಕ್ಷೇತ್ರದ ಉಪ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದಿಂದ ಪುನರಾಯ್ಕೆಗೊಂಡಿದ್ದರು.

ಎಸ್. ಬಂಗಾರಪ್ಪ ಅವರು 1979ರಿಂದ 1980ರವರೆಗೆ ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, 1982ರಲ್ಲಿ ಕರ್ನಾಟಕ ಕ್ರಾಂತಿರಂಗ ಪಕ್ಷವನ್ನು, 1994ರಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷ ಮತ್ತು 1998ರಲ್ಲಿ ಕರ್ನಾಟಕ ವಿಕಾಸ ಪಕ್ಷವನ್ನು ಸ್ಥಾಪಿಸಿ, ಅವುಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಪ್ರಭಾವಿ

ರಾಜಕಾರಣಿಯಾಗಿದ್ದರಲ್ಲದೇ ರಾಜಕೀಯದುದ್ದಕ್ಕೂ ಕಾಂಗ್ರೆಸ್ ಪಕ್ಷ, ಭಾರತೀಯ ಜನತಾಪಕ್ಷ, ಸಮಾಜವಾದಿ ಪಕ್ಷ ಮತ್ತು ಜನತಾದಳ (ಜಾತ್ಯಾತೀತ) ಪಕ್ಷಗಳಲ್ಲಿ ಸೇವೆ ಸಲ್ಲಿಸಿದ ಧೀಮಂತ ನಾಯಕರಾಗಿದ್ದರು.

ರಾಜ್ಯದ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಶ್ರೀಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಗ್ರಾಮೀಣ ನಿರುದ್ಯೋಗಿಗಳಿಗೆ ಸರ್ಕಾರಿ ನೇಮಕಾತಿಯಲ್ಲಿ ಶೇಕಡಾ 15ರಷ್ಟು ಗ್ರಾಮೀಣ ಕೃಪಾಂಕ, ಆರಾಧನಾ, ಆಶ್ರಯ ಹಾಗೂ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸುವ ಮಹತ್ವಾಕಾಂಕ್ಷಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದ ರೂವಾರಿಯಾಗಿದ್ದರು.

ವಿಶಿಷ್ಟ ಸ್ವಭಾವದ, ರಾಜಕೀಯದಲ್ಲಿ ವರ್ಣರಂಜಿತ ವ್ಯಕ್ತಿತ್ವ ಹೊಂದಿದ್ದ ಶ್ರೀ ಎಸ್.ಬಂಗಾರಪ್ಪನವರ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟ ಉಂಟಾಗಿರುತ್ತದೆ.

ಎಸ್. ಬಂಗಾರಪ್ಪನವರು ದಿನಾಂಕ: 25.12.2011ರಂದು ನಿಧನ ಹೊಂದಿರುತ್ತಾರೆ.

## 2. ಮಹದೇವ

ಮಹದೇವ ಅವರು 1964 ಜೂನ್ 15ರಂದು ಮೈಸೂರಿನಲ್ಲಿ ಜನಿಸಿದ್ದು, ಕಾನೂನು ಪದವಿ ಪಡೆದು ವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದರು. 1994ರಲ್ಲಿ ಜನತಾದಳ ಪಕ್ಷಕ್ಕೆ ಸೇರ್ಪಡೆಗೊಳ್ಳುವುದರ ಮೂಲಕ ರಾಜಕೀಯ ಪ್ರವೇಶಿಸಿದ್ದ ದಿವಂಗತರು ಕರ್ನಾಟಕ ಪ್ರದೇಶ ಜನತಾದಳ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುತ್ತಾರೆ.

ಜನತಾದಳ (ಜಾತ್ಯಾತೀತ) ಪಕ್ಷದ ವತಿಯಿಂದ ಕೃಷ್ಣರಾಜನಗರ ಕ್ಷೇತ್ರದಿಂದ 2004ರಲ್ಲಿ ಹನ್ನೆರಡನೇ ವಿಧಾನಸಭೆಗೆ ಆಯ್ಕೆಗಾಗಿ ಸೇವೆ ಸಲ್ಲಿಸಿರುತ್ತಾರೆ.

ಮಹದೇವ ಅವರು ದಿನಾಂಕ: 17.12.2011ರಂದು ನಿಧನ ಹೊಂದಿರುತ್ತಾರೆ.

## 3. ರಾಮಾ ಸಿದ್ದಲಿಂಗ ನಡೋಣಿ

ರಾಮಾ ಸಿದ್ಧಲಿಂಗ ನಡೋಣಿ ಅವರು 1943 ಮಾರ್ಚ್ 20ರಂದು ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕು ಹಾರುಗೇರಿಯಲ್ಲಿ ಜನಿಸಿದ್ದು, ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ. ವೃತ್ತಿಯಲ್ಲಿ ಕೃಷಿಕರು, ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದ ದಿವಂಗತರು ಜನತಾ ಪಕ್ಷದ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಯುತರು, ಜನತಾಪಕ್ಷದಿಂದ 1978ರಲ್ಲಿ ರಾಯಭಾಗ ಕ್ಷೇತ್ರದಿಂದ 6ನೇ ವಿಧಾನಸಭೆಗೆ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರೆ.

ರಾಮಾ ಸಿದ್ದಲಿಂಗ ನಡೋಣಿ ಇವರು ದಿನಾಂಕ: 18.01.2012ರಂದು ನಿಧನ ಹೊಂದಿರುತ್ತಾರೆ.

## 4. ಸೋಮಪ್ಪ ಸುವರ್ಣ

ಸೋಮಪ್ಪ ಸುವರ್ಣ ಅವರು 1929ರ ಅಕ್ಟೋಬರ್ 07ರಂದು ಜನಿಸಿದ್ದು, ಹಿರಿಯ ಮೂಲ ಶಿಕ್ಷಣ ತರಬೇತಿ ಹಾಗೂ ರಾಷ್ಟ್ರ ಭಾಷಾ ಪ್ರವೀಣ ಶಿಕ್ಷಣವನ್ನು ಪಡೆದಿರುತ್ತಾರೆ. ವೃತ್ತಿಯಲ್ಲಿ ವ್ಯಾಪಾರಸ್ಥರು ಮತ್ತು ಕೃಷಿಕರಾಗಿದ್ದ ದಿವಂಗತರು 25 ವರ್ಷಗಳ ಕಾಲ ಮಾಧ್ಯಮಿಕ ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀ ನಾರಾಯಣ ಗುರು ಪ್ರೌಢಶಾಲೆಯ ನಿರ್ದೇಶಕರಾಗಿ ಹಾಗೂ ಬಿಲ್ಲವ ಸಮಾಜ ಸೇವಾ ಸಂಘ ಮತ್ತು ತಾಲ್ಲೂಕು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

ದಿವಂಗತರು 1989ರಲ್ಲಿ ಮೂಡಬಿದ್ರೆ ಕ್ಷೇತ್ರದಿಂದ 9ನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಸೋಮಪ್ಪ ಸುವರ್ಣ ಅವರು ದಿನಾಂಕ: 29.01.2012ರಂದು ನಿಧನ ಹೊಂದಿರುತ್ತಾರೆ.

**5. ಎಲ್. ಬಸವರಾಜು**

ಎಲ್. ಬಸವರಾಜು ಅವರು 1919ನೇ ಅಕ್ಟೋಬರ್ 7ರಂದು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಇಡಗನೂರಿನಲ್ಲಿ ಜನಿಸಿದ್ದು, ಎಂ.ಎ. ಪದವೀಧರರಾಗಿದ್ದರು.

ಶ್ರೀಯುತರು ದಾವಣಗೆರೆ ಡಿಆರ್‌ಎಂ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು.

ನೇರ, ನಡೆ-ನುಡಿಯ ವಿಚಾರಶೀಲ ವಿಧ್ವಾಂಸರಾಗಿದ್ದ ದಿವಂಗತರು ಕವಿ ಮತ್ತು ಸಂಶೋಧಕರಾಗಿದ್ದು ಸುಮಾರು 56 ಕೃತಿಗಳನ್ನು ರಚಿಸಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ನಾಡೋಜ ಪ್ರಶಸ್ತಿಗಳು ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಶ್ರೀಯುತರು ಭಾಜನರಾಗಿದ್ದರು. ಅಖಿಲ ಭಾರತ 75ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀಯುತರು ವಹಿಸಿದ್ದರು.

ಎಲ್. ಬಸವರಾಜು ಅವರು ದಿನಾಂಕ: 29.01.2012ರಂದು ನಿಧನ ಹೊಂದಿರುತ್ತಾರೆ.

**(ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ ನಂತರ)**

ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**(ಮೌನ ಆಚರಿಸಿದ ನಂತರ)**

ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು

ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 443
2. ಸದಸ್ಯರ ಹೆಸರು : ಡಾ॥ ಶ್ರೀನಾಥ್
3. ಉತ್ತರಿಸಬೇಕಾದ ದಿನಾಂಕ : 17–03–2012
4. ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಮೆಟ್ರೋ ರೈಲು ಕಾಮಗಾರಿ ಆಗುತ್ತಿರುವ ಪ್ರದೇಶಗಳ ರಸ್ತೆಗಳು ಹದಗೆಟ್ಟು ವಾಹನ ಸಂಚಾರಕ್ಕೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಬೆಂಗಳೂರು ಮೆಟ್ರೋ ರೈಲು ಕಾಮಗಾರಿ ನಡೆಯುವ ರಸ್ತೆಗಳಲ್ಲಿ ಕಾಮಗಾರಿಗೆ ಬೇಕಾದಷ್ಟು ಸ್ಥಳವನ್ನು ಮಾತ್ರ ವಶಪಡಿಸಿಕೊಂಡು, ಅದಕ್ಕೆ ಬ್ಯಾರಿಕೇಡ್ ಹಾಕಿ, ಸಾಧ್ಯವಿದ್ದಲ್ಲೆಲ್ಲ ಎರಡೂ ಕಡೆಗಳಲ್ಲಿ ವಾಹನಗಳ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಡಲಾಗಿದೆ.<br>ಇದಲ್ಲದೆ ಮೆಟ್ರೋ ಕಾಮಗಾರಿ ಮುಕ್ತಾಯವಾದ ನಂತರ, ಬ್ಯಾರಿಕೇಡನ್ನು ತೆಗೆದು, ರಸ್ತೆಯನ್ನು ಪುನರ್ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ರಸ್ತೆಗಳು ಮೊದಲಿದ್ದುದಕ್ಕಿಂತ ಹೆಚ್ಚಿಗೆ ಅಗಲವಾಗಿ ವಾಹನಗಳ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಟಕ್ಕೆ ಅನುಕೂಲವಾಗಿರುವುದು ಕಂಡು ಬಂದಿದೆ. ಈಗಾಗಲೇ ಮೆಟ್ರೋ ಕಾಮಗಾರಿಯಿಂದ ಸಿ.ಎಂ.ಹೆಚ್. ರಸ್ತೆ, ಎಂ.ಕೆ.ಕೆ. ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ ಇವುಗಳು ಅಗಲಗೊಂಡಿವೆ. |
| ಆ | ಮೆಟ್ರೋ ರೈಲು ನಿರ್ಮಾಣದ ಹಂತದಲ್ಲೇ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ರಸ್ತೆ ಅಗಲೀಕರಣ ಹಾಗೂ ಉತ್ತಮ ಮಟ್ಟದ ಡಾಂಬರ್: ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿ ಸುಗಮವಾಹನ ಸಂಚಾರಕ್ಕೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು? | 1. ಬಿ.ಎಂ.ಆರ್.ಸಿ.ಎಲ್. ನಿಂದ ಕೈಗೊಳ್ಳಲಾದ ರಸ್ತೆ ರಿಪೇರಿ ಕೆಲಸದ ವಿವರಗಳು ಕೆಳಗಿನಂತಿವೆ. |

| ಕ್ರ. ಸಂ. | ರಸ್ತೆಯ ಹೆಸರು | ಉದ್ದ (ಕಿ.ಮೀ.ಗಳಲ್ಲಿ) | ಮಾಡಿದ ವೆಚ್ಚ (ಕೋಟಿಗಳಲ್ಲಿ) | ಷರಾ |
|---|---|---|---|---|
| | ರೀಚ್–1 | | | |
| 1 | ಸಿ.ಎಂ.ಹೆಚ್.ರಸ್ತೆ | 1.30 | 2.07 | |
| 2 | ಸ್ವಾಮಿ ವಿವೇಕಾನಂದ ರಸ್ತೆ | 1.06 | 2.84 | |
| 3 | 100 ಅಡಿ ರಸ್ತೆ ಇಂದಿರಾನಗರ | 0.70 | 1.62 | |
| 4 | ಎಂ.ಜಿ. ರಸ್ತೆ | 1.50 | 2.12 | |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|

| | | | | |
|---|---|---|---|---|
| | ರೀಚ್–2 | | | |
| 1 | ಮಾಗಡಿ ರಸ್ತೆ ಕುಷ್ಠ ರೋಗ ಆಸ್ಪತ್ರೆಯಿಂದ ಮೈಸೂರು ರಸ್ತೆ (ನಾಯಂಡಹಳ್ಳಿ) ವರೆಗೆ | 9.2 | 9.00 | ಸದರಿ ವೆಚ್ಚವು ರಸ್ತೆ ಅಗಲೀಕರಣ, ಪಾದಚಾರಿ ರಸ್ತೆ ನಿರ್ಮಾಣ ಮತ್ತು ಚರಂಡಿ ಕಾಮಗಾರಿಗಳ ಹಾಗೂ ರಸ್ತೆ ರಿಪೇರಿ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ. |

| | | | | |
|---|---|---|---|---|
| | ರೀಚ್–3 | | | |
| 1 | ರೀಚ್–3ಎ | 4.40 | 19.45<br>14.07 | |
| | ಯಶವಂತಪುರ ನಿಲ್ದಾಣದಿಂದ ಪೀಣ್ಯವರೆಗೆ | 1.405 | | |
| 2 | ಮೊಹಮೊದನ್ ಬ್ಲಾಕ್, ಎಂ.ಕೆ.ಕೆ. ರಸ್ತೆ ಮಹಾಲಕ್ಷ್ಮಿ ಸ್ಟೇಷನ್, ಸೋಪ್ ಫ್ಯಾಕ್ಟ್ರಿ ಸ್ಟೇಷನ್ ಯಿಂದ ಯಶವಂತಪುರ ಸ್ಟೇಷನ್ | 4.4 | 15.13 | ಕಾಮಗಾರಿ ಮುಗಿದಿದೆ |

| | | | | |
|---|---|---|---|---|
| | ರೀಚ್–4 | | | |
| 1 | ಕನಕಪುರ ರಸ್ತೆ | 3.3 | 3.29 | ರೂ.3.29 ಕೋಟಿಗಳು ಅಂದಾಜು ಮೊತ್ತವಾಗಿದ್ದು, ಶೇಕಡಾ 30ರಷ್ಟನ್ನು ಮೆಟ್ರೋ ವತಿಯಿಂದ ಭರಿಸಲಾಗಿದೆ. ಉಳಿದ ಶೇಕಟಾ 50ರಷ್ಟನ್ನು ಬಿ.ಬಿ.ಎಂ.ಪಿ. ವತಿಯಿಂದ ಭರಿಸಲಾಗುವುದು. ಈಗಾಗಲೇ ಶೇಕಡಾ 90ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಈ ರಸ್ತೆಯಲ್ಲಿ BWSSB ಕಾಮಗಾರಿ ನಡೆಯುತ್ತಿದ್ದು, ಇದು ಪೂರ್ಣಗೊಂಡ ನಂತರ ಉಳಿದ ಶೇಕಡ 40ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. |
| 2 | ಆರ್.ವಿ. ರಸ್ತೆಯ ಸಮಾನಾಂತರ ರಸ್ತೆಗಳು | 1.5 ಮತ್ತು 1.8 | 0.08 | |

## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 112
2. ಸದಸ್ಯರ ಹೆಸರು : ಶ್ರೀ ಸಿದ್ದರಾಜು
3. ಉತ್ತರಿಸಬೇಕಾದ ದಿನಾಂಕ : 30-03-2012
4. ಉತ್ತರಿಸಬೇಕಾದ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಒಟ್ಟು 45200 ಸರ್ಕಾರಿ ಪ್ರಾಥಮಿಕ, 4437 ಸರ್ಕಾರಿ ಪ್ರೌಢ ಶಾಲೆಗಳು ಮತ್ತು 1202 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇರುತ್ತವೆ. |
| ಆ | ಎಲ್ಲಾ ಶಾಲೆ ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಮತ್ತು ಮಹಿಳಾ ಶಿಕ್ಷಕಿಯರಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಮಾಡಲಾಗಿದೆಯೇ; | ಈಗಾಗಲೇ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆ. |
| ಇ | ಇಲ್ಲವಾದಲ್ಲಿ ಇದರ ಹೊಣೆ ಯಾರದು ಮತ್ತು ಇಂತಹದೊಂದು ಅವ್ಯವಸ್ಥೆಗೆ ಕಾರಣರಾದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು? | ಶೌಚಾಲಯಗಳನ್ನು ಎಲ್ಲಾ ಶಾಲೆ ಕಾಲೇಜುಗಳಲ್ಲಿ ಒದಗಿಸುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

**ಇಡಿ 118 ಯೋಸಕ 2012**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 891
2. ಸದಸ್ಯರ ಹೆಸರು : ಶ್ರೀ ತೋಂಟದಾರ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 17–03–2012
4. ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ನೋಂದಾಯಿಸಲ್ಪಟ್ಟಿರುವ ಸಣ್ಣ ಪತ್ರಿಕೆಗಳ ಸಂಖ್ಯೆ ಎಷ್ಟು? ಸಣ್ಣ ಪತ್ರಿಕೆಗಳ ಹೆಸರು, ಸ್ಥಳ ಮುಂತಾದ ವಿವರ ನೀಡುವುದು; | ವಾರ್ತಾ ಇಲಾಖೆಯ ಅಂಗೀಕೃತ ಪಟ್ಟಿಯಲ್ಲಿರುವಂತೆ ರಾಜ್ಯದಲ್ಲಿ ನೋಂದಾಯಿಸಲ್ಪಟ್ಟ ಸಣ್ಣ ಪತ್ರಿಕೆಗಳ ಸಂಖ್ಯೆ ಒಟ್ಟು 468, ವಿವರಗಳು ಅನುಬಂಧದಲ್ಲಿ ಲಗತ್ತಿಸಿದೆ. |
| (ಆ) | ಇವುಗಳ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು; (ವಿವರ ನೀಡುವುದು); | ಸಣ್ಣ ಪತ್ರಿಕೆಗಳ ಅಭಿವೃದ್ಧಿಗಾಗಿ ಸರ್ಕಾರವು ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.<br>(1) ಸಣ್ಣ ಪತ್ರಿಕೆಗಳ ಜಾಹೀರಾತು ದರವನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ಶೇಕಡಾ 12ರ ಪ್ರಮಾಣದಲ್ಲಿ ಹೆಚ್ಚಿಸಲಾಗುತ್ತಿದೆ.<br>(2) ಸಣ್ಣ ಪತ್ರಿಕೆಗಳಿಗೆ ಅನುಕೂಲವಾಗುವಂತೆ ಹೊಸ ಜಾಹೀರಾತು ನೀತಿಯ ಕರಡು ತಯಾರಿಸಲಾಗಿದೆ.<br>(3) ರೂ. 50.00 ಲಕ್ಷ ಮೌಲ್ಯದೊಳಗಿನ ದಿನನಿತ್ಯದ ಟೆಂಡರ್ ಜಾಹೀರಾತುಗಳನ್ನು ನೀಡಲಾಗುತ್ತಿದೆ.<br>(4) ಸಾಂದರ್ಭಿಕವಾಗಿ (ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ರಾಜ್ಯೋತ್ಸವ ಇತ್ಯಾದಿ) ಆಕರ್ಷಕ ಜಾಹೀರಾತುಗಳನ್ನು ಬಿಡುಗಡೆ ಮಾಡಲಾಗುತ್ತಿದೆ.<br>(5) ಕಲೆ, ಸಾಹಿತ್ಯ, ಕ್ರೀಡೆ ವಿಜ್ಞಾನ ಮತ್ತು ಸಂಸ್ಕೃತಿ ವಿಷಯಗಳಿಗೆ ಮೀಸಲಾದ ಪತ್ರಿಕೆಗಳಿಗೆ ಪ್ರತಿ ತಿಂಗಳು ಪ್ರೋತ್ಸಾಹ ರೂಪದಲ್ಲಿ ಜಾಹೀರಾತು ನೀಡಲಾಗುತ್ತಿದೆ.<br>(6) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಪತ್ರಕರ್ತರು ಪ್ರಕಟಿಸುವ ಪತ್ರಿಕೆಗಳ ಪ್ರತಿ ಸಂಚಿಕೆಗೂ (ದಿನಪತ್ರಿಕೆಗಳಿಗೆ ಮಾತ್ರ ಪ್ರತಿ ತಿಂಗಳು ಅರ್ಧ ಪುಟ) ಒಂದು ಪುಟ ಜಾಹೀರಾತು ಬಿಡುಗಡೆ ಮಾಡಲಾಗುತ್ತಿದೆ. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಇ) | ಸಣ್ಣ ಪತ್ರಿಕೆಗಳಿಗೆ ಸರ್ಕಾರ ಜಾಹೀರಾತು ನಿಡುವಲ್ಲಿ ಅನುಸರಿಸುತ್ತಿರುವ ನಿಯಮಗಳೇನು; (ವಿವರ ನೀಡುವುದು); | ಸಣ್ಣ ಪತ್ರಿಕೆಗಳಿಗೆ ಸರ್ಕಾರದ ಜಾಹೀರಾತು ನೀಡಲು ಅನುಸರಿಸುತ್ತಿರುವ ನಿಯಮಗಳು:-<br>(1) ಪತ್ರಿಕೆಯು ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ಸ್ ಫಾರ್ ಇಂಡಿಯಾ ಕಛೇರಿಯಲ್ಲಿ ನೋಂದಣಿಯಾಗಿರಬೇಕು.<br>(2) ಕನಿಷ್ಠ ಒಂದು ವರ್ಷದ ಪ್ರಕಟಣಾ ಅವಧಿಯನ್ನು ಪೂರೈಸಿರಬೇಕು.<br>(3) ಪತ್ರಿಕೆಯ ಪ್ರತಿ ಸಂಚಿಕೆಯು ಕನಿಷ್ಠ 1000 ಪ್ರತಿಗಳ ಪ್ರಸಾರ ಸಂಖ್ಯೆ ಹೊಂದಿರಬೇಕು.<br>(4) ಈ ಕುರಿತು ಸಂಬಂಧಪಟ್ಟ ಜಿಲ್ಲಾ ಮಾಧ್ಯಮ ಸಮಿತಿಯಿಂದ ವರದಿಯನ್ನು ತರಿಸಿಕೊಳ್ಳಲಾಗುವುದು. |
| (ಈ) | ನಿರಂತರವಾಗಿ ಪ್ರಕಟಗೊಳ್ಳುವ ದಿನ ಪತ್ರಿಕೆಗಳು, ವಾರ ಪತ್ರಿಕೆಗಳು ಮತ್ತು ಮಾಸ ಪತ್ರಿಕೆಗಳಿಗೆ ಖಾಯಂ ಜಾಹೀರಾತು ನೀಡುವ ಕುರಿತು ಸರ್ಕಾರದ ನಿಯಮಗಳೇನು? (ವಿವರ ನೀಡುವುದು); | ಕ್ರಮ ಸಂಖ್ಯೆ (ಇ) ರಲ್ಲಿ ವಿವರಿಸಿರುವಂತೆ |

ಕಸಂವಾಪ್ರ 22 ಪಿಐಪಿ 2012

ಡಿ.ವಿ. ಸದಾನದಂಗೌಡ
ಮುಖ್ಯಮಂತ್ರಿಗಳು

## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 578
2. ಸದಸ್ಯರ ಹೆಸರು : ಶ್ರೀ ಖಾಜಿ ಅರಶದ ಅಲಿ
3. ಉತ್ತರಿಸುವ ದಿನಾಂಕ : 17–03–2012
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | (ಅ) ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಕಳೆದ 3 ವರ್ಷಗಳಲ್ಲಿ ನೇಮಕಗೊಂಡ ಎಲ್ಲಾ ಶ್ರೇಣಿಯ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವರ್ಷಾವಾರು, ಇಲಾಖೆವಾರು ಮತ್ತು ಹುದ್ದೆಯ ಶ್ರೇಣಿವಾರು ವಿವರ ನೀಡುವುದು); | ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಕಳೆದ 3 ವರ್ಷಗಳಲ್ಲಿ ನೇಮಕಗೊಂಡ ಎಲ್ಲಾ ಶ್ರೇಣಿಯ ಸಿಬ್ಬಂದಿಗಳ ಒಟ್ಟು ಸಂಖ್ಯೆ:27,481 (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ); |
| | (ಆ) ಈ ನೇಮಕಾತಿಯ ಮೀಸಲಾತಿ ನಿಯಮದಂತೆ ಕಳೆದ ಮೂರು ವರ್ಷಗಳಲ್ಲಿ ಪ್ರವರ್ಗ 2ಬಿ ಯಡಿಯಲ್ಲಿ ನೇಮಕಗೊಂಡ ಅಭ್ಯರ್ಥಿಗಳ ಸಂಖ್ಯೆ ಎಷ್ಟು? (ಇಲಾಖಾವಾರು, ವರ್ಷಾವಾರು ಮತ್ತು ಹುದ್ದೆಗಳ ಶ್ರೇಣಿವಾರು ವಿವರ ನೀಡುವುದು); | ಕಳೆದ 3 ವರ್ಷಗಳಲ್ಲಿ ಪ್ರವರ್ಗ 2ಬಿ ರಡಿಯಲ್ಲಿ ನೇಮಕಗೊಂಡ ಅಭ್ಯರ್ಥಿಗಳ ಒಟ್ಟು ಸಂಖ್ಯೆ:1,120 (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ). |

ಸಂಖ್ಯೆ: ಸಿಆಸುಇ 12 ಸೇವನೇ 2012

ಮುಖ್ಯಮಂತ್ರಿಗಳು

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1081
2. ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ವಿಧಾನಸಭೆಯಿಂದ ಚುನಾಯಿತರಾದವರು)
3. ವಿಷಯ : ರಾಜ್ಯದಲ್ಲಿ ಪ್ರವಾಸಿಗರ ದಟ್ಟಣೆ ಹಾಗೂ ಜಾಲದ ರಸ್ತೆ ಗುಣಮಟ್ಟದ ಬಗ್ಗೆ.
3. ಉತ್ತರಿಸಬೇಕಾದ ದಿನಾಂಕ : 17–03–2012
4. ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರವಾಸಿಗರ ದಟ್ಟಣೆಯನ್ನು ಯಾವ ರೀತಿ ವಿಭಜಿಸಲಾಗಿದೆ; | ರಾಜ್ಯದಲ್ಲಿ ಪ್ರವಾಸಿಗರ ದಟ್ಟಣೆಯನ್ನು ಈ ಕೆಳಗಿನಂತೆ ವಿಭಜಿಸಲಾಗಿದೆ.<br>1. ಧಾರ್ಮಿಕ ಪ್ರವಾಸಿ ವಲಯ<br>2. ಕರಾವಳಿ ಪ್ರವಾಸಿ ವಲಯ<br>3. ಪರಂಪರಾ ಪ್ರವಾಸಿ ವಲಯ<br>4. ವನ್ಯಧಾಮ ಪ್ರವಾಸಿ ವಲಯ<br>5. ಪರಿಸರ ಪ್ರವಾಸಿ ವಲಯ<br>6. ವೆಲ್‌ನೆಸ್ ಪ್ರವಾಸಿ ವಲಯ<br>7. ಗಿರಿಧಾಮ ಪ್ರವಾಸಿ ವಲಯ ಮುಂತಾದವುಗಳೆಂದು ವಿಭಜಿಸಲಾಗಿದೆ.<br>The tourist traffic in the state is classified as follows:<br>1. Religious Tourism Zone<br>2. Coastal Tourism Zone<br>3. Heritage Tourism Zone<br>4. Wildlife Tourism Zone<br>5. Eco Tourism Zone<br>6. Wellness Tourism Zone<br>7. Hills Station Tourism Zone etc., |
| (ಆ) | ರಾಜ್ಯದಲ್ಲಿ ಇರುವ ವಿವಿಧ ಪ್ರವಾಸಿ ಜಾಲದ ಕೇಂದ್ರಗಳ ಸಂಖ್ಯೆ ಎಷ್ಟು ಹಾಗೂ | ರಾಜ್ಯದಲ್ಲಿ ಗುರುತಿಸಿರುವ ಪ್ರವಾಸಿ ಕೇಂದ್ರಗಳ ಸಂಖ್ಯೆ: 314 ಪಟ್ಟಿ ಲಗತ್ತಿಸಿದೆ. ರಸ್ತೆಗಳ ಉದ್ದದ ವಿವರಗಳು ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| | ಯಾವುವು; ಜಾಲ ರಸ್ತೆಯ ಉದ್ದ ಎಷ್ಟು; (ವಿವರ ನೀಡುವುದು) | Identified Tourist Spots in the State is 314. List is enclosed. Details of Road Networking does not come under the purview of the Tourism Department. |
| (ಇ) | ವಿವಿಧ ಪ್ರವಾಸಿ ಜಾಲದ ರಸ್ತೆಯ ಗುಣಮಟ್ಟ ಯಾವ ರೀತಿಯಲ್ಲಿದೆ; | ಈ ವಿಷಯವು ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.<br>This subject does not come under the purview of Tourism Department. |
| (ಈ) | ಈ ರಸ್ತೆಗಳ ಗುಣಮಟ್ಟವನ್ನು ಸುಧಾರಿಸಲು ಪ್ರವಾಸೋದ್ಯಮ ಇಲಾಖೆಯಿಂದ ತೆಗೆದು ಕೊಂಡಿರುವ ಕ್ರಮಗಳೇನು; | ಕಳೆದ ಮೂರು ವರ್ಷಗಳಿಂದ ಆಯವ್ಯಯದಲ್ಲಿ ಪ್ರವಾಸಿ ತಾಣಗಳ ಕೂಡುರಸ್ತೆಗಳ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆಗೆ ಅನುದಾನ ಒದಗಿಸುತ್ತಿದ್ದು, ಈ ಅನುದಾನದಿಂದ ಅಗತ್ಯವಾಗಿ ಅಭಿವೃದ್ಧಿ ಪಡಿಸಬೇಕಾಗಿರುವ ಕೂಡು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ಮೂಲಕ ಅಭಿವೃದ್ಧಿಪಡಿಸಲಾಗುತ್ತಿದೆ.<br>Grants are being provided to the Department of Tourism in the Annual Budgets for the last 3 years to develop link roads to tourist spots. Link roads to be developed are being taken up through the Public Works Department out of the grants provided. |
| (ಉ) | ಸದರಿ ರಸ್ತೆಗಳ ಜಾಲಗಳನ್ನು ಕಾಂಕ್ರೀಟ್ ರಸ್ತೆಗಳನ್ನಾಗಿ ಪರಿವರ್ತಿಸಲು ಪಿಪಿಪಿ ಆಧಾರದ ಮೇಲೆ ಕೈಗೊಳ್ಳಲು ಇಲಾಖೆಯು ಅನುಸರಿಸುತ್ತಿರುವ ಕ್ರಮಗಳೇನು? | ಈ ವಿಷಯವು ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.<br>This subject does not come under the purview of Tourism Department. |

ಸಂಖ್ಯೆ: ಕಸಂವಾಪ್ರ 69 ಪ್ರವಾವಿ 2012

ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ
ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 790
2. ಸದಸ್ಯರ ಹೆಸರು : ಶ್ರೀ ಆರ್.ವಿ. ವೆಂಕಟೇಶ್
3. ಉತ್ತರಿಸಬೇಕಾದ ದಿನಾಂಕ : 17-03-2012
4. ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಸರ್ಕಾರಿ ನೌಕರರು ನೆರೆಹೊರೆಯ ರಾಜ್ಯಗಳಲ್ಲಿನ ನೌಕರರಿಗಿಂತ ಕಡಿಮೆ ಸಂಬಳ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಸರ್ಕಾರಿ ನೌಕರರು ನೆರೆಹೊರೆಯ ರಾಜ್ಯಗಳಲ್ಲಿನ ನೌಕರರಿಗಿಂತ ಕಡಿಮೆ ಸಂಬಳ ಪಡೆಯುತ್ತಿರುವುದಾಗಿ ರಾಜ್ಯ ಸರ್ಕಾರಿ ನೌಕರರ ಸಂಘವು ಸರ್ಕಾರದ ಗಮನಕ್ಕೆ ತಂದಿರುತ್ತದೆ. |
| (ಆ) | ಈ ತಾರತಮ್ಯ ಸರಿದೂಗಿಸಲು ಸರ್ಕಾರವು ವೇತನ ಆಯೋಗವನ್ನು ರಚಿಸುವುದೇ; | ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿಗಳ ಪರಿಷ್ಕರಣೆ ಬಗ್ಗೆ ಪರಿಶೀಲಿಸಲು 2012-13ರ ಆಯವ್ಯಯ ಭಾಷಣದಲ್ಲಿ ವೇತನ ಸಮಿತಿಯನ್ನು ರಚಿಸಲಾಗುವುದು ಎಂದು ಘೋಷಿಸಲಾಗಿದೆ. |
| (ಇ) | ಹಾಗಿದ್ದಲ್ಲಿ, ಸರ್ಕಾರಕ್ಕೆ ಉಂಟಾಗುವ ಆರ್ಥಿಕ ಹೊರೆ ಎಷ್ಟು; ಇದಕ್ಕಾಗಿ ತಗಲಬಹುದಾದ ವೆಚ್ಚವನ್ನು ಭರಿಸಲು ಯಾವ ರೀತಿಯಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲಾಗಿದೆ? | ವೇತನ ಸಮಿತಿಯು ರಚನೆಯಾದ ನಂತರ ಈ ಎಲ್ಲಾ ಅಂಶಗಳ ಬಗ್ಗೆ ವೇತನ ಸಮಿತಿಯು ಪರಿಶೀಲಿಸುವುದು. |

ಸಂಖ್ಯೆ: ಆಇ 18 ಎಸ್ಆರ್‌ಪಿ 2012

**ಡಿ.ವಿ. ಸದಾನಂದ ಗೌಡ**
ಮುಖ್ಯಮಂತ್ರಿಗಳು.

## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 867
2. ಸದಸ್ಯರ ಹೆಸರು : ಡಾ॥ ದೊಡ್ಡರಂಗೇಗೌಡ
3. ಉತ್ತರಿಸಬೇಕಾದ ದಿನಾಂಕ : 17–03–2012
4. ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯ ಲೋಕಸೇವಾ ಆಯೋಗದವರು ನಡೆಸುತ್ತಿರುವ ವಿವಿಧ ಹುದ್ದೆಗಳ ನೇಮಕಾತಿಗಾಗಿ ಕೇವಲ ಆನ್‌ಲೈನ್ ಮುಖಾಂತರವೇ ಅರ್ಜಿ ಸಲ್ಲಿಸುವ ಪದ್ಧತಿಯನ್ನು ಜಾರಿಗೆ ತರಲಾಗಿದೆಯೇ; ಅದೇ ರೀತಿ ವಿವಿಧ ಇಲಾಖಾ ಪರೀಕ್ಷೆಗಳಿಗೂ ಕೂಡಾ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಪದ್ಧತಿ ಜಾರಿಗೆ ತರಲಾಗಿದೆಯೇ; ಈ ಪದ್ಧತಿಯನ್ನು ಜಾರಿಗೆ ತರಲಾಗಿದೆಯೇ; ಈ ಪದ್ಧತಿಯನ್ನು ಜಾರಿಗೆ ತರಲು ಲೋಕಸೇವಾ ಆಯೋಗವು ಸರ್ಕಾರದ ಸಹಮಿತಿಯನ್ನು ಪಡೆದಿದೆಯೇ; (ವಿವರ ಒದಗಿಸುವುದು); | ಕರ್ನಾಟಕ ಲೋಕಸೇವಾ ಆಯೋಗವು, ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ಮತ್ತು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಮುಖ್ಯ ಪರೀಕ್ಷೆಗಳನ್ನು ಹೊರತುಪಡಿಸಿ ಉಳಿದಂತೆ, ರಾಜ್ಯ ಸಿವಿಲ್ ಸೇವೆಗಳ ಗ್ರೂಪ್–ಎ, ಬಿ ಮತ್ತು ಸಿ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ನೇಮಕಾತಿ ಮಾಡಲಾಗುತ್ತಿದೆ. ಸೇವಾನಿರತ ಅಧಿಕಾರಿ ಮತ್ತು ನೌಕರರಿಗೂ ಸಹ ಇಲಾಖಾ ಪರೀಕ್ಷೆಗಳಿಗೆ ಆನ್‌ಲೈನ್ ಮೂಲಕವೇ ಮಾಡಲಾಗುತ್ತಿದೆ. ಕರ್ನಾಟಕ ಲೋಕಸೇವಾ ಆಯೋಗದ (ಪ್ರಕಾರ್ಯಗಳು) ನಿಯಮಗಳು 1973ರಲ್ಲಿ ನಿರ್ದಿಷ್ಟಪಡಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮತ್ತು ನೇರ ನೇಮಕಾತಿಗಳಿಗೆ ಅರ್ಜಿಗಳನ್ನು ಸಲ್ಲಿಸುವ ವಿಧಾನವನ್ನು ನಿಗದಿಪಡಿಸುವುದು ಆಯೋಗದ ವಿವೇಚನೆಗೆ ಒಳಪಟ್ಟಿರುತ್ತದೆ. |
| (ಆ) | ಈ ಆನ್‌ಲೈನ್ ಪದ್ಧತಿ ಜಾರಿಯಿಂದ ಗ್ರಾಮಾಂತರ ಪ್ರದೇಶದ ನಿರುದ್ಯೋಗಿ ಯುವಕರಿಗೆ, ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುವ ಸರ್ಕಾರಿ ನೌಕರರಿಗೆ ಭಾರೀ ಅನಾನುಕೂಲ ಉಂಟಾಗಿದ್ದು, ಗ್ರಾಮೀಣ ಪ್ರದೇಶದವರು ಎಂದಿನಂತೆ ಮುದ್ರಿತ ಫಾರಂಗಳಲ್ಲಿ ಅರ್ಜಿ ಸಲ್ಲಿಸುವ ವಿಧಾನವನ್ನು ಜಾರಿಗೊಳಿಸಲಾಗುವುದೇ; | |
| (ಇ) | ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದವರೂ ಕೂಡಾ ಅದನ್ನು ಡೌನ್ ಲೋಡ್ ಮಾಡಿ ಅದರ ಪ್ರತಿ ತೆಗೆದುಕೊಂಡು ಅದನ್ನು ಅಂಚೆ ಮೂಲಕ ಕೆಲವು ಲಗತ್ತುಗಳೊಡನೆ ಕಳುಹಿಸ ಬೇಕಾಗಿರುವುದರಿಂದ, ಇದೊಂದು ಅವೈಜ್ಞಾನಿಕ ಪದ್ಧತಿಯಾಗುವುದಿಲ್ಲವೇ; | ಆಯೋಗವು ಅಧಿಸೂಚಿಸುವ ವಿವಿಧ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಎಲ್ಲಾ ವಿವರಗಳನ್ನು ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿ ನಂತರ ಪೂರ್ಣಗೊಂಡ ಅರ್ಜಿಯ ಒಂದು ಪ್ರತಿಯನ್ನು ತಮ್ಮ ಮಾಹಿತಿಗಾಗಿ ಇಟ್ಟುಕೊಳ್ಳಬೇಕೆಂದು ನಿಗದಿಪಡಿಸಿದ್ದು, ಈ ಪ್ರತಿಯೊಂದಿಗೆ ಅಡಕಗಳನ್ನು ಲಗತ್ತಿಸಿ ಸಲ್ಲಿಸುವ ಅಗತ್ಯತೆಯಿರುವುದಿಲ್ಲ. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಈ) | ಹಾಲ್ ಟಿಕೇಟ್‌ಗಳನ್ನು ಕೂಡಾ ಡೌನ್ ಲೋಡ್ ಮಾಡಿ ಪಡೆಯಬೇಕಾಗಿದ್ದು ಇದಕ್ಕಾಗಿ ಗ್ರಾಮೀಣ ನಿರುದ್ಯೋಗಿಗಳು, ಸರ್ಕಾರಿ ನೌಕರರು ಜಿಲ್ಲಾ ಅಥವಾ ತಾಲ್ಲೂಕು ಕೇಂದ್ರಗಳಿಗೆ ಒಂದು ಇಂಟರ್‌ನೆಟ್‌ನವರು ವಿಧಿಸಿರುವ ದುಬಾರಿ ಶುಲ್ಕ ನೀಡಿ ಶೋಷಣೆಗೆ ಒಳಗಾಗುತ್ತಿದ್ದು ಈ ಪದ್ಧತಿಯನ್ನು ನಿಲ್ಲಿಸಲಾಗುವುದೇ? | ಅರ್ಜಿ ಸಲ್ಲಿಸುವ ಮತ್ತು ಪ್ರವೇಶ ಪತ್ರಗಳ ಡೌನ್ ಲೋಡ್ ಮಾಡಿಕೊಳ್ಳುವ ಪ್ರಕ್ರಿಯೆಗೆ ಸೈಬರ್ ಕೆಫೆ/ಇಂಟರ್‌ನೆಟ್‌ರವರು ಪ್ರತಿ ಗಂಟೆಗೆ ರೂ.15 ರಿಂದ 20ಗಳನ್ನು ವಿಧಿಸುತ್ತಿರುವುದು ಚಾಲ್ತಿಯಲ್ಲಿದೆ. |

ಸಂಖ್ಯೆ: ಸಿಆಸುಇ 20 ಸೇವನೇ 2012

**ಡಿ.ವಿ. ಸದಾನಂದ ಗೌಡ**
ಮುಖ್ಯಮಂತ್ರಿಗಳು

**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 775 |
| 2. | ಸದಸ್ಯರ ಹೆಸರು | : ಶ್ರೀ ಅಶ್ವತ್ ನಾರಾಯಣ |
| 3. | ಉತ್ತರಿಸಬೇಕಾದ ದಿನಾಂಕ | : 17–03–2012 |
| 4. | ಉತ್ತರಿಸಬೇಕಾದ ಸಚಿವರು | : ಮಾನ್ಯ ಮುಖ್ಯಮಂತ್ರಿಗಳು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಅರಮನೆ ಮೈದಾನದಲ್ಲಿ ನಡೆಯುವ ಮದುವೆ ಹಾಗೂ ಇನ್ನಿತರೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅನುಮತಿ ಪಡೆಯಬೇಕಾಗಿದೆಯೇ; ಹಾಗಿದ್ದರೆ ಬಾಡಿಗೆ ಆಧಾರದಲ್ಲಿ ನೀಡಲಾಗುವುದೇ; ಬಾಡಿಗೆ ನಿಗದಿಪಡಿಸಲು ಇರುವ ಮಾನದಂಡವೇನು; (ವಿವರ ನೀಡುವುದು) | ಬೆಂಗಳೂರು ಅರಮನೆ ಮೈದಾನದಲ್ಲಿ ತಾತ್ಕಾಲಿಕ ಕಾರ್ಯಕ್ರಮಗಳನ್ನು ನಡೆಸಲು ಅರಮನೆ ವಾರಸುದಾರರು ಸಲ್ಲಿಸುವ ಕೋರಿಕೆ/ ಅರ್ಜಿಗಳನ್ನು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸೃಜಿಸಲಾಗಿರುವ ಏಕ ಗವಾಕ್ಷಿ ಸಮಿತಿಯು ಸರ್ವೋಚ್ಚ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಪರಿಶೀಲಿಸಿ ಶಿಫಾರಸ್ಸು ಮಾಡುವ ಕಾರ್ಯಕ್ರಮಗಳಿಗೆ ಮಾತ್ರ ಅನುಮತಿಯನ್ನು ನೀಡಲಾಗುತ್ತಿದೆ. ಸದರಿ ಸಮಿತಿಯಲ್ಲಿ ಬಿ.ಬಿ.ಎಂ.ಪಿ.ಯ ವಿಶೇಷ ಆಯುಕ್ತರು ಸದಸ್ಯರಾಗಿರುತ್ತಾರೆ.<br>ಅರಮನೆ ಆವರಣದಲ್ಲಿ ನಡೆಯುವ ಮದುವೆ, ಹುಟ್ಟುಹಬ್ಬ ಮತ್ತಿತರ ಖಾಸಗಿ ಸಮಾರಂಭಗಳಿಗೆ ಯಾವುದೇ ಶುಲ್ಕ ವಸೂಲಿ ಮಾಡುವುದಿಲ್ಲ. ಪೊಲೀಸ್ ರಕ್ಷಣೆ ಪಡೆಯುವ ಹಾಗೂ ಸಾರ್ವಜನಿಕರಿಗೆ ಮುಕ್ತವಾಗಿರುವ ಸಮಾರಂಭಗಳಿಗೆ ಬಿ.ಬಿ.ಎಂ.ಪಿ.ಗೆ ಪ್ರತಿಯೊಂದು ಕಾರ್ಯಕ್ರಮಕ್ಕೆ ಈ ಕೆಳಕಂಡಂತೆ ಲೈಸೆನ್ಸ್ ಫೀಯನ್ನು ನಿಗದಿಪಡಿಸಲಾಗಿದೆ.<br>1 ರಿಂದ 7 ದಿನಗಳವರೆಗೆ ರೂ. 15,000/–<br>8 ರಿಂದ 14 ದಿನಗಳವರೆಗೆ ರೂ. 30,000/–<br>15 ರಿಂದ 23 ದಿನಗಳವರೆಗೆ ರೂ. 45,000/–<br>24 ರಿಂದ 30 ದಿನಗಳವರೆಗೆ ರೂ. 60,000/–<br>ಮದುವೆ ಸಮಾರಂಭಗಳಿಗೆ 08 ತಾತ್ಕಾಲಿಕ ಕಟ್ಟಡಗಳನ್ನು ನಿರ್ಮಿಸಿ ಮದುವೆ ಮತ್ತು |

| | | |
|---|---|---|
| | | ಇನ್ನಿತರೆ ಸಮಾರಂಭಗಳನ್ನು ನಡೆಸುತ್ತಿರುತ್ತಾರೆ. ಇದರ ಅನುಮತಿಯನ್ನು ಸಿ.ಆ.ಸು. ಇಲಾಖೆಯಿಂದ ನೀಡಲಾಗುತ್ತಿದೆ. |
| (ಆ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಇಂತಹ ಕಾರ್ಯಕ್ರಮಗಳಿಂದ ವಾರ್ಷಿಕ ಬಂದಿರುವ ಆದಾಯ ಎಷ್ಟು; ಕಳೆದ 10 ವರ್ಷಗಳಿಂದ ಬಂದಿರುವ ಆದಾಯ ಎಷ್ಟು? (ವಿವರ ನೀಡುವುದು) | 2007-08 ರಿಂದ ಮಾತ್ರ ಲೈಸೆನ್ಸ್ ಫೀಯನ್ನು ವಸೂಲು ಮಾಡಲಾಗುತ್ತಿದ್ದು, ಈವರೆವಿಗೆ ಪಾಲಿಕೆಗೆ ರೂ.48,60,275/- ಜಮೆ ಆಗಿದೆ. |

ಸಂಖ್ಯೆ: ನಅಇ 121 ಎಂಎನ್‌ಜಿ 2012

**ಡಿ.ವಿ. ಸದಾನಂದ ಗೌಡ**

ಮುಖ್ಯಮಂತ್ರಿಗಳು

**ಕರ್ನಾಟಕ ವಿಧಾನಸಭೆ**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 960 |
| ಸದಸ್ಯರ ಹೆಸರು | : ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) |
| ಉತ್ತರಿಸಬೇಕಾದ ದಿನಾಂಕ | : 07/02/2012 |
| ಉತ್ತರಿಸುವ ಸಚಿವರು | : ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | **ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ 'ನೀರು ಸರಬರಾಜು ವ್ಯವಸ್ಥೆಯಲ್ಲಿ ಅಧಿಕೃತವಾಗಿ ನಲ್ಲಿ ಸಂಪರ್ಕ ಪಡೆದಿರುವವರ ಸಂಖ್ಯೆ ಎಷ್ಟು, ಅನಧಿಕೃತವಾಗಿ ನಲ್ಲಿ ಸಂಪರ್ಕ ಪಡೆದುಕೊಂಡಿರುವ ನಲ್ಲಿ ಸಂಪರ್ಕಗಳೆಷ್ಟು. ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?** | ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹಾಲಿ ಅಧಿಕೃತವಾಗಿ ನೀರು ಸಂಪರ್ಕ ಪಡೆದಿರುವವರ ಸಂಖ್ಯೆ ಸುಮಾರು 1,17,000 ಹಾಗೂ ಅನಧಿಕೃತವಾಗಿ ನೀರು ಸಂಪರ್ಕ ಪಡೆದಿರುವವರ ಸಂಖ್ಯೆ ಸುಮಾರು 59,000 ಎಂದು ಗುರುತಿಸಲಾಗಿದೆ. ಈ ಅನಧಿಕೃತ ಸಂಪರ್ಕಗಳನ್ನು ಸಕ್ರಮಗೊಳಿಸಲು ನರ್ಮ್ ಯೋಜನೆಯಡಿ ಕೈಗೊಂಡಿರುವ ರೂ.194.54 ಕೋಟಿಗಳ ಅಂದಾಜು ಮೊತ್ತದ ವಿತರಣಾ ವ್ಯವಸ್ಥೆಯ ಯೋಜನೆಯಡಿ ಪ್ರತಿ ಮನೆಗೆ ಹೊಸದಾಗಿ ನೀರಿನ ಸಂಪರ್ಕವನ್ನು ಮಾಪಕದ ಸಹಿತ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಸಂದರ್ಭದಲ್ಲಿ ಅನಧಿಕೃತವಾಗಿ ಪಡೆದಿರುವ ನೀರಿನ ಸಂಪರ್ಕಗಳಿಗೆ ನಿಗದಿತ ಠೇವಣಿ ಪಾವತಿಸಿಕೊಂಡು ಅಧಿಕೃತಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೇ ಕಾರ್ಯಗತಗೊಳಿಸಿರುವ ವಲಯಗಳಲ್ಲಿ 1,42,000 ಸಂಪರ್ಕಗಳನ್ನು ಅಧಿಕೃತ ಸಂಪರ್ಕದಡಿಯಲ್ಲಿ ತರಲಾಗಿದ್ದು, ಉಳಿಕೆ ಸಂಪರ್ಕಗಳನ್ನು ಸಹ ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ | **ಕೇಂದ್ರ ಸರ್ಕಾರದ ನರ್ಮ್ ಯೋಜನೆ ಹಾಗೂ ಸಹಾಯದೊಂದಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ರಾಜ್ಯ ಸರ್ಕಾರ ಕೈಗೊಂಡ ಕ್ರಮವಾದರೂ ಏನು. ಈ ಯೋಜನೆಗಾಗಿ ತಗಲಿರುವ ವೆಚ್ಚವೆಷ್ಟು ಹಾಗೂ ಇದು ಯಾವ ಹಂತದ ಪ್ರಗತಿಯಲ್ಲಿದೆ?** | ಮೈಸೂರು ನಗರದ ಕುಡಿಯುವ ನೀರು ಸರಬರಾಜಿನ ವಿತರಣಾ ವ್ಯವಸ್ಥೆಯನ್ನು ನವೀಕರಿಸಿ ನೀರು ಸರಬರಾಜನ್ನು ಉತ್ತಮಪಡಿಸಲು ಅನುವಾಗುವಂತೆ ನರ್ಮ್ ಯೋಜನೆಯ ರೂ.194.54 ಕೋಟಿಗಳ ಯೋಜನೆಗೆ ಭಾರತ ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.<br>ಈ ಯೋಜನೆಯಡಿ ಮೈಸೂರು ನಗರದ ವಿವಿದೆಡೆ ವಿತರಣಾ ಜಲ ಸಂಗ್ರಾಹಾಗಾರಗಳ ನಿರ್ಮಾಣ (25 ಸಂಖ್ಯೆ) ಮುಖ್ಯ ಜಲ ಸಂಗ್ರಾಹಾಗಾರಗಳಿಂದ ವಿತರಣಾ ಜಲಸಂಗ್ರಾಹಾಗಾರಗಳಿಗೆ ಟ್ರಂಕ್ ಮೈನ್ ಹಾಗೂ |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| | | ಫೀಡರ್ ಮೈನ್ ಕೊಳವೆ ಮಾರ್ಗ ಅಳವಡಿಕೆ (80 ಕಿಮೀ) ಸಂಪು ಮತ್ತು ಪಂಪು ಮನೆಗಳ ನಿರ್ಮಾಣದ ಕಾಮಗಾರಿಗಳು ಮುಗಿದಿರುತ್ತದೆ.<br>ಮೇಲ್ವಿಚಾರಣಾ ನಿಯಂತ್ರಣ ಮತ್ತು ಮಾಹಿತಿ ಅರ್ಜನೆ ತಂತ್ರಜ್ಞಾನವನ್ನು (SCADA) ಅಳವಡಿಸಿದ ಎಲ್ಲಾ ಕಾಮಗಾರಿಗಳು ಮುಗಿದಿದ್ದು, ಎಲ್ಲಾ ಕಾಂಪೊನೆಂಟ್‌ಗಳು 'ಆಟೋ ಮೋಡ್' ನಲ್ಲಿ ಚಾಲನೆಯಲ್ಲಿರುತ್ತದೆ.<br>ಇದುವರೆವಿಗೂ ಪಶ್ಚಿಮ ಹಾಗೂ ಪೂರ್ವ ವಲಯಗಳಲ್ಲಿ ಹೊಸದಾಗಿ ಅಳವಡಿಸಿರುವ ವಿತರಣಾ ಕೊಳವೆ ಮಾರ್ಗದ ಜಾಲದಿಂದ ಒಟ್ಟು 2508 ಸಂಪರ್ಕಗಳಿಗೆ 24/7 ನಿರಂತರ ಸರಬರಾಜು ಹಾಗೂ ಒಟ್ಟು 16,570 ಸಂಪರ್ಕಗಳಿಗೆ ಅನಿಯಮಿತ ನೀರು ಸರಬರಾಜು ಮಾಡಲಾಗುತ್ತಿದೆ. ಒಟ್ಟು 835 ಕಿಮೀ ವಿವಿಧ ವ್ಯಾಸದ ಕೊಳವೆ ಮಾರ್ಗವನ್ನು ಅಳವಡಿಸಲಾಗಿದೆ. ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿದೆ.<br>ಸದರಿ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಜನವರಿ 2012ರ ಅಂತ್ಯಕ್ಕೆ ರೂ.139.08 ಕೋಟಿಗಳು ವೆಚ್ಚವಾಗಿರುತ್ತದೆ. ಕರಾರು ಒಪ್ಪಂದದಂತೆ 2014ರವರೆಗೆ ಗುತ್ತಿಗೆ ಚಾಲ್ತಿಯಲ್ಲಿರುತ್ತದೆ. |
| ಇ | **ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರಿನ ವ್ಯವಸ್ಥೆ ಖಾಸಗೀಕರಣಗೊಳಿಸಿ ಕೊಳವೆ ಮಾರ್ಗ ಅಳವಡಿಸಿ ರಸ್ತೆಗಳು ಹಾಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?** | ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರಿನ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಿರುವುದಿಲ್ಲ. ರಸ್ತೆ ಹಾಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಈ | **ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಮುನ್ನೆಚ್ಚರಿಕೆ ಕ್ರಮವಾದರೂ ಏನು?** | ಮೆ// ಜುಸ್ಕೊ ರವರು ವಿತರಣಾ ಕೊಳವೆ ಮಾರ್ಗವನ್ನು ಅಳವಡಿಸಲು ಅಗೆದಿರುವ ರಸ್ತೆಗಳನ್ನು ವಿತರಣಾ ಜಾಲವನ್ನು ಕಾರ್ಯಗತಗೊಳಿಸಿದ ನಂತರ ಹಂತ ಹಂತವಾಗಿ ಡಾಂಬರೀಕರಣ ಮಾಡಲಾಗುತ್ತಿದೆ.<br>ವಿತರಣಾ ಕೊಳವೆ ಮಾರ್ಗಗಳನ್ನು ಅಳವಡಿಸಲು ರಸ್ತೆ ಅಗೆಯುವಿಕೆ ಹಾಗೂ ಅದರ ದುರಸ್ತಿ ಕಾಮಗಾರಿಗಳು ಸದರಿ ಯೋಜನೆಯ ಮುಗಿಯುವ ಹಂತದವರೆವಿಗೂ ನಿರಂತರವಾಗಿ ಕೈಗೊಳ್ಳಲಾಗುವುದು. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಉ | **ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರಿನ ಶುಲ್ಕ ಯಾವ ಮಾನದಂಡದಲ್ಲಿ ಪಡೆಯಲಾಗುತ್ತಿದೆ?** | ಮೈಸೂರು ಮಹಾನಗರ ಪಾಲಿಕೆಗೆ ಕೌನ್ಸಿಲ್ ಠರಾವು ಸಂಖ್ಯೆ 345 ದಿನಾಂಕ 15.11.2005 ರೀತ್ಯಾ ದಿನಾಂಕ: 01.01.2006 ರಿಂದ ಜಾರಿಗೆ ಬರುವಂತೆ ನಿರ್ವಹಣೆ ಮತ್ತು ದುರಸ್ತಿ ವೆಚ್ಚ ಹಾಗೂ ಇತರೇ ಸೇವಾ ವೆಚ್ಚಗಳನ್ನು ಆಧರಿಸಿ ನೀರಿನ ಶುಲ್ಕ ನಿಗದಿಪಡಿಸಲಾಗುತ್ತಿದೆ. |
| ಊ | **ನೀರಿನ ಶುಲ್ಕ ಪರಿಷ್ಕರಣೆ ಮಾಡಿದ ನಂತರ ಯಾವ ಆಧಾರದ ಮೇಲೆ ತೆರಿಗೆ ನಿಗದಿಗೊಳಿಸಲಾಗುತ್ತದೆ.** | ಸರ್ಕಾರದ ಆದೇಶ ಸಂಖ್ಯೆ ನಆಇ/07/ಯುಡಬ್ಲ್ಯೂಎಸ್/ 2011 ದಿನಾಂಕ: 20.7.2011 ಆಧಾರದ ಅಡಿಯಲ್ಲಿ ನೀರಿನ ಶುಲ್ಕವನ್ನು ನಿಗದಿಗೊಳಿಸಲಾಗುವುದು. |

UDD 33 CSS 2012

**ಎಸ್. ಸುರೇಶ್ ಕುಮಾರ್**

ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

**ಕರ್ನಾಟಕ ವಿಧಾನಸಭೆ**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 906 |
| ಸದಸ್ಯರ ಹೆಸರು | : ಶ್ರೀ ನರೇಂದ್ರಸ್ವಾಮಿ ಪಿ.ಎಂ. (ಮಳವಳ್ಳಿ) |
| ಉತ್ತರಿಸಬೇಕಾದ ದಿನಾಂಕ | : 07/02/2012 |
| ಉತ್ತರಿಸುವ ಸಚಿವರು | : ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ನಗರಾಭಿವೃದ್ಧಿ ಮತ್ತು ಬೆಂಗಳೂರು ಜಲಮಂಡಳಿ ಸಚಿವರು. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| 1 | **ಮಳವಳ್ಳಿ ತಾಲ್ಲೂಕಿನ ಹಲಗೂರು ಹೋಬಳಿಯ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯನ್ನು BWSSB 4ನೇ ಹಂತದ ಯೋಜನೆಯಲ್ಲಿ ಮಾರ್ಗ ಮಧ್ಯದ ಹಳ್ಳಿಗಳಿಗೆ ನೀರೊದಗಿಸದೇ ಇರಲು ಕಾರಣವೇನು?** | ಬೆಂಗಳೂರು ಜಲಮಂಡಳಿಯು ಕಾವೇರಿ 4ನೇ ಹಂತ 2ನೇ ಘಟ್ಟದ ಯೋಜನೆಯಿಂದ ಬೆಂಗಳೂರು ಮಹಾನಗರಕ್ಕೆ ಪ್ರತಿದಿನ 500 ದಶಲಕ್ಷ ಲೀಟರ್ ಕುಡಿಯುವ ನೀರು ಸರಬರಾಜು ಮಾಡುವ ಉದ್ದೇಶವಿದ್ದು ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯ ಆರ್ಥಿಕ ಸಹಾಯದೊಂದಿಗೆ ತೆಗೆದುಕೊಳ್ಳಲಾಗಿದೆ. ಈ ಯೋಜನೆಯನ್ನು ಬೆಂಗಳೂರು ನಗರದ ಜನಸಂಖ್ಯೆಯ ನೀರಿನ ಬೇಡಿಕೆಗೆ ಅನುಗುಣವಾಗಿ ವಿನ್ಯಾಸ ಮಾಡಲಾಗಿರುತ್ತದೆ. ಈ ಯೋಜನೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಮಾತ್ರ ಸೀಮಿತವಾಗಿರುತ್ತದೆ. ಆದ್ದರಿಂದ ಈ ಯೋಜನೆಯಡಿಯಲ್ಲಿ ಕುಡಿಯುವ ನೀರನ್ನು ಬೇರೆ ಯಾವುದೇ ಪ್ರದೇಶಕ್ಕೆ ಸರಬರಾಜು ಮಾಡಲು ಸಾಧ್ಯವಾಗುವುದಿಲ್ಲ.<br>ಮುಂದುವರೆದಂತೆ, ಹಳ್ಳಿಗಳಿಗೆ ಕುಡಿಯುವ ನೀರೊದಗಿಸುವ ಜವಾಬ್ದಾರಿಯು ಆಯಾ ಜಿಲ್ಲಾ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಸೇರಿರುತ್ತದೆ. ಆದ್ದರಿಂದ ಮಳವಳ್ಳಿ ತಾಲ್ಲೂಕಿನ ಹಲಗೂರು ಹೋಬಳಿಯ ಮಾರ್ಗ ಮಧ್ಯದ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಮಂಡ್ಯ ಜಿಲ್ಲಾ/ಗ್ರಾಮ ಪಂಚಾಯತ್ ರವರುಗಳು ಪ್ರತ್ಯೇಕವಾಗಿ ಕೈಗೆತ್ತಿಗೊಳ್ಳಬಹುದಾಗಿದೆ. |
| 2 | **ರಾಜ್ಯದ ಇನ್ನಿತರೇ ಕುಡಿಯುವ ನೀರಿನ ಯೋಜನೆಯಲ್ಲಿ ಮಾರ್ಗ ಮಧ್ಯದ ಹಳ್ಳಿಗಳಿಗೆ ನೀರೊದಗಿಸುವ ಷರತ್ತು ಪಾಲಿಸುತ್ತಿದ್ದು ಇದರಡಿಯಲ್ಲಿಯೂ** | ಉದ್ಭವಿಸುವುದಿಲ್ಲ. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| | **ಮಾರ್ಗ ಮಧ್ಯದ ಹಳ್ಳಿಗಳಿಗೆ ನೀರೊದಗಿಸಲು ಕೈಗೊಂಡ ಕ್ರಮಗಳೇನು? (ಪೂರ್ಣ ವಿವರ ಒದಗಿಸುವುದು)** | |

**ಎಸ್. ಸುರೇಶ್ ಕುಮಾರ್**
ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

## ಕರ್ನಾಟಕ ವಿಧಾನಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 693 |
| ಸದಸ್ಯರ ಹೆಸರು | : ಡಾ: ಹೇಮಚಂದ್ರ ಸಾಗರ್ ಡಿ. (ಚಿಕ್ಕಪೇಟೆ) |
| ಉತ್ತರಿಸಬೇಕಾದ ದಿನಾಂಕ | : 07/02/2012 |
| ಉತ್ತರಿಸುವ ಸಚಿವರು | : ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ನಗರಾಭಿವೃದ್ಧಿ ಮತ್ತು ಬೆಂಗಳೂರು ಜಲಮಂಡಳಿ ಸಚಿವರು. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | **ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ 142 ಸುಂಕೇನಹಳ್ಳಿ ವ್ಯಾಪ್ತಿಯಲ್ಲಿ ಬರುವ ಮಹಂತಾ ಲೇಔಟ್‌ನಲ್ಲಿ ಬೆಂಗಳೂರು ನೀರು ಸರಬರಾಜು ಮಂಡಳಿ ವತಿಯಿಂದ ಸುಮಾರು 60 ಮೀಟರ್ ಜಾಗವನ್ನು ಖಾಸಗಿಯವರಿಂದ ವಶಪಡಿಸಿಕೊಂಡಿರುವುದು ನಿಜವೆ;** | ಈ ಸ್ಥಳದಲ್ಲಿ ಬೆಂಗಳೂರು ನೀರು ಸರಬರಾಜು ಮಂಡಳಿ ವತಿಯಿಂದ ಯಾವುದೇ ಜಾಗವನ್ನು ಖಾಸಗಿಯವರಿಂದ ವಶಪಡಿಸಿಕೊಂಡಿಲ್ಲ. |
| (ಆ) | **ಹಾಗಿದ್ದಲ್ಲಿ, ಒಳಚರಂಡಿ ಕೊಳವೆಗಳನ್ನು ನಿರ್ಮಿಸುವ ಕಾಮಗಾರಿಯು ಯಾವ ಹಂತದಲ್ಲಿದೆ?** | ಉದ್ಭವಿಸುವುದಿಲ್ಲ. |

**ಎಸ್. ಸುರೇಶ್ ಕುಮಾರ್**
ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

## ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 869 |
| ಸದಸ್ಯರ ಹೆಸರು | : | ಶ್ರೀ ಮುನಿರಾಜು ಎಸ್. (ದಾಸರಹಳ್ಳಿ) |
| ಉತ್ತರಿಸಬೇಕಾದ ದಿನಾಂಕ | : | 07/02/2012 |
| ಉತ್ತರಿಸುವ ಸಚಿವರು | : | ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ನಗರಾಭಿವೃದ್ಧಿ ಮತ್ತು ಬೆಂಗಳೂರು ಜಲಮಂಡಳಿ ಸಚಿವರು. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | **ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;** | ಹೌದು. |
| (ಆ) | **ಹಾಲಿ ಬೇಸಿಗೆ ಕಾಲ ಪ್ರಾರಂಭದಲ್ಲಿದ್ದು ಕುಡಿಯುವ ನೀರಿನ ಬವಣೆಯನ್ನು ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;** | ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 6700 ಅಧಿಕೃತ ನೀರಿನ ಸಂಪರ್ಕ ಇದ್ದು, ಈ ಸಂಪರ್ಕಗಳಿಗೆ ಪ್ರತಿ ಮಾಹೆಯಾನ ಪ್ರತಿ ಸಂಪರ್ಕಕ್ಕೆ ಸರಾಸರಿ 10,000 ಲೀಟರ್‌ನಂತೆ 6,70,00,000 ಲೀಟರ್‌ನಷ್ಟು (67 ದಶಲಕ್ಷ ಲೀಟರ್) ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ ಹಾಗೂ ಬೇಸಿಗೆಯಲ್ಲಿಯೂ ಸಹ ಈ ಸಂಪರ್ಕಗಳಿಗೆ ಈಗ ಸರಬರಾಜು ಮಾಡುತ್ತಿರುವಂತೆ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ ಹಾಗೂ ಕಾವೇರಿ ನೀರಿನ ಸಂಪರ್ಕ ಒದಗಿಸದೇ ಇರುವ ಪ್ರದೇಶಗಳಿಗೆ ನೀರಿನ ಬವಣೆಯನ್ನು ನಿವಾರಿಸಲು ಈಗಾಗಲೇ ಹಾಲಿ ಇರುವ 765 ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. |
| (ಇ) | **ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಕಾವೇರಿ ನೀರಿನ ಸರಬರಾಜು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;** | ಹೌದು. |
| (ಈ) | **ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;** | ಬೆಂಗಳೂರು ನಗರಕ್ಕೆ ಹೆಚ್ಚುವರಿಯಾಗಿ 500 ದಶಲಕ್ಷ ಲೀಟರ್ ನೀರು ತರುವ ಕಾವೇರಿ 4ನೇ ಹಂತ, 2ನೇ ಘಟ್ಟದ ಕಾಮಗಾರಿಗಳು ತ್ವರಿತಗತಿಯಲ್ಲಿ ಸಾಗುತ್ತಿದ್ದು ಪ್ರಗತಿಯಲ್ಲಿದೆ. ಈ ಯೋಜನೆ ಪೂರ್ಣಗೊಂಡ ನಂತರ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿರುವ ಎಲ್ಲಾ ಗೃಹ ಸಂಪರ್ಕಗಳಿಗೆ ಮಂಜೂರು ಮಾಡಿ ಕಾವೇರಿ ನೀರನ್ನು ಸರಬರಾಜು ಮಾಡಲಾಗುವುದು. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಉ) | **ಕಾವೇರಿ ನೀರಿನ ಸರಬರಾಜನ್ನು ಎಂದಿನಿಂದ ಪ್ರಾರಂಭಿಸಲಾಗುವುದು?** | ಕಾವೇರಿ 4ನೇ ಹಂತ, 2ನೇ ಘಟ್ಟದ ಕಾಮಗಾರಿಯು 2012ರ ಮಧ್ಯ ಭಾಗದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದ್ದು, ಪೂರ್ಣಗೊಂಡ ನಂತರ ಕಾವೇರಿ ನೀರನ್ನು ಒದಗಿಸಲಾಗುವುದು. |

ನಅಇ 30 ಎಂಎಸ್ಐ 2012

**ಎಸ್. ಸುರೇಶ್ ಕುಮಾರ್**

ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ
ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ
ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

**ಕರ್ನಾಟಕ ವಿಧಾನಸಭೆ**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1002 |
| ಸದಸ್ಯರ ಹೆಸರು | : ಶ್ರೀ ರವಿಸುಬ್ರಹ್ಮಣ್ಯ ಎಲ್.ಎ (ಬಸವನಗುಡಿ) |
| ಉತ್ತರಿಸಬೇಕಾದ ದಿನಾಂಕ | : 07/02/2012 |
| ಉತ್ತರಿಸುವ ಸಚಿವರು | : ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ನಗರಾಭಿವೃದ್ಧಿ ಮತ್ತು ಬೆಂಗಳೂರು ಜಲಮಂಡಳಿ ಸಚಿವರು. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | **ಬೆಂಗಳೂರು ಮಹಾನಗರಕ್ಕೆ ಸದ್ಯದಲ್ಲಿ ಎಷ್ಟು ಪ್ರಮಾಣದ ಕುಡಿಯುವ ನೀರಿನ ಅವಶ್ಯಕತೆ ಇದೆ.** | ಬೆಂಗಳೂರು ಮಹಾನಗರಕ್ಕೆ ದಿನಂಪ್ರತಿ 1150 ದಶಲಕ್ಷ ಲೀಟರ್ ನೀರಿನ ಅವಶ್ಯಕತೆ ಇರುತ್ತದೆ. |
| (ಆ) | **ಸದ್ಯದ ಲಭ್ಯ ಎಷ್ಟು** | ದಿನಂಪ್ರತಿ 900 ದಶಲಕ್ಷ ಲೀಟರ್ ನೀರು ಲಭ್ಯವಿದೆ. |
| (ಇ) | **ಕಾವೇರಿ 4ನೇ ಹಂತ 2ನೇ ಘಟ್ಟದ ನಂತರದ ಯಾವುದಾದರೂ ಕುಡಿಯುವ ನೀರಿನ ಯೋಜನೆ ಸರ್ಕಾರದ ಮುಂದಿದೆಯೇ?** | ಕಾವೇರಿ 4ನೇ ಹಂತ 2ನೇ ಘಟ್ಟದ ನಂತರ ಕಾವೇರಿ ನೀರಿನ ಹಂಚಿಕೆ ಮುಗಿಯುವುದರಿಂದ ಸದ್ಯಕ್ಕೆ ಯಾವುದೇ ಕುಡಿಯುವ ನೀರಿನ ಯೋಜನೆಯು ಸರ್ಕಾರದ ಮುಂದಿರುವುದಿಲ್ಲ. |
| (ಈ) | **ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡು ದೂರದೃಷ್ಟಿಯ ಯಾವುದಾದರೂ ಸಣ್ಣ ಪ್ರಮಾಣದ ಅಣೆಕಟ್ಟುಗಳನ್ನು ಕಟ್ಟುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?** | ಬೆಂಗಳೂರು ನಗರದ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ಗಮನದಲ್ಲಿರಿಸಿಕೊಂಡು ಯಾವುದೇ ಸಣ್ಣ ಪ್ರಮಾಣದ ಅಣೆಕಟ್ಟುಗಳನ್ನು ಕಟ್ಟುವ ಯೋಜನೆ ಪರಿಶೀಲನೆಯಲ್ಲಿರುವುದಿಲ್ಲ.<br>ಆದರೆ, ಬೆಂಗಳೂರು ನಗರಕ್ಕೆ ಅಲ್ಪಾವಧಿ ಮತ್ತು ದೀರ್ಘಾವಧಿ ನೀರಿನ ಅವಶ್ಯಕತೆ ಪೂರೈಸಲು ಜಲಸಂಪನ್ಮೂಲವನ್ನು ಗುರುತಿಸುವ ಸಲುವಾಗಿ 9 ಜನ ತಜ್ಞರ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ದಿನಾಂಕ: 31.12.2011ರಂದು ಮಧ್ಯಂತರ ವರದಿಯನ್ನು ಸಲ್ಲಿಸಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ. |

ನಅಇ 25 ಎಂಎನ್ಐ 2012

**ಎಸ್. ಸುರೇಶ್ ಕುಮಾರ್**

ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ
ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ
ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

**ಕರ್ನಾಟಕ ವಿಧಾನಸಭೆ**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 875 |
| ಸದಸ್ಯರ ಹೆಸರು | : | ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) |
| ಉತ್ತರಿಸಬೇಕಾದ ದಿನಾಂಕ | : | 07/02/2012 |
| ಉತ್ತರಿಸುವ ಸಚಿವರು | : | ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ನಗರಾಭಿವೃದ್ಧಿ ಮತ್ತು ಬೆಂಗಳೂರು ಜಲಮಂಡಳಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | **ಬೃಹತ್ ಬೆಂಗಳೂರು ಮಹಾನಗರದಲ್ಲಿ ಮಳೆನೀರು ಕೊಯಿಲು ಅನುಷ್ಠಾನಕ್ಕೆ ತೆಗೆದುಕೊಳ್ಳಲಾದ ಕ್ರಮಗಳೇನು?** | ಬೆಂಗಳೂರು ಜಲ ಮಂಡಳಿ ಕಾಯ್ದೆ, 1964ರ ಸೆಕ್ಷನ್ 72-3ನ್ನು ಹೊಸದಾಗಿ ಸೇರಿಸಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಕಡ್ಡಾಯಗೊಳಿಸಿ ಜಾರಿಗೊಳಿಸಲಾಗಿದೆ.<br>ಮುಂದುವರಿದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬಹುತೇಕ ಹೊಸ ವಾರ್ಡುಗಳಲ್ಲಿ ಮಳೆ ನೀರು ಕೊಯ್ಲು ಪದ್ಧತಿಯ ಸುಮಾರು 42 ಅರಿವು ಮೂಡಿಸುವ ಒಳಾಂಗಣ ಜನಜಾಗೃತಿ ಕಾರ್ಯಕ್ರಮ ಹಾಗೂ ಉದ್ಯಾನವನಗಳಲ್ಲಿ ಬೀದಿ-ನಾಟಕಗಳೊಂದಿಗೆ ಸುಮಾರು 23 ಅಭಿಯಾನ ಕಾರ್ಯಕ್ರಮಗಳನ್ನು ನಗರಾದ್ಯಂತ ಹಮ್ಮಿಕೊಳ್ಳಲಾಗಿತ್ತು ಹಾಗೂ 46 ತರಬೇತಿ ಶಿಬಿರಗಳನ್ನು ನಡೆಸಲಾಗಿದ್ದು, ಈವರೆಗೆ ಸುಮಾರು 1369 ಗುತ್ತಿಗೆದಾರರಿಗೆ ತರಬೇತಿಯನ್ನು ನೀಡಲಾಗಿದೆ.<br>ಈ ವಿಷಯದಲ್ಲಿ ಸಾರ್ವಜನಿಕರಲ್ಲಿ ಹೆಚ್ಚಿನ ತಿಳುವಳಿಕೆ ಮೂಡಿಸುವ ಸಲುವಾಗಿ ಜಯನಗರದ 5ನೇ ಬಡಾವಣೆಯಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಮಳೆ ನೀರು ಸುಗ್ಗಿ ಕೇಂದ್ರವನ್ನು ಮಾರ್ಚ್ 2011 ರಿಂದ ಪ್ರಾರಂಭಿಸಲಾಗಿದೆ. ಈ ಕೇಂದ್ರದಲ್ಲಿ ಮಳೆ ನೀರು ಸಂರಕ್ಷಣೆ ಹಾಗೂ ಮಳೆ ನೀರು ಕೊಯ್ಲು ಅನುಷ್ಠಾನದ ಬಗ್ಗೆ ವಿವಿಧ ಮಾದರಿಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ, ಈ ಕೇಂದ್ರದಲ್ಲಿಯೂ ಸಾರ್ವಜನಿಕರು ಭೇಟಿ ನೀಡಿ ವಿವಿಧ ಮಳೆ ನೀರು ಕೊಯ್ಲು ಪದ್ಧತಿಯನ್ನು ವೀಕ್ಷಿಸಿ ಮಾಹಿತಿಯನ್ನು ಪಡೆದಿರುತ್ತಾರೆ ಹಾಗೂ ನಗರದ ವಿವಿಧ ಶಾಲೆಗಳಿಂದ ಸುಮಾರು 3,514 ವಿದ್ಯಾರ್ಥಿ/ವಿದ್ಯಾರ್ಥಿನಿಯರು ಭೇಟಿ ನೀಡಿ ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಂಡಿರುತ್ತಾರೆ.<br>ಜನಜಾಗೃತಿ ಕಾರ್ಯಕ್ರಮಗಳು, ಶಾಲಾ/ಕಾಲೇಜು ವಿದ್ಯಾರ್ಥಿಗಳ ಜಾಥಾ, ಹೆಚ್ಚಾಗಿ ಜನರು ಸೇರುವ ಸ್ಥಳಗಳಲ್ಲಿ ಭಿತ್ತಿ ಪತ್ರಗಳನ್ನು ಅಳವಡಿಸುವುದು, ರೇಡಿಯೊ ಮತ್ತು ದೂರದರ್ಶನ, ವೃತ್ತ ಪತ್ರಿಕೆಗಳು, ಗ್ರಾಹಕರಿಗೆ ನೀಡುವ ಬಿಲ್ಲು ಮತ್ತು ರಸೀದಿಗಳು ಮಳೆ ನೀರು ಕೊಯ್ಲು ಬಗ್ಗೆ ಜಾಹೀರಾತುಗಳನ್ನು ನೀಡುವುದು. |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಈ ಮೇಲಿನ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನದೊಂದಿಗೆ, ಈವರೆವಿಗೆ ಸುಮಾರು 35,000 ಕ್ಕಿಂತ ಹೆಚ್ಚಿನ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ.<br>ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗೃಹ ಕಛೇರಿ ಕೃಷ್ಣಾ, ಅನುಗ್ರಹ, ವಿರೋಧ ಪಕ್ಷದ ನಾಯಕರ ವಸತಿ ಗೃಹ, ಮುಖ್ಯ ಕಾರ್ಯದರ್ಶಿಗಳ ವಸತಿ ಗೃಹಗಳಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಮಾದರಿಯಾಗಿ ಅಳವಡಿಸಲಾಗಿದೆ.<br>ಬೆಂಗಳೂರು ಜಲಮಂಡಳಿಯು ತನ್ನ ಆಡಳಿತ ಕಛೇರಿ ಇರುವ ಕಾವೇರಿ ಭವನ, ಸೇವಾ ಠಾಣೆಗಳು ವಿಭಾಗೀಯ ಕಛೇರಿ, ಉಪ ವಿಭಾಗ ಕಛೇರಿಗಳಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಂಡಿದೆ.</td></tr>
<tr><td>(ಆ)</td><td>ಕಳೆದ 3 ವರ್ಷಗಳಿಂದ ಇಲ್ಲಿಯವರೆವಿಗೆ ಇದಕ್ಕಾಗಿ ಮಾಡಲಾದ ವೆಚ್ಚವೆಷ್ಟು? (ವರ್ಷಾವಾರು ಹಾಗೂ ವಾರ್ಡ್‌ವಾರು ವಿವರ ಒದಗಿಸುವುದು)</td><td>ಕಳೆದ 3 ವರ್ಷಗಳಲ್ಲಿ, ಬೆಂಗಳೂರು ಜಲಮಂಡಳಿಯು ಮಳೆ ನೀರು ಕೊಯ್ಲು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಾಡಿರುವ ವೆಚ್ಚಗಳ ವಿವರ:-<br><table><tr><td>2008-09</td><td>-</td><td>ರೂ. 3,05,954099</td></tr><tr><td>2009-10</td><td>-</td><td>ರೂ. 1,97,08,906-00</td></tr><tr><td>2010-11</td><td>-</td><td>ರೂ. 1,71,31,681-00</td></tr></table></td></tr>
<tr><td>(ಇ)</td><td>ಪೂರ್ಣ ಪ್ರಮಾಣದಲ್ಲಿ ಇದರ ಅನುಷ್ಠಾನವನ್ನು ಯಾವಾಗ ಮಾಡಲಾಗುವುದು?</td><td>ಬೃಹತ್ ಬೆಂಗಳೂರು-ಮಹಾನಗರ ವ್ಯಾಪ್ತಿಯಲ್ಲಿ ಹಾಲಿ ಇರುವ ಕಟ್ಟಡಗಳಿಗೆ (40x60 ಅಡಿ ಮತ್ತು ಮೇಲ್ಪಟ್ಟ) ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಾರ್ವಜನಿಕರಿಗೆ ನೀಡಿದ್ದ ಅವಧಿಯು ದಿನಾಂಕ: 31-12-2011ಕ್ಕೆ ಅಂತಿಮಗೊಂಡಿದ್ದು, ಮುಂದಿನ ದಿನಾಂಕವನ್ನು ನಿಗದಿಗೊಳಿಸುವ ಬಗ್ಗೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಉಳಿದಂತೆ, ಹೊಸ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ಪದ್ಧತಿಯು ಮುಂದುವರಿಯುವುದು.</td></tr>
<tr><td>(ಈ)</td><td>ಗಾಂಧಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಸಾಧಿಸಲಾದ ಪ್ರಗತಿಯೇನು? (ವಾರ್ಡ್‌ವಾರು ಹಾಗೂ ಖಾಸಗಿ/ ಸರ್ಕಾರಿ ಸ್ಥಳಗಳಲ್ಲಿ</td><td>ಬೆಂಗಳೂರು ಜಲ ಮಂಡಳಿಯು ತನ್ನ ಕಟ್ಟಡ, ಕಛೇರಿಗಳಿಗೆ ಮಳೆ ನೀರು ಕೊಯ್ಲು ಅಳವಡಿಸಿಕೊಂಡಿರುವುದನ್ನು ಹೊರತುಪಡಿಸಿ, ಉಳಿದಂತೆ ಮಳೆ ನೀರು ಕೊಯ್ಲು ಪದ್ಧತಿಯನ್ನು ಸಂಬಂಧಪಟ್ಟ ಇಲಾಖೆಗಳೇ ಅನುಷ್ಠಾನಗೊಳಿಸಿ ಕೊಳ್ಳಬೇಕಾಗಿರುವುದರಿಂದ ಜಲಮಂಡಳಿ ವತಿಯಿಂದ ಯಾವುದೇ ಕಾಮಗಾರಿಯನ್ನು ಹಮ್ಮಿಕೊಂಡಿರುವುದಿಲ್ಲ. ಗಾಂಧೀನಗರ ವಿಧಾನ ಸಭಾ ಕ್ಷೇತ್ರದಲ್ಲಿ</td></tr>
</table>

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| | **ಆದ ಪ್ರಗತಿಯ ವಿವರ ಒದಗಿಸುವುದು)** | 1. ಸುಮಾರು 146 ಕಟ್ಟಡಗಳಲ್ಲಿ (40x60 ಅಡಿ ಮತ್ತು ಮೇಲ್ಪಟ್ಟ) ಮಳೆ ನೀರು ಕೊಯ್ಲು ಅಳವಡಿಸಿರುತ್ತಾರೆ.<br>2. 570 ಸರ್ಕಾರಿ ಕಟ್ಟಡಗಳಿದ್ದು, 10 ಕಟ್ಟಡಗಳಲ್ಲಿ ಪೂರ್ಣಗೊಂಡಿರುತ್ತದೆ. 86 ವಿದ್ಯಾಸಂಸ್ಥೆಗಳಿದ್ದು, ಯಾವುದರಲ್ಲೂ ಅನುಷ್ಠಾನಗೊಂಡಿರುವುದಿಲ್ಲ. |

**ನಅಇ 29 ಎಂಎಸ್‌ಐ 2012**

**ಎಸ್. ಸುರೇಶ್ ಕುಮಾರ್**

ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

**ಮಾದರಿ – 1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ವಿಧಾನ ಸಭೆ**

***ಹದಿಮೂರನೇ ವಿಧಾನಸಭೆ***

**(ಮೊದಲನೇ ಅಧಿವೇಶನ)**

**ದಿನಾಂಕ -------**

**ರಾಜ್ಯದಲ್ಲಿ ಆರೋಗ್ಯ ಕವಚ ಯೋಜನೆಯ ಸೌಲಭ್ಯಗಳ ಬಗ್ಗೆ**

**ಶ್ರೀ -------------------------- (ಸದಸ್ಯರ ಹೆಸರು)**

**01. (445)** ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾಗಡಿ ವಿಧಾನ ಸಭಾ ಕ್ಷೇತ್ರದ ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯ ಬೈರಮಂಗಲ ಕೆರೆಗೆ ಬೆಂಗಳೂರಿನ ಕೊಳಚೆ ನೀರು ಹರಿಯುತ್ತಿದ್ದು, ಇದರ ಅಚ್ಚುಕಟ್ಟು ಪ್ರದೇಶವಾದ ಬೈರಮಂಗಲ, ಕಂಚುಗಾರನಹಳ್ಳಿ ಹಾಗೂ ಮಂಚನಾಯ್ಯನಹಳ್ಳಿ ಪಂಚಾಯ್ತಿ ವ್ಯಾಪ್ತಿಯಲ್ಲಿ ವಿದ್ಯುತ್ ಇಲ್ಲದಿದ್ದಾಗ ರಾತ್ರಿ ವೇಳೆಯಲ್ಲಿ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಈ ಸೊಳ್ಳೆ ಕಾಟದಿಂದ ಈ ಭಾಗದ ಜನತೆ ಸಾಂಕ್ರಾಮಿಕ ರೋಗಕ್ಕೆ ತುತ್ತಾಗುತ್ತಿರುವುದರಿಂದ ಮೇಲ್ಕಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ನಿರಂತರ ಜ್ಯೋತಿ ವಿದ್ಯುತ್ ಪೂರೈಸಲು ಸರ್ಕಾರ ಮುಂದಾಗುವುದೇ?

(ಇ) ಮೇಲ್ಕಂಡ ಪ್ರದೇಶಕ್ಕೆ ಎಷ್ಟು ದಿನದಲ್ಲಿ ನಿರಂತರ ಜ್ಯೋತಿ ವಿದ್ಯುತ್ ಪೂರೈಸಲಾಗುವುದು?

**ಮಾದರಿ – 1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ವಿಧಾನ ಸಭೆ**

***ಹದಿಮೂರನೇ ವಿಧಾನಸಭೆ***

**(ಮೊದಲನೇ ಅಧಿವೇಶನ)**

ದಿನಾಂಕ --------

**ಶ್ರೀ ------------------------------------ (ಸದಸ್ಯರ ಹೆಸರು)**

**01. (11)** ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಜಿಲ್ಲೆಗಳಿಗೆ ಉಸ್ತುವಾರಿ ಸಚಿವರನ್ನು ನೇಮಿಸಿದೆ; ಅವರುಗಳು ಯಾರು ಯಾರು, ಅವರ ಕಾರ್ಯವೈಖರಿಗಳೇನು?

(ಆ) ಹಾಸನ ಜಿಲ್ಲೆಗೆ ಯಾವ ಸಚಿವರನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ನೇಮಿಸಿದೆ?

(ಇ) ಈ ಜಿಲ್ಲಾ ಉಸ್ತುವಾರಿ ಸಚಿವರು ಎಷ್ಟು ಬಾರಿ ಹಾಸನದಲ್ಲಿ ಕೆ.ಡಿ.ಪಿ. ಸಭೆ ನಡೆಸಿದ್ದಾರೆ?

(ಈ) ಜಿಲ್ಲೆಯಲ್ಲಿ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಮಾದರಿ – 1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ವಿಧಾನ ಸಭೆ**

***ಹದಿಮೂರನೇ ವಿಧಾನಸಭೆ***

**(ಮೊದಲನೇ ಅಧಿವೇಶನ)**

ದಿನಾಂಕ -------

**ಶ್ರೀ ---------------------------------- (ಸದಸ್ಯರ ಹೆಸರು)**

**01. (1510)** ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಅವುಗಳಲ್ಲಿ ಮುಚ್ಚಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

(ಇ) ಚಾಲ್ತಿ ವರ್ಷದಲ್ಲಿ ಜನಸಂಖ್ಯೆ ಆಧಾರದ ಮೇಲೆ ಹೊಸದಾಗಿ ನ್ಯಾಯಬೆಲೆ ಅಂಗಡಿ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

(ಈ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಮಾದರಿ – 1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ವಿಧಾನ ಸಭೆ**

***ಹದಿಮೂರನೇ ವಿಧಾನಸಭೆ***

**(ಮೊದಲನೇ ಅಧಿವೇಶನ)**

ದಿನಾಂಕ --------

**ಶ್ರೀ ---------------------------------- (ಸದಸ್ಯರ ಹೆಸರು)**

**01. (978)** ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹುಬ್ಬಳ್ಳಿ ಕಿತ್ತೂರು ಚೆನ್ನಮ್ಮ ಸರ್ಕಲ್‌ನಿಂದ ಕಾರವಾರ ರೋಡ್ ಬೈಪಾಸ್‌ವರೆಗೆ ದ್ವಿಮುಖ ರಸ್ತೆಯನ್ನು ನಿರ್ಮಿಸುವ ವಿಚಾರವಿದೆಯೇ;

(ಆ) ಇದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು;

(ಇ) ಇಲ್ಲದಿದ್ದಲ್ಲಿ, ಕಾರಣಗಳೇನು?

**ಮಾದರಿ – 1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ವಿಧಾನ ಸಭೆ**

***ಹದಿಮೂರನೇ ವಿಧಾನಸಭೆ***

**(ಮೊದಲನೇ ಅಧಿವೇಶನ)**

ದಿನಾಂಕ **-------**

**ಶ್ರೀ ------------------------------ (ಸದಸ್ಯರ ಹೆಸರು)**

**01. (1117)** ಮಾನ್ಯ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಜನತೆಗೆ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಅಕ್ಕಿಯನ್ನು ಒದಗಿಸುವ ಸಲುವಾಗಿ "ಅಕ್ಕಿ ಸಂತೆ" ಯನ್ನು ವ್ಯವಸ್ಥೆಗೊಳಿಸಿರುವುದು ನಿಜವಲ್ಲವೆ?

(ಆ) ಹಾಗಿದ್ದಲ್ಲಿ, ಇದುವರೆಗೆ ಎಲ್ಲೆಲ್ಲಿ ಅಕ್ಕಿ ಸಂತೆಗಳನ್ನು ಏರ್ಪಡಿಸಲಾಗಿದೆ?

(ಇ) ಅಕ್ಕಿ ಸಂತೆಯಲ್ಲಿ ಎಷ್ಟು ಅಕ್ಕಿಯನ್ನು ಯಾವ ದರದಲ್ಲಿ ಮಾರಾಟ ಮಾಡಲಾಗಿದೆ? ಎಷ್ಟು ಮೊತ್ತದ ವಹಿವಾಟನ್ನು ನಡೆಸಲಾಗಿದೆ?

(ಈ) ರಾಜ್ಯದಲ್ಲಿ ಬಹುತೇಕ ಎಲ್ಲಾ ಪಡಿತರ ಧಾನ್ಯಗಳ ಬೆಲೆ ಹೆಚ್ಚಳವಾಗಿರುವುದರಿಂದ (ಉದಾ: ಬೇಳೆ ಕಾಳುಗಳು, ರಾಗಿ, ಜೋಳ ಮತ್ತು ಸಕ್ಕರೆ ಇತ್ಯಾದಿ) ಅಕ್ಕಿ ಸಂತೆ ಮಾದರಿಯಲ್ಲಿಯೇ ಎಲ್ಲಾ ಧಾನ್ಯಗಳನ್ನು ಒಟ್ಟುಗೂಡಿಸಿ ಇಲಾಖೆಯ ವತಿಯಿಂದ ಜನಕ್ಕೆ ವಿತರಣೆ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

**ಮಾದರಿ – 1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ವಿಧಾನ ಸಭೆ**

***ಹದಿಮೂರನೇ ವಿಧಾನಸಭೆ***

**(ಮೊದಲನೇ ಅಧಿವೇಶನ)**

ದಿನಾಂಕ **-------**

**ಶ್ರೀ ---------------------------------- (ಸದಸ್ಯರ ಹೆಸರು)**

**01. (813)** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೌಲಭ್ಯವು ಲಭ್ಯವಿರುತ್ತದೆ? ಮತ್ತು ಡಯಾಲಿಸಿಸ್‌ಗೆ ವಿಧಿಸುತ್ತಿರುವ ದರವೆಷ್ಟು?

(ಆ) ರಾಜ್ಯದ ಇತರ ಖಾಸಗಿ ಆಸ್ಪತ್ರೆಯಲ್ಲಿ ಡಯಾಲಿಸಿಸ್‌ಗೆ ವಿಧಿಸುತ್ತಿರುವ ದರವೆಷ್ಟು? (ಆಸ್ಪತ್ರೆವಾರು ವಿವರ ನೀಡುವುದು)

(ಇ) ಬಡ ರೋಗಿಗಳಿಗಾಗಿ ಕಡಿಮೆ ದರದಲ್ಲಿ ಡಯಾಲಿಸಿಸ್ ಸೌಲಭ್ಯವು ದೊರಕುವಂತಾಗಲು ಡಯಾಲಿಸಿಸ್ ಕೇಂದ್ರವನ್ನು ತೆರೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

**ಮಾದರಿ – 1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ವಿಧಾನ ಸಭೆ**

***ಹದಿಮೂರನೇ ವಿಧಾನಸಭೆ***

**(ಮೊದಲನೇ ಅಧಿವೇಶನ)**

ದಿನಾಂಕ **-------**

**ಶ್ರೀ ------------------------------------ (ಸದಸ್ಯರ ಹೆಸರು)**

**01. (1147)** ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಇದುವರೆವಿಗೂ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ? (ವರ್ಷಾವಾರು ಮಾಹಿತಿಯನ್ನು ಒದಗಿಸುವುದು)

(ಆ) ಹಾಗಿದ್ದಲ್ಲಿ, ಫಲಾನುಭವಿಗಳ ಪೈಕಿ ಎಷ್ಟು ಜನರಿಗೆ ಬಾಂಡ್ ವಿತರಿಸಲಾಗಿದೆ? ಎಷ್ಟು ಬಾಕಿಯಿದೆ?

(ಇ) ಹಾಗಿದ್ದಲ್ಲಿ, ಈಗಾಗಲೇ ವಿತರಿಸಲಾಗಿರುವ ಬಾಂಡ್‌ಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

**ಮಾದರಿ – 1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ವಿಧಾನ ಸಭೆ**

***ಹದಿಮೂರನೇ ವಿಧಾನಸಭೆ***

**(ಮೊದಲನೇ ಅಧಿವೇಶನ)**

ದಿನಾಂಕ **-------**

**ಶ್ರೀ ---------------------------------- (ಸದಸ್ಯರ ಹೆಸರು)**

**01. (1143)** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಕವಚ ಮಿಷನ್ಸ್ ಸ್ಕೀಮ್ ಯೋಜನೆಯಡಿ ಬಂದಿರುವ ಹಣದಲ್ಲಿ ಆರೋಗ್ಯ ಕವಚ ಯೋಜನೆಗಾಗಿ ಎಷ್ಟು ಹಣವನ್ನು ಈ ಆರ್ಥಿಕ ವರ್ಷದಲ್ಲಿ ವೆಚ್ಚ ಮಾಡಲಾಗಿದೆ?

(ಆ) ರಾಜ್ಯ ಸರ್ಕಾರದ ವತಿಯಿಂದ ಈ ಯೋಜನೆಗಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

(ಇ) ವಾಜಪೇಯಿ ಆರೋಗ್ಯಶ್ರೀ ಯೋಜನೆಯ ಮಾರ್ಗಸೂಚಿ ಮತ್ತು ಸಂಬಂಧಿಸಿದ ಸರ್ಕಾರದ ಆದೇಶದ ಪ್ರತಿಗಳನ್ನು ಒದಗಿಸುವುದು?

(ಈ) ರಾಜ್ಯದಲ್ಲಿರುವ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಸಿಬ್ಬಂದಿಗಳ ಹುದ್ದೆಗಳು ಖಾಲಿ ಇವೆ?

(ಉ) ಸುವರ್ಣ ಆರೋಗ್ಯ ಚೈತನ್ಯದ ಕಾರ್ಯಕ್ರಮದ ಮಾರ್ಗಸೂಚಿ ಪ್ರತಿಯನ್ನು ಒದಗಿಸುವುದು ಮತ್ತು ಈ ಯೋಜನೆಯನ್ನು ರಾಜ್ಯದ ಯಾವ ಯಾವ ಆಸ್ಪತ್ರೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ?

## 5. ಗಮನ ಸೆಳೆಯುವ ಸೂಚನೆಗಳು

1. ಶ್ರೀ ವಿ. ಮುನಿಯಪ್ಪ, ಅವರು ಡಾ॥ ಪರಮಶಿವಯ್ಯ ವರದಿ ಆಧರಿಸಿ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆ ಹಾಗೂ ಬಯಲು ಸೀಮೆ ಪ್ರದೇಶಗಳಿಗೆ ಶಾಶ್ವತ ಕುಡಿಯುವ ನೀರು ಒದಗಿಸುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರ ಗಮನ ಸೆಳೆಯುವುದು.

2. ಡಾ॥ ಹೆಚ್.ಸಿ.ಮಹದೇವಪ್ಪ ಅವರು ಕಾರವಾರ ಸಮುದ್ರ ಬಂದರಿನಲ್ಲಿ ಅತಿ ಹೆಚ್ಚು ಹೂಳು ತುಂಬಿ ಹಡಗುಗಳು ಚಲಿಸಲು ಸಾಧ್ಯವಾಗದಿರುವುದರಿಂದ 20 ಮೆಟ್ರಿಕ್ ಟನ್ ಸಾಗಿಸುವ ಬಂದರು 5 ಮೆಟ್ರಿಕ್ ಮಾತ್ರ ಸಾಗಾಣಿಕೆ ಮಾಡುತ್ತಿರುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಷ್ಟವುಂಟಾಗುತ್ತಿರುವ ಬಗ್ಗೆ ಬಂದರು, ಒಳನಾಡು, ಜಲಸಾರಿಗೆ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಹಾಗೂ ಮೀನುಗಾರಿಕೆ ಸಚಿವರ ಗಮನ ಸೆಳೆಯುವುದು.

3. ಶ್ರೀ ದಿನಕರ ಶೆಟ್ಟಿ ಅವರು ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿಗಾಗಿ ರೂ. 100 ಕೋಟಿ ಅನುದಾನ ನೀಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ವಾಗ್ದಾನ ಮಾಡಿದ್ದು, ಇದುವರೆವಿಗೂ ಹಣ ಬಿಡುಗಡೆ ಮಾಡದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

4. ಶ್ರೀ ನೆ.ಲ. ನರೇಂದ್ರಬಾಬು ಅವರು ರಾಜ್ಯದಲ್ಲಿ ಹಲವಾರು ಕಂಪನಿಗಳು ಸಾವಿರಾರು ಜನರನ್ನು ವಿಮಾದಾರರನ್ನಾಗಿ ಮಾಡಿಕೊಂಡು ಕೋಟ್ಯಾಂತರ ರೂಪಾಯಿ ಹಣವನ್ನು ಲೂಟಿ ಮಾಡುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

5. ಶ್ರೀ ಎಂ. ಪಿ. ಕುಮಾರಸ್ವಾಮಿ ಅವರು ಕುದುರೆಮುಖ ರಾಷ್ಟ್ರೀಯ ಉದ್ಯಾನವನ್ನು ಐತಿಹಾಸಿಕ ಪಾರಂಪರಿಕ ತಾಣವನ್ನಾಗಿ ಘೋಷಿಸುವುದರಿಂದ ಈ ಭಾಗದ ಮೂಲನಿವಾಸಿಗಳು ಆತಂಕಕ್ಕೊಳಗಾಗಿದ್ದು ಪರಿಹಾರ ನೀಡಲು ಸರ್ಕಾರ ಅನುಸರಿಸುವ ಮಾನದಂಡಗಳ ಬಗ್ಗೆ ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರ ಗಮನ ಸೆಳೆಯುವುದು.

## ಗಮನ ಸೆಳೆಯುವ ಸೂಚನೆಗಳು

1. ಶ್ರೀ ಕಿಮ್ಮನೆ ರತ್ನಾಕರ್ ಅವರು ತೀರ್ಥಹಳ್ಳಿ ಕ್ಷೇತ್ರದ ಕೋಣಂದೂರು ಸಮೀಪ ಮಂಗನ ಕಾಯಿಲೆ ವ್ಯಾಪಿಸಿದ್ದು ಆ ಭಾಗದ ಜನ ತೊಂದರೆ ಅನುಭವಿಸುತ್ತಿರುವ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

2. ಶ್ರೀ ಕೆ. ಅಭಯಚಂದ್ರ ಅವರು ಮಂಗಳೂರು ಮೂಡಬಿದ್ರೆ ಮಾರ್ಗವಾಗಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 13ರ ಮಿಜಾರು ಬೊಳೆಚಾರುನಲ್ಲಿ ಇರುವ ಹಳೆ ಸೇತುವೆ ಮುರಿದು ಹೋಗಿರುವುದರಿಂದ ಸೇತುವೆ ಪುನರ್ ನಿರ್ಮಾಣ ಮಾಡುವವರೆಗೆ ಸರ್ಕಾರ ಲೋಕೋಪಯೋಗಿ ಇಲಾಖೆಯ ವತಿಯಿಂದ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಲೋಕೋಪಯೋಗಿ ಸಚಿವರ ಗಮನ ಸೆಳೆಯುವುದು.

3. ಶ್ರೀ ಎನ್. ಸಂಪಂಗಿ ಅವರು ಡಾ: ನಂಜುಂಡಪ್ಪರವರ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ಪ್ರದೇಶವೆಂದು ಪರಿಗಣಿಸಲ್ಪಟ್ಟಿರುವ ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ, ಹಿಂದುಳಿ ವರ್ಗಕ್ಕೆ ಸೇರಿದ ಪದವಿ ಪೂರ್ವ ಮತ್ತು ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ವ್ಯವಸ್ಥೆಯನ್ನು ವಿಸ್ತರಿಸುವ ವಿಷಯದ ಬಗ್ಗೆ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರ ಗಮನ ಸೆಳೆಯುವುದು.

**ಸಂಖ್ಯೆ:ಇಡಿ 23 ಯುಟಿವಿ 2010**

ಉನ್ನತ ಶಿಕ್ಷಣ ಸಚಿವರು

## ಅನುಬಂಧ – VIII

### 5. ನಿಯಮ 330ರ ಮೇರೆಗೆ

**ಶ್ರೀ ಎಂ.ಸಿ. ನಾಣಯ್ಯ** ಅವರು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಏಕರೂಪದ ಸಿ.ಇ.ಟಿ. ಸ್ಪರ್ಧಾತ್ಮಕ ಪರೀಕ್ಷೆ ಮುಖಾಂತರ ಮಾತ್ರ ಪ್ರವೇಶಾವಕಾಶವನ್ನು ಹಾಗೂ ಶುಲ್ಕ ನಿಗದಿಪಡಿಸುವ ಕಾನೂನನ್ನು ಜಾರಿಗೆ ತರುವ ಸಂಬಂಧದಲ್ಲಿ ಪ್ರಸ್ತಾಪಿಸುವುದು.

**ಸಾರ್ವಜನಿಕ ಮಹತ್ವದ ಜರೂರು ವಿಷಯದ ಅಲ್ಪಕಾಲಾವಧಿ ಚರ್ಚೆಯ ಸೂಚನೆ ಹಾಗೂ ಉತ್ತರದ ಮಾದರಿ**

ಶ್ರೀಯುತರಾದ -------------------- (ವಿಧಾನಸಭೆಯ ಸದಸ್ಯರು) ರಾಜ್ಯದಲ್ಲಿ ನ್ಯಾಷನಲ್ ರೂರಲ್ ಹೆಲ್ತ್ ಮಿಷನ್ (ಎನ್.ಆರ್.ಹೆಚ್.ಎಂ.) ಅಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೇಮಕ ಮಾಡಿಕೊಂಡಿರುವ ಶುಶ್ರೂಷಕ/ಶುಶ್ರೂಕಿಯವರನ್ನು ಖಾಯಂಗೊಳಿಸುವ ಕುರಿತಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ.

ರಾಜ್ಯದಲ್ಲಿರುವ 2193 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ 975 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 24x7 ಆರೋಗ್ಯ ಕೇಂದ್ರಗಳೆಂದು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಮಾರ್ಪಡಿಸಲಾಗಿದೆ.

24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಇಲ್ಲಿಯವರೆಗೆ ಒಟ್ಟು 2404 ಶುಶ್ರೂಷಕಿಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಅವರಿಗೆ ಮಾಸಿಕ ರೂ. 7000/- ಸಂಚಿತ ವೇತನವನ್ನು ನೀಡಲಾಗುತ್ತಿದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಏಪ್ರಿಲ್ 2005ರಲ್ಲಿ ಆರಂಭಗೊಂಡಿದ್ದು, 2012ಕ್ಕೆ ಮುಕ್ತಾಯಗೊಳ್ಳಲಿದೆ. ಸದರಿ ಹುದ್ದೆಗಳು ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಮಂಜೂರಾದ ಹುದ್ದೆಗಳಾಗಿರುವುದಿಲ್ಲ. ಆದಾಗ್ಯೂ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24x7 ಘಂಟೆಗಳ ಕಾಲ ಹೆರಿಗೆ ಮತ್ತು ತುರ್ತು ಆರೋಗ್ಯ ಸೇವೆಗಳನ್ನು ಸದರಿ ಕೇಂದ್ರಗಳಲ್ಲಿ ಲಭ್ಯವಿರಬೇಕೆಂಬ ಕಾರಣದಿಂದ ಶುಶ್ರೂಷಕಿಯರನ್ನು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಯೋಜನಾ ಅವಧಿಗೆ ಸೀಮಿತಗೊಳಿಸಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.

ಸದರಿ ನೇಮಕಾತಿಯನ್ನು ಪ್ರತಿ ವರ್ಷವು ನವೀಕರಿಸಿಕೊಂಡು ಬಂದಿದ್ದು, ಇವು ಖಾಯಂ ನೇಮಕಾತಿಯಾಗಿರುವುದಿಲ್ಲ. ಆದಕಾರಣ, ಈ ಸಿಬ್ಬಂದಿಗಳ ಸೇವೆಯನ್ನು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಯೋಜನೆಯಡಿ ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

### 7. ಅಲ್ಪಕಾಲಾವಧಿ ಅನುಬಂಧ – XI
### ಚರ್ಚೆ

1. ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ ಅವರು ಪಡಿತರ ಚೀಟಿ ವಿತರಣೆ ಬಗ್ಗೆ ದಿನಾಂಕ: 3ನೇ ಮಾರ್ಚ್, 2012ರಂದು ಸದನದಲ್ಲಿ ಉತ್ತರಿಸುವ ನಾಲ್ಕನೇ ಪಟ್ಟಿಯ ಪ್ರಶ್ನೆ ಸಂಖ್ಯೆ 59(593)ಕ್ಕೆ ಒದಗಿಸಿರುವ ಉತ್ತರಕ್ಕೆ ಸಂಬಂಧಿಸಿದಂತೆ ಅರ್ಧಗಂಟೆ ಕಾಲ ಚರ್ಚಿಸುವುದು.

2. ಶ್ರೀ ಎನ್. ಎ. ಹ್ಯಾರಿಸ್ ಅವರು ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳಿಗೆ ಏಕರೂಪದ ಸೌಲಭ್ಯದ ಬಗ್ಗೆ ದಿನಾಂಕ: 14ನೇ ಮಾರ್ಚ್, 2012ರಂದು ಸದನದಲ್ಲಿ ಉತ್ತರಿಸುವ ಹನ್ನೊಂದನೇ ಪಟ್ಟಿಯ ಪ್ರಶ್ನೆ ಸಂಖ್ಯೆ 149(965)ಕ್ಕೆ ಒದಗಿಸಿರುವ ಉತ್ತರಕ್ಕೆ ಸಂಬಂಧಿಸಿದಂತೆ ಅರ್ಧಗಂಟೆ ಕಾಲ ಚರ್ಚಿಸುವುದು.

3. ಶ್ರೀ ಯು.ಟಿ. ಖಾದರ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ ಕಡಲ ಕೊರೆತದಿಂದಾಗಿ ಪ್ರತಿಬಾರಿ ಸಂಭವಿಸುತ್ತಿರುವ ಪ್ರಾಣಹಾನಿ ಆಸ್ತಿ-ಪಾಸ್ತಿ ಹಾನಿಗಳನ್ನು ತಡೆಗಟ್ಟಲು ಸರ್ಕಾರ ಶಾಶ್ವತ ಪರಿಹಾರವನ್ನು ಕೈಗೊಳ್ಳುವ ಬಗ್ಗೆ ಬಂದರು, ಒಳನಾಡು, ಜಲಸಾರಿಗೆ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ಹಾಗೂ ಮೀನುಗಾರಿಕೆ ಸಚಿವರ ಗಮನ ಸೆಳೆಯುವುದು.

4. ಶ್ರೀ ಎಂ.ಟಿ. ಕೃಷ್ಣಪ್ಪ ಅವರು ರಾಜ್ಯದಲ್ಲಿ ಮಾಜಿ ಅನುವಂಶಿಕ ಪಟೇಲರುಗಳಿಗೆ ಹಾಲಿ ಕೊಡುತ್ತಿರುವ ಮಾಸಿಕ ಅನುಕಂಪ ಭತ್ಯೆ ರೂ. 1,000 ರಿಂದ ರೂ. 4,000 ಗಳಿಗೆ ಹೆಚ್ಚಿಸುವ ಬಗ್ಗೆ ಕಂದಾಯ ಸಚಿವರ ಗಮನ ಸೆಳೆಯುವುದು.

5. ಶ್ರೀ ಖಮರುಲ್ ಇಸ್ಲಾಂ ಅವರು ಉದ್ಯೋಗ ತರಬೇತಿ ಇಲಾಖೆಯಲ್ಲಿ 2008ರಲ್ಲಿ ಪ್ರಾರಂಭಿಸಲಾದ 10 ಸರ್ಕಾರಿ ಐ.ಟಿ.ಐ ಗಳಿಗೆ ಖರೀದಿಸಲಾದ ಸಾಮಗ್ರಿಗಳಿಗೆ ಪುನ: ಟೆಂಡರ್ ಮುಖಾಂತರ ಅದೇ ಸಾಮಾಗ್ರಿಗಳನ್ನು ಖರೀದಿಸುತ್ತಿರುವ ಬಗ್ಗೆ ಕಾರ್ಮಿಕ ಸಚಿವರ ಗಮನ ಸೆಳೆಯುವುದು.

6. ಶ್ರೀ ರಹೀಂ ಖಾನ್ ಅವರು ಬೀದರ್ ತಾಲ್ಲೂಕಿನಲ್ಲಿ ಸಣ್ಣ ಕೆರೆಗಳ ಅಭಿವೃದ್ಧಿ ಇಲ್ಲದೇ ಅಂತರ್ಜಲದ ನೀರಿನ ಮಟ್ಟ ಕುಸಿಯುತ್ತಿದ್ದು ಈ ಕೆರೆಗಳಲ್ಲಿ ಹೂಳು ತುಂಬಿರುವುದರಿಂದ ಅವುಗಳ ಅಭಿವೃದ್ಧಿಯ ಬಗ್ಗೆ ಸಣ್ಣ ನೀರಾವರಿ ಮತ್ತು ಕನ್ನಡ ಸಂಸ್ಕೃತಿ ಹಾಗೂ ಜವಳಿ ಸಚಿವರ ಗಮನ ಸೆಳೆಯುವುದು.

7. ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) ಅವರು ದೇವರ ಹಿಪ್ಪರಗಿಯಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದ್ದು ಈ ಆಸ್ಪತ್ರೆ ರಾಷ್ಟ್ರೀಯ ಹೆದ್ದಾರಿ 218ರಲ್ಲಿ ಇರುವುದರಿಂದ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿರುವುದರಿಂದ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುವುದು.

## 17a. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯ ಪ್ರಸ್ತಾಪ

"2012ರ ಜನವರಿ 30ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ಮಾನ್ಯ ಸದಸ್ಯರಾದ ಶ್ರೀ ಡಿ.ಎನ್. ಜೀವರಾಜ್ ಅವರು ದಿನಾಂಕ: 2012ರ ಫೆಬ್ರವರಿ 3ರಂದು ಸೂಚಿಸಿದ ಪ್ರಸ್ತಾವದ ಮೇಲೆ ಮುಂದುವರಿದ ಚರ್ಚೆ.

## 17b. ವಿಶೇಷ ಪ್ರಸ್ತಾವನೆ

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ) ಅವರು ಕೆಳಕಂಡ ಪ್ರಸ್ತಾವನೆಯನ್ನು ಮಂಡಿಸುವುದು.

"ದಿನಾಂಕ: 31ನೇ ಅಕ್ಟೋಬರ್ 2011ರಂದು ವಿಧಾನಸಭೆಯ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತಿ ಹೊಂದಿದ ಶ್ರೀ ಎಸ್.ಬಿ. ಪಾಟೀಲ್ ಅವರು ತಮ್ಮ ಸೇವಾವಧಿಯಲ್ಲಿ ಸದನಕ್ಕೆ ಹಾಗೂ ಅಧ್ಯಕ್ಷರಿಗೆ ನೀಡಿದ ಸಹಕಾರಕ್ಕೆ ಸರ್ಕಾರದ ಹಾಗೂ ವಿಧಾನಸಭೆಯ ಸದಸ್ಯರ ಪ್ರಶಂಸೆಯನ್ನು ದಾಖಲುಗೊಳಿಸಿ ಅದನ್ನು ಅವರಿಗೆ ತಿಳಿಸುವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಬೇಕೆಂದು ಈ ಸದನವು ಪ್ರಸ್ತಾಪಿಸುತ್ತದೆ".

## ಶಾಸನ ರಚನೆ – ಅನುಬಂಧ

### ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ವಿಧೇಯಕ, 2011

ಕರ್ನಾಟಕ ರಾಜ್ಯದಲ್ಲಿನ ನಾಗರಿಕರಿಗೆ ಗೊತ್ತುಮಾಡಿದ ಕಾಲಮಿತಿಯೊಳಗೆ ಸೇವೆಗಳ ಖಾತರಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿನ ನಾಗರಿಕರಿಗೆ ಗೊತ್ತುಮಾಡಿದ ಕಾಲಮಿತಿಯೊಳಗೆ ಸೇವೆಗಳ ಖಾತರಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011 ಎಂದು ಕರೆಯತಕ್ಕದ್ದು.

(2) ಇದು, ಸರ್ಕಾರವು, ಅಧಿಸೂಚನೆಯ ಮೂಲಕ ಸರ್ಕಾರಿ ರಾಜ್ಯಪತ್ರದಲ್ಲಿ, ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಮೇಲ್ಮನವಿ ಪ್ರಾಧಿಕಾರ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಯಾವೊಬ್ಬ ಸಕ್ಷಮ ಅಧಿಕಾರಿಯು ಹೊರಡಿಸಿದ ಆದೇಶಗಳ ವಿರುದ್ಧದ ಮೇಲ್ಮನವಿಯನ್ನು ಕೇಳುವ ಅಧಿಕಾರವು ನಿಹಿತಗೊಂಡಿರುವ, ಸರ್ಕಾರವು ನೇಮಕ ಮಾಡಿದ ಒಬ್ಬ ಅಧಿಕಾರಿ;

(ಬಿ) "ನಾಗರಿಕ ಸಂಬಂಧಿ ಸೇವೆ"ಯು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಸೇವೆಯನ್ನು ಒಳಗೊಳ್ಳುತ್ತದೆ;

(ಸಿ) "ಸಕ್ಷಮ ಅಧಿಕಾರಿ" ಎಂದರೆ, ಈ ಅಧಿನಿಯಮಕ್ಕೆ ಅನುಸಾರವಾಗಿ ಸೇವೆಯ ವಿಲೆಯಲ್ಲಿ ಕರ್ತವ್ಯಲೋಪವೆಸಗಿದ ಅಥವಾ ವಿಳಂಬ ಮಾಡಿದ ಸಾರ್ವಜನಿಕ ನೌಕರನ ಮೇಲೆ ವೆಚ್ಚವನ್ನು ವಿಧಿಸಲು ಅಧಿಕಾರವನ್ನು ಹೊಂದಿರತಕ್ಕ, ಸರ್ಕಾರವು ನೇಮಕ ಮಾಡಿದ ಒಬ್ಬ ಅಧಿಕಾರಿ;

(ಡಿ) "ಹೆಸರಿಸಲಾದ ಅಧಿಕಾರಿ" ಎಂದರೆ, ನಾಗರಿಕ ಸಂಬಂಧಿ ಸೇವೆಯನ್ನು ಒದಗಿಸಲು ಅಗತ್ಯಪಡಿಸಲಾದ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಒಬ್ಬ ಅಧಿಕಾರಿ;

(ಇ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಎಫ್) "ಸ್ಥಳೀಯ ಪ್ರಾಧಿಕಾರ"ವು ಯಾವುದೇ ಪ್ರಾಧಿಕಾರ, ಪುರಸಭೆ, ಪೌರನಿಗಮ, ಪಟ್ಟಣ ಪಂಚಾಯತಿ, ಯೋಜನಾ ಪ್ರಾಧಿಕಾರ, ಕೈಗಾರಿಕಾ ಉಪನಗರ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮಪಂಚಾಯಿತಿಗಳು ಹಾಗೂ ಕಾನೂನಿನ ಮೂಲಕ ರಚಿತವಾದ ಇತರ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಮತ್ತು ರಾಜ್ಯದಲ್ಲಿ ಸಾರ್ವಜನಿಕ ಉಪಯುಕ್ತತೆಯ ಅತ್ಯಾವಶ್ಯಕ ಸೇವೆಯನ್ನು

ಒದಗಿಸಲು ಅಥವಾ ನಿರ್ದಿಷ್ಟವಾದ ಸ್ಥಳೀಯ ಪ್ರದೇಶದೊಳಗೆ ಅಂಥ ಸೇವೆಗಳನ್ನು ನಿಯಂತ್ರಿಸಲು, ನಿರ್ವಹಿಸಲು ಅಥವಾ ವಿನಿಯಮಗೊಳಿಸಲು ಕಾನೂನಿನ ಮೂಲಕ ತತ್ಕಾಲದಲ್ಲಿ ನಿಹಿತಗೊಂಡ ಯಾವುದೇ ಹೆಸರಿನಿಂದ ಕರೆಯಲಾಗುವ ಇತರ ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗಳನ್ನು ಒಳಗೊಳ್ಳುತ್ತದೆ;

(ಜಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) "ಸಾರ್ವಜನಿಕ ಪ್ರಾಧಿಕಾರ" ಎಂದರೆ,–

(i) ರಾಜ್ಯದಲ್ಲಿ ಸಂವಿಧಾನದ ಮೂಲಕ ಅಥವಾ ಅದರಡಿಯಲ್ಲಿ;

(ii) ರಾಜ್ಯ ವಿಧಾನಮಂಡಲದ ಮೂಲಕ ಮಾಡಲಾದ ಯಾವುದೇ ಕಾನೂನಿನ ಮೂಲಕ;

(iii) ಸರ್ಕಾರವು ಹೊರಡಿಸಿದ ಅಧಿಸೂಚನೆಯ ಅಥವಾ ಮಾಡಲಾದ ಆದೇಶದ ಮೂಲಕ,

– ಸ್ಥಾಪನೆಯಾದ ಅಥವಾ ರಚನೆಯಾದ ಸಂಘಟನೆ ಅಥವಾ ಪ್ರಾಧಿಕಾರ ಅಥವಾ ನಿಕಾಯ ಅಥವಾ ಸಂಸ್ಥೆ ಅಥವಾ ಒಂದು ಸ್ಥಳೀಯ ಪ್ರಾಧಿಕಾರ ಮತ್ತು ಇದು, ಸರ್ಕಾರವು ನೇರವಾಗಿ ಅಥವಾ ಪರೋಕ್ಷವಾಗಿ,–

(1) ಒಡೆತನ ಹೊಂದಿರುವ, ನಿಯಂತ್ರಣ ಹೊಂದಿರುವ ಅಥವಾ ಗಣನೀಯವಾಗಿ ಹಣಕಾಸು ನೀಡಿರುವ ನಿಕಾಯವನ್ನು; ಅಥವಾ

(2) ಗಣನೀಯವಾಗಿ ಹಣಕಾಸು ನೀಡಿರುವ ಸರ್ಕಾರೇತರ ಸಂಘಟನೆಯನ್ನು, – ಒಳಗೊಳ್ಳುತ್ತದೆ.

(ಐ) "ಸಾರ್ವಜನಿಕ ನೌಕರ" ಎಂದರೆ, ಸಾರ್ವಜನಿಕ ಪ್ರಾಧಿಕಾರದ ಯಾವುದೇ ಸೇವೆ ಅಥವಾ ಹುದ್ದೆಗೆ ಖಾಯಂ ಆಗಿ ನೇಮಕಗೊಂಡ ಒಬ್ಬ ವ್ಯಕ್ತಿ;

(ಜೆ) "ಸೇವೆಯ ಹಕ್ಕು" ಎಂದರೆ, ಅನುಸೂಚಿಯಲ್ಲಿ ಗೊತ್ತು ಮಾಡಿದ ಕಾಲಮಿತಿಯೊಳಗೆ ನಿರ್ದಿಷ್ಟಪಡಿಸಿದ ನಾಗರಿಕ ಸಂಬಂಧಿ ಸೇವೆಯನ್ನು ಪಡೆದುಕೊಳ್ಳುವ ಹಕ್ಕು;

(ಕೆ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿ;

(ಎಲ್) "ಗೊತ್ತುಮಾಡಿದ ಕಾಲ" ಎಂದರೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ, ಹೆಸರಿಸಲಾದ ಅಧಿಕಾರಿಯು ಸೇವೆಯನ್ನು ಒದಗಿಸುವ ಅಥವಾ ಸಕ್ಷಮ ಅಧಿಕಾರಿಯು ಅಥವಾ ಮೇಲ್ಮನವಿ ಪ್ರಾಧಿಕಾರವು ಮೇಲ್ಮನವಿಯನ್ನು ನಿರ್ಧರಿಸುವ ಗರಿಷ್ಠ ಸಮಯ;

**3. ಗೊತ್ತುಮಾಡಿದ ಕಾಲಮಿತಿಯೊಳಗೆ ಸೇವೆಯನ್ನು ಪಡೆಯುವ ಹಕ್ಕು.–** (1) ಪ್ರತಿಯೊಬ್ಬ ನಾಗರಿಕನು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿ ಗೊತ್ತುಮಾಡಿದ ಕಾಲದೊಳಗೆ, ಈ ಅಧಿನಿಯಮಕ್ಕನುಸಾರವಾಗಿ, ರಾಜ್ಯದಲ್ಲಿ ನಾಗರೀಕ ಸಂಬಂಧಿ ಸೇವೆಗಳನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

(2) ಸಾರ್ವಜನಿಕ ಪ್ರಾಧಿಕಾರದ ಪ್ರತಿಯೊಬ್ಬ ಹೆಸರಿಸಲಾದ ಅಧಿಕಾರಿಯು ಮತ್ತು ಆತನ ಅಧೀನ ಸಾರ್ವಜನಿಕ ನೌಕರನು, ಗೊತ್ತುಮಾಡಿದ ಕಾಲದೊಳಗೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ನಾಗರೀಕ ಸಂಬಂಧಿ ಸೇವೆಗಳನ್ನು, ಪಡೆಯಲು ಅರ್ಹರಾದ ವ್ಯಕ್ತಿಗಳಿಗೆ ಒದಗಿಸತಕ್ಕದ್ದು ಮತ್ತು ಅದನ್ನು ತಮ್ಮ ಕಚೇರಿಗಳ ಸೂಚನಾ ಫಲಕದ ಮೇಲೆ ಸಹ ಪ್ರದರ್ಶಿಸತಕ್ಕದ್ದು.

**4. ಸೇವೆಗಳು, ಹೆಸರಿಸಲಾದ ಅಧಿಕಾರಿಗಳು, ಸಕ್ಷಮ ಅಧಿಕಾರಿಗಳು, ಮೇಲ್ಮನವಿ ಪ್ರಾಧಿಕಾರ ಮತ್ತು ಗೊತ್ತುಪಡಿಸಿದ ಕಾಲಮಿತಿಗಳ ಅಧಿಸೂಚನೆ.–** ಸರ್ಕಾರವು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯ ಒಳಗೆ, ಅಧಿಸೂಚನೆಯ ಮೂಲಕ, ಸಚಿವಾಲಯದ ಪ್ರತಿಯೊಂದು ಇಲಾಖೆಯ ಅಡಿಯಲ್ಲಿ ಬರುವ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರ ಅಥವಾ ಸ್ಥಳೀಯ ಪ್ರಾಧಿಕಾರ ನೀಡುವ ಹೊಸ ಸೇವೆಗಳನ್ನು ಮತ್ತು ಹೆಸರಿಸಲಾದ ಅಧಿಕಾರಿಗಳನ್ನು ಹಾಗೂ ಈ ಅಧಿನಿಯಮದ ಅಡಿಯಲ್ಲಿ ನೀಡಲಾಗುವ ಸೇವೆಗಳಿಗೆ ನಿರ್ದಿಷ್ಟಪಡಿಸಿ ಗೊತ್ತುಮಾಡಿದ ಕಾಲಮಿತಿಯನ್ನು ಒಳಗೊಂಡಂತೆ ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರ ಇವುಗಳನ್ನು ಸೇರಿಸುವುದಕ್ಕಾಗಿ ಅನುಸೂಚಿಯನ್ನು ತಿದ್ದುಪಡಿ ಮಾಡತಕ್ಕದ್ದು ಮತ್ತು ಅಂತಹುದೇ ಅಧಿಸೂಚನೆಯ ಮೂಲಕ ಅನುಸೂಚಿಯಲ್ಲಿನ ನಮೂದುಗಳನ್ನು ತಿದ್ದುಪಡಿ ಮಾಡಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

**5. ಗೊತ್ತುಮಾಡಿದ ಕಾಲದೊಳಗೆ ಸೇವೆಯನ್ನು ಒದಗಿಸುವುದು.–** (1) ಗೊತ್ತುಮಾಡಿದ ಕಾಲವು, ಹೆಸರಿಸಲಾದ ಅಧಿಕಾರಿಗೆ ಅಥವಾ ಅರ್ಜಿಯನ್ನು ಸ್ವೀಕರಿಸಲು ಈತನಿಂದ ಪ್ರಾಧಿಕೃತನಾದ ಈತನ ಅಧೀನದಲ್ಲಿರುವ ವ್ಯಕ್ತಿಗೆ ಅನುಸೂಚಿತ ಸೇವೆಗೆ ಸಂಬಂಧಿಸಿದ ಅರ್ಜಿಯನ್ನು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಸಲ್ಲಿಸಿದ ದಿನಾಂಕದಿಂದ ಪ್ರಾರಂಭವಾಗತಕ್ಕದ್ದು. ಅಂಥ ಅರ್ಜಿಗೆ ಯುಕ್ತ ಸ್ವೀಕೃತಿಯ ಪ್ರಮಾಣ ಪತ್ರವನ್ನು (ಅಕ್ನಾಲೆಡ್ಜ್‌ಮೆಂಟ್) ನೀಡತಕ್ಕದ್ದು.

(2) ಹೆಸರಿಸಲಾದ ಅಧಿಕಾರಿಯು (1)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಗೊತ್ತುಮಾಡಿದ ಕಾಲದೊಳಗೆ ಸೇವೆಯನ್ನು ನೇರವಾಗಿಯಾಗಲಿ ಅಥವಾ ಆತನಿಂದ ಯುಕ್ತವಾಗಿ ಪ್ರಾಧಿಕೃತನಾದ ಅಧಿಕಾರಿಯ ಮೂಲಕವಾಗಿಯಾಗಲಿ ಒದಗಿಸತಕ್ಕದ್ದು ಅಥವಾ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಮತ್ತು ಅರ್ಜಿಯನ್ನು ತಿರಸ್ಕರಿಸಿದ ಸಂದರ್ಭದಲ್ಲಿ, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸತಕ್ಕದ್ದು ಮತ್ತು ತೀರ್ಮಾನದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸುವುದಕ್ಕಾಗಿನ ಅವಧಿಯನ್ನು ಹಾಗೂ ಯಾವ ಸಕ್ಷಮ ಅಧಿಕಾರಿಯ ಮುಂದೆ ಮೊದಲ ಮೇಲ್ಮನವಿಯನ್ನು ಸಲ್ಲಿಸಬೇಕೋ ಆ ಬಗೆಗಿನ ಎಲ್ಲಾ ವಿವರಗಳನ್ನು ಅರ್ಜಿದಾರನಿಗೆ ತಿಳಿಸತಕ್ಕದ್ದು.

**6. ಅರ್ಜಿಗಳ ಸ್ಥಿತಿಗತಿಯ ಮೇಲ್ವಿಚಾರಣೆ.– (1)** ಯಾವುದೇ ನಾಗರೀಕ ಸಂಬಂಧಿ ಸೇವೆಗಳಿಗಾಗಿ ಅರ್ಜಿಯನ್ನು ಸಲ್ಲಿಸುವ ಪ್ರತಿಯೊಬ್ಬ ನಾಗರೀಕನಿಗೆ ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರವು ಅಥವಾ ಸಂದರ್ಭಾನುಸಾರ ಸ್ಥಳೀಯ ಪ್ರಾಧಿಕಾರವು ಅರ್ಜಿ ಸಂಖ್ಯೆಯನ್ನು ಒದಗಿಸತಕ್ಕದ್ದು ಮತ್ತು ಅರ್ಜಿದಾರನು ತನ್ನ ಅರ್ಜಿಯ ಸ್ಥಿತಿಗತಿಯನ್ನು ನಿಯಮಿಸಲಾದ ಕಾರ್ಯವಿಧಾನಕ್ಕನುಸಾರವಾಗಿ ಆನ್‌ಲೈನ್‌ನಲ್ಲಿ ಪಡೆದುಕೊಳ್ಳುವ ಮತ್ತು ಮೇಲ್ವಿಚಾರಣೆ ನಡೆಸುವ ಹಕ್ಕನ್ನು ಹೊಂದಿರತಕ್ಕದ್ದು.

(2) ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು ಅಥವಾ ಸಂದರ್ಭಾನುಸಾರವಾಗಿ ಸ್ಥಳೀಯ ಪ್ರಾಧಿಕಾರವು ನಾಗರೀಕ ಸಂಬಂಧಿ ಸೇವೆಗಳ ಮೇಲಿನ ಎಲ್ಲಾ ಅರ್ಜಿಗಳ ಸ್ಥಿತಿಗತಿಯನ್ನು ಆನ್‌ಲೈನ್‌ನಲ್ಲಿ ನಿರ್ವಹಿಸತಕ್ಕದ್ದು ಮತ್ತು ಇದಕ್ಕೆ ಸಂಬಂಧಿಸಿದ ನಿಯಮಗಳ ಮೂಲಕ ನಿಯಮಿಸಲಾದಂಥ ಕಾರ್ಯವಿಧಾನಕ್ಕನುಸಾರವಾಗಿ ಅವುಗಳ ಸ್ಥಿತಿಗತಿಯನ್ನು ಇಂದೀಕರಿಸುವ ಕರ್ತವ್ಯಕ್ಕೆ ಬದ್ಧವಾಗಿರತಕ್ಕದ್ದು.

**7. ಪರಸ್ಪರ ತಿಳುವಳಿಕೆಯ ಮೂಲಕ ವಿದ್ಯುನ್ಮಾನ ಆಡಳಿತ ಸೇವೆಗಳು.–** ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು, ಇಲಾಖೆಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ತಮಗೆ ಸಂಬಂಧಿಸಿದ ನಾಗರೀಕ ಸಂಬಂಧಿ ಸೇವೆಗಳನ್ನು ಗೊತ್ತುಮಾಡಿದ ಕಾಲ ಅಥವಾ ಅವಧಿಯಲ್ಲಿ ವಿಲೆ ಮಾಡಲು ಪರಸ್ಪರ ತಿಳುವಳಿಕೆಯ ಮೂಲಕ

ವಿದ್ಯುನ್ಮಾನ ಆಡಳಿತದ ಭಾಗವಾಗಿ ಸೇವೆಯನ್ನು ಬಳಸಿಕೊಳ್ಳಲು ಸರ್ಕಾರವು ಉತ್ತೇಜಿಸತಕ್ಕದ್ದು ಮತ್ತು ಪ್ರೋತ್ಸಾಹಿಸತಕ್ಕದ್ದು.

**8. ನಾಗರೀಕರಿಗೆ ಪರಿಹಾರ ವೆಚ್ಚದ ಸಂದಾಯ.–** ನಾಗರೀಕ ಸಂಬಂಧಿ ಸೇವೆಗಳಿಗೆ ಅರ್ಜಿಯನ್ನು ಸಲ್ಲಿಸಿರುವ ನಾಗರೀಕನು, ಗೊತ್ತುಪಡಿಸಿದ ಸಮಯವನ್ನು ಮೀರಿ ಅಂಥ ಸೇವೆಗಳ ವಿಲೆಯಲ್ಲಿ ಆದ ವಿಳಂಬ ಅಥವಾ ಕರ್ತವ್ಯ ಲೋಪದ ಸಂದರ್ಭದಲ್ಲಿ ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳಿಗನುಸಾರವಾಗಿ ಪರಿಹಾರ ವೆಚ್ಚಗಳನ್ನು ಕೋರಲು ಹಕ್ಕುಳ್ಳವರಾಗಿರತಕ್ಕದ್ದು.

**9. ಪರಿಹಾರ ವೆಚ್ಚದ ಸಂದಾಯದ ಹೊಣೆಗಾರಿಕೆ.–** ಗೊತ್ತುಪಡಿಸಿದ ಸಮಯದೊಳಗೆ ನಾಗರೀಕ ಸಂಬಂಧಿ ಸೇವೆಗಳ ವಿಲೆಯಲ್ಲಿ ನಾಗರೀಕರಿಗೆ ನೀಡಲು ವಿಫಲರಾಗಿರುವಂಥ ಪ್ರತಿಯೊಬ್ಬ ಹೆಸರಿಸಲಾದ ಅಧಿಕಾರಿ ಅಥವಾ ಆತನ ಅಧೀನದಲ್ಲಿರುವ ಸಾರ್ವಜನಿಕ ನೌಕರನು, ವಿಳಂಬದ ಅವಧಿಗೆ ಅರ್ಜಿಯೊಂದಕ್ಕೆ ಗರಿಷ್ಠ ಐದು ನೂರು ರೂಪಾಯಿಗಳಿಗೆ ಒಳಪಟ್ಟು ದಿನ ಒಂದಕ್ಕೆ ಇಪ್ಪತ್ತು ರೂಪಾಯಿಗಳಂತೆ, ಅದನ್ನು ನೀಡುವುದಕ್ಕಾಗಿ ಸರ್ಕಾರದಿಂದ ನಿಷೇಧ ಅಥವಾ ನಿರ್ಬಂಧ ಇಲ್ಲದಿದ್ದರೆ, ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು.

**10. ಸಕ್ಷಮ ಅಧಿಕಾರಿಯ ನೇಮಕಾತಿ.–** (1) ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮಕ್ಕನುಸಾರವಾಗಿ ಸೇವೆಗಳನ್ನು ವಿಲೆ ಮಾಡುವಲ್ಲಿ ಕರ್ತವ್ಯ ಲೋಪ ಎಸಗುವ ಅಥವಾ ವಿಳಂಬ ಮಾಡುವ, ಹೆಸರಿಸಲಾದ ಅಧಿಕಾರಿ ಅಥವಾ ಆತನ ಅಧೀನದಲ್ಲಿಯ ಸಾರ್ವಜನಿಕ ನೌಕರನ ವಿರುದ್ಧ ವೆಚ್ಚವನ್ನು ವಿಧಿಸುವುದಕ್ಕೆ ಸಕ್ಷಮ ಪ್ರಾಧಿಕಾರದಂತೆ ಕಾರ್ಯನಿರ್ವಹಿಸಲು ಸರ್ಕಾರದ ಗ್ರೂಪ್ 'ಬಿ' ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಅಥವಾ ಸಾರ್ವಜನಿಕ ಪ್ರಾಧಿಕಾರದ ಸಂದರ್ಭದಲ್ಲಿ ಇದಕ್ಕೆ ತತ್ಸಮನಾದ ಶ್ರೇಣಿಯ ಅಧಿಕಾರಿಯನ್ನು ನೇಮಕ ಮಾಡತಕ್ಕದ್ದು.

(2) ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು ವೆಚ್ಚದ ಸಂದಾಯದ ಉದ್ದೇಶಕ್ಕಾಗಿ, ಸಕ್ಷಮ ಅಧಿಕಾರಿಯ ಮೇಲೆ, ಅನ್ವಯವಾಗುವ ಕಾನೂನು, ಕಾರ್ಯ ವಿಧಾನ ಮತ್ತು ನಿಯಮಗಳಿಗನುಸಾರವಾಗಿ ಹಣ ಪಡೆಯುವ ಮತ್ತು ಬಟವಾಡೆ ಮಾಡುವ ಅಧಿಕಾರವನ್ನು ಪ್ರದತ್ತಗೊಳಿಸತಕ್ಕದ್ದು.

(3) ನಾಗರೀಕ ಸಂಬಂಧಿ ಸೇವೆಗಳ ವಿಲೆಯ ಸಮಯದಲ್ಲಿ ನಾಗರೀಕನು ಪರಿಹಾರ ವೆಚ್ಚದ ಅಂಥ ಬೇಡಿಕೆಯನ್ನು ಮಾಡಿದರೆ, ಸ್ವೀಕೃತಿ ಪ್ರಮಾಣ ಪತ್ರಕ್ಕೆ (ಅಕ್ನಾಲೆಡ್ಜ್‌ಮೆಂಟ್) ಮತ್ತು ಸ್ವೀಕೃತಿ ಪತ್ರಕ್ಕೆ ಪ್ರತಿಯಾಗಿ ನಿಯಮಿಸಬಹುದಾದ ಅಂಥ ರೀತಿಯಲ್ಲಿ ನಾಗರಿಕನಿಗೆ ಅಂಥ ವೆಚ್ಚವನ್ನು ಸಂದಾಯ ಮಾಡುವುದು ಸಕ್ಷಮ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

**11. ಹೊಣೆಗಾರಿಕೆಯನ್ನು ನಿಗದಿಪಡಿಸುವ ಕಾರ್ಯವಿಧಾನ.–** (1) ಪರಿಹಾರ ವೆಚ್ಚವನ್ನು ಸಂದಾಯ ಮಾಡಿದ ಹದಿನೈದು ದಿನಗಳ ಅವಧಿಯೊಳಗೆ, ಸಕ್ಷಮ ಅಧಿಕಾರಿಯು ಪ್ರಾರಂಭಿಕ ವಿಚಾರಣೆಯನ್ನು ನಡೆಸಿದ ತರುವಾಯ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಅಂಥ ನಾಗರೀಕ ಸಂಬಂಧಿ ಸೇವೆಗಳ ವಿಲೆಯಲ್ಲಿನ ವಿಳಂಬಕ್ಕೆ ಹೊಣೆಗಾರನಾಗಿ ಕಂಡುಬಂದ ಸಾರ್ವಜನಿಕ ನೌಕರನ ವಿರುದ್ಧ, ನಾಗರೀಕನಿಗೆ ಸಂದಾಯ ಮಾಡಿದ ಪರಿಹಾರ ವೆಚ್ಚವನ್ನು ಅವನಿಂದ ಏಕೆ ವಸೂಲಿ ಮಾಡಬಾರದು ಎಂದು ಕೇಳುವ ನೋಟೀಸನ್ನು ಹೊರಡಿಸತಕ್ಕದ್ದು.

(2) ನೋಟೀಸನ್ನು ಯಾವ ಸಾರ್ವಜನಿಕ ನೌಕರನ ವಿರುದ್ಧ ಹೊರಡಿಸಲಾಗಿದೆಯೋ ಆ ನೌಕರನು ಅಂಥ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳೊಳಗೆ ಮನವಿಯನ್ನು ಸಲ್ಲಿಸಬಹುದು. ನಿಯಮಿಸಲಾದ ಅವಧಿಯೊಳಗೆ ಸಕ್ಷಮ ಅಧಿಕಾರಿಯು ಅಂಥ ಮನವಿಯನ್ನು ಸ್ವೀಕರಿಸದಿರುವ ಸಂದರ್ಭದಲ್ಲಿ

ಅಥವಾ ಸ್ವೀಕರಿಸಿದ ವಿವರಣೆಯು, ಯಾವುದಾದರು ಇದ್ದಲ್ಲಿ, ಅದು ತೃಪ್ತಿಕರವಾಗಿಲ್ಲವೆಂದು ಕಂಡುಬಂದರೆ, ಸಕ್ಷಮ ಅಧಿಕಾರಿಯು, ಅಂಥ ಕರ್ತವ್ಯ ಲೋಪವೆಸಗಿದ ಸಾರ್ವಜನಿಕ ನೌಕರನಿಗೆ ಖರ್ಚು ಚೀಟಿಯಲ್ಲಿ (ಡೆಬಿಟ್ ನೋಟ್) ಗೊತ್ತುಪಡಿಸಿದ ವೆಚ್ಚವನ್ನು ಜಮೆ ಮಾಡುವಂತೆ ನಿರ್ದೇಶನವನ್ನು ನೀಡುವ ಅಥವಾ ಖರ್ಚು ಚೀಟಿಯಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ಅಂಥ ಸಾರ್ವಜನಿಕ ನೌಕರನ ಸಂಬಳದಿಂದ ಕಡಿತಗೊಳಿಸಲು ಸಂಬಂಧಿಸಿದ ಲೆಕ್ಕಪತ್ರಗಳ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡುವ ಖರ್ಚು ಚೀಟಿಯನ್ನು ಹೊರಡಿಸಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಸಕ್ಷಮ ಅಧಿಕಾರಿಯು ಸಾರ್ವಜನಿಕ ನೌಕರನ ಪರವಾಗಿ ಯುಕ್ತ ಮತ್ತು ನ್ಯಾಯೋಚಿತ ಆಧಾರಗಳು ಕಂಡುಬಂದಲ್ಲಿ ಮತ್ತು ನಾಗರೀಕನಿಗೆ ಸೇವೆಯನ್ನು ವಿಲೆ ಮಾಡುವಲ್ಲಿ ಆದ ವಿಳಂಬವು ಅವನ ಮೇಲೆ ಆರೋಪಿಸಬೇಕಾಗಿಲ್ಲವೆಂಬ, ಆದರೆ ಬೇರೊಬ್ಬ ಸಾರ್ವಜನಿಕ ನೌಕರನ ಮೇಲೆ ಆರೋಪಿಸಬಹುದೆಂದು ತೀರ್ಮಾನಕ್ಕೆ ಬಂದಲ್ಲಿ, ಆತನ ವಿರುದ್ಧ ಹೊರಡಿಸಿದ ನೋಟೀಸನ್ನು ಹಿಂಪಡೆಯಲು ಮತ್ತು ವಿಳಂಬಕ್ಕೆ ಹೊಣೆಗಾರನಾಗಿ ಕಂಡುಬಂದ ಅಂಥ ಇತರ ಸಾರ್ವಜನಿಕ ನೌಕರನಿಗೆ ಕಾರಣ ಕೇಳುವ ನೋಟೀಸನ್ನು ಹೊಸದಾಗಿ ಹೊರಡಿಸಲು ಹಾಗೂ ಈ ಉಪಪ್ರಕರಣದಲ್ಲಿ ಮತ್ತು ಈ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಕಾರ್ಯ ವಿಧಾನಗಳನ್ನು ಯಥೋಚಿತ ವ್ಯತ್ಯಾಸಗಳೊಂದಿಗೆ ಅನುಸರಿಸುವುದು ಸಕ್ಷಮ ಅಧಿಕಾರಿಗೆ ಕಾನೂನು ಬದ್ಧವಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಹೊಣೆಗಾರಿಕೆಯನ್ನು ನಿಗದಿಪಡಿಸುವಾಗ ಸಕ್ಷಮ ಅಧಿಕಾರಿಯು ಆ ಸಂಬಂಧದಲ್ಲಿ ಆದೇಶವನ್ನು ಹೊರಡಿಸುವುದಕ್ಕೆ ಮೊದಲು ಸ್ವಾಭಾವಿಕ ನ್ಯಾಯ ತತ್ತ್ವಗಳನ್ನು ಅನುಸರಿಸತಕ್ಕದ್ದು.

**12. ಸಾರ್ವಜನಿಕ ನೌಕರನ ಮೇಲ್ಮನವಿ ಹಕ್ಕು.-** (1) 10ನೇ ಮತ್ತು 11ನೇ ಪ್ರಕರಣಗಳಿಗೆ ಅನುಸಾರವಾಗಿ ಸಕ್ಷಮ ಅಧಿಕಾರಿಯು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ಸಾರ್ವಜನಿಕ ನೌಕರನು ಪ್ರಶ್ನಿತ ಆದೇಶವನ್ನು ಸ್ವೀಕರಿಸಿದಂದಿನಿಂದ ಮೂವತ್ತು ದಿನಗಳಿಗೆ ಮೀರದ ಅವಧಿಯೊಳಗೆ ಅಂಥ ಆದೇಶದ ವಿರುದ್ಧ ಮೇಲ್ಮನವಿ ಪ್ರಾಧಿಕಾರಕ್ಕೆ ಒಂದು ಮೇಲ್ಮನವಿಯನ್ನು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದು. ಮೇಲ್ಮನವಿ ಪ್ರಾಧಿಕಾರದ ಆದೇಶವು ಅಂತಿಮ ಹಾಗೂ ಬಂಧನಕಾರಿಯಾಗಿರತಕ್ಕದ್ದು.

(2) ಈ ಅಧಿನಿಯಮದ ಉದ್ದೇಶಕ್ಕಾಗಿ, ಸಕ್ಷಮ ಅಧಿಕಾರಿಯು ಹೊರಡಿಸಿದ ಆದೇಶದ ವಿರುದ್ಧದ ಮೇಲ್ಮನವಿಗಳನ್ನು ಕೇಳಲು ಮತ್ತು ತೀರ್ಮಾನಿಸಲು ಮೇಲ್ಮನವಿ ಪ್ರಾಧಿಕಾರವಾಗಿ ಒಬ್ಬ ಅಧಿಕಾರಿಯನ್ನು ಸರ್ಕಾರವು ನೇಮಕ ಮಾಡತಕ್ಕದ್ದು. ಮೇಲ್ಮನವಿ ಪ್ರಾಧಿಕಾರವು ಸರ್ಕಾರದ ಉಪಕಾರ್ಯದರ್ಶಿಯ ಅಥವಾ ಅದಕ್ಕೆ ಸಮನಾದ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯಾಗಿರತಕ್ಕದ್ದು.

**13. ಬಾಧಿತ ನಾಗರೀಕರಿಂದ ಮೇಲ್ಮನವಿ.-** (1) ಯಾವೊಬ್ಬ ವ್ಯಕ್ತಿಯ ಅರ್ಜಿಯನ್ನು 5ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ತಿರಸ್ಕರಿಸಲಾಗಿದೆಯೋ ಅಥವಾ ಗೊತ್ತುಮಾಡಿದ ಕಾಲಮಿತಿಯೊಳಗೆ ಆತನಿಗೆ ಸೇವೆಯನ್ನು ಒದಗಿಸಿಲ್ಲವೋ ಆ ವ್ಯಕ್ತಿಯು, ಅರ್ಜಿಯನ್ನು ತಿರಸ್ಕರಿಸಿದ ದಿನಾಂಕದಿಂದ ಅಥವಾ ಗೊತ್ತುಮಾಡಿದ ಕಾಲಮಿತಿಯು ಮುಕ್ತಾಯಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಕ್ಷಮ ಅಧಿಕಾರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು:

ಪರಂತು, ಅಪೀಲುದಾರನು ಸಾಕಷ್ಟು ಕಾರಣಕ್ಕಾಗಿ ಸಕಾಲದಲ್ಲಿ ಮೇಲ್ಮನವಿಯನ್ನು ದಾಖಲು ಮಾಡುವುದರಿಂದ ಪ್ರತಿಬಂಧಿತನಾಗಿದ್ದಾನೆಂದು ಸಕ್ಷಮ ಅಧಿಕಾರಿಯು ಮನಗಂಡಲ್ಲಿ, ಆತನು ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಮೇಲ್ಮನವಿಯನ್ನು ಅಂಗೀಕರಿಸಬಹುದು.

(2) ಸಕ್ಷಮ ಅಧಿಕಾರಿಯು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸೇವೆಯನ್ನು ಒದಗಿಸಲು ಹೆಸರಿಸಲಾದ ಅಧಿಕಾರಿಗೆ ಆದೇಶಿಸಬಹುದು ಅಥವಾ ಮೇಲ್ಮನವಿಯನ್ನು ತಿರಸ್ಕರಿಸಬಹುದು ಅಥವಾ 9ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಪರಿಹಾರ ವೆಚ್ಚವನ್ನು ವಿಧಿಸಬಹುದು.

(3) ಸಕ್ಷಮ ಅಧಿಕಾರಿಯ ತೀರ್ಪಿನ ವಿರುದ್ಧ, ತೀರ್ಪನ್ನು ನೀಡಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸತಕ್ಕದ್ದು:

ಪರಂತು, ಅಪೀಲುದಾರನು ಸಾಕಷ್ಟು ಕಾರಣಕ್ಕಾಗಿ ಸಕಾಲದಲ್ಲಿ ಮೇಲ್ಮನವಿಯನ್ನು ದಾಖಲು ಮಾಡುವುದರಿಂದ ಪ್ರತಿಬಂಧಿತನಾಗಿದ್ದಾನೆಂದು, ಮೇಲ್ಮನವಿ ಪ್ರಾಧಿಕಾರವು ಮನಗಂಡಲ್ಲಿ, ಅದು ಅರವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಮೇಲ್ಮನವಿಯನ್ನು ಅಂಗೀಕರಿಸಬಹುದು.

(4) ಮೇಲ್ಮನವಿ ಪ್ರಾಧಿಕಾರವು, ಹೆಸರಿಸಲಾದ ಅಧಿಕಾರಿಗೆ ಆತನು ನಿರ್ಧರಿಸಬಹುದಾದ ಅಂಥ ಅವಧಿಯೊಳಗೆ ಸೇವೆಯನ್ನು ಒದಗಿಸಲು ಆದೇಶಿಸಬಹುದು ಅಥವಾ ಆತನು ಮೇಲ್ಮನವಿಯನ್ನು ತಿರಸ್ಕರಿಸಬಹುದು.

(5) ಹೆಸರಿಸಲಾದ ಅಧಿಕಾರಿಯು, 5ನೇ ಪ್ರಕರಣದ (1)ನೇ ಉಪಪ್ರಕರಣವನ್ನು ಪಾಲಿಸದಿದ್ದಲ್ಲಿ, ತದನಂತರ ಪಾಲನೆ ಮಾಡದಿರುವುದರಿಂದ ಬಾಧಿತನಾದ ಅರ್ಜಿದಾರನು, ಸಕ್ಷಮ ಅಧಿಕಾರಿಗೆ ನೇರವಾಗಿ ಅರ್ಜಿಯನ್ನು ಸಲ್ಲಿಸಬಹುದು. ಈ ಅರ್ಜಿಯನ್ನು, ಇದು ಮೊದಲನೇ ಮೇಲ್ಮನವಿಯಾಗಿದ್ದರೆ ಹೇಗೋ ಹಾಗೆಯೇ ವಿಲೆ ಮಾಡತಕ್ಕದ್ದು.

(6) ಹೆಸರಿಸಲಾದ ಅಧಿಕಾರಿಯು, ಈ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿಯ ಸೇವೆಯನ್ನು ಒದಗಿಸುವ ಆದೇಶವನ್ನು ಪಾಲಿಸದಿದ್ದಲ್ಲಿ, ಆಗ ಪಾಲನೆ ಮಾಡದಿರುವುದರಿಂದ ಬಾಧಿತನಾದ ಅರ್ಜಿದಾರನು, ಮೇಲ್ಮನವಿ ಪ್ರಾಧಿಕಾರಕ್ಕೆ ನೇರವಾಗಿ ಅರ್ಜಿಯನ್ನು ಸಲ್ಲಿಸಬಹುದು. ಈ ಅರ್ಜಿಯನ್ನು ಮೇಲ್ಮನವಿಯ ರೀತಿಯಲ್ಲಿ ವಿಲೆ ಮಾಡತಕ್ಕದ್ದು.

(7) ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರವು, ಈ ಪ್ರಕರಣದಡಿಯಲ್ಲಿ ಅಪೀಲನ್ನು ತೀರ್ಮಾನಿಸುವಾಗ, ಈ ಮುಂದಿನ ವಿಷಯಗಳ ಸಂಬಂಧದಲ್ಲಿ, ಎಂದರೆ:–

(ಎ) ದಸ್ತಾವೇಜುಗಳ ಹಾಜರುಪಡಿಸುವಿಕೆ ಮತ್ತು ಪರಿಶೀಲನೆಯನ್ನು ಅಗತ್ಯಪಡಿಸುವುದು;

(ಬಿ) ಹೆಸರಿಸಲಾದ ಅಧಿಕಾರಿಗೆ ಮತ್ತು ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಸಮಸ್ಸುಗಳನ್ನು ನೀಡುವುದು; ಮತ್ತು

(ಸಿ) ನಿಯಮಿಸಬಹುದಾದ ಅಂಥ ಯಾವುದೇ ಇತರ ವಿಷಯಗಳು,

– ಇವುಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ ಸಂಖ್ಯೆ 5) ಅಡಿಯಲ್ಲಿ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂತಹವೇ ಅಧಿಕಾರಗಳನ್ನು ಹೊಂದಿರತಕ್ಕದ್ದು.

**14. ನಿಗದಿಪಡಿಸಿದ ಅವಧಿಯೊಳಗೆ ಸೇವೆಗಳನ್ನು ನೀಡುವ ಸಂಸ್ಕೃತಿಯನ್ನು ಬೆಳೆಸುವುದು.**– (1) ಸರ್ಕಾರಿ ನೌಕರನನ್ನು ನಾಗರೀಕರೆಡೆಗೆ ಸೂಕ್ಷ್ಮಗ್ರಾಹಿಯನ್ನಾಗಿಸುವ ಮತ್ತು ನಾಗರೀಕರಿಗೆ ಕಾಲಬದ್ಧ ಸೇವೆಗಳನ್ನು ನೀಡುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವಂತೆ ಮತ್ತು ಮೈಗೂಡಿಸಿಕೊಳ್ಳುವಂತೆ ಮಾಡುವ ಉದ್ದೇಶ ಹಾಗೂ ಆಶಯಗಳನ್ನು

ಹೊಂದಿರುವುದರಿಂದ, ಈ ಅಧಿನಿಯಮದಲ್ಲಿ ಪರಿಭಾಷಿಸಿದ ನಾಗರೀಕ ಸಂಬಂಧಿ ಸೇವೆಗಳನ್ನು ಕಾಲಬದ್ಧವಾಗಿ ಒದಗಿಸುವಲ್ಲಿ, ಹೆಸರಿಸಲಾದ ಅಧಿಕಾರಿಯ ವಿಫಲತೆಯನ್ನು ದುರ್ನಡತೆ ಎಂದು ಪರಿಗಣಿಸತಕ್ಕದ್ದಲ್ಲ.

(2) ರೂಢಿಗತ ಮತ್ತು ಉದ್ದೇಶಪೂರ್ವಕವಾಗಿ ಯಾವುದೇ ಉಚಿತ ಕಾರಣಗಳಿಲ್ಲದೆ ಕರ್ತವ್ಯ ಲೋಪವೆಸಗಿದ ಮತ್ತು ಅರ್ಜಿಯನ್ನು ಸ್ವೀಕರಿಸಲು ಸತತವಾಗಿ ವಿಫಲನಾದ ಅಥವಾ ಗೊತ್ತುಪಡಿಸಿದ ಅವಧಿಯೊಳಗೆ ಸೇವೆಯನ್ನು ಒದಗಿಸಲು ವಿಫಲನಾದ ಅಥವಾ ಸೇವೆಗಾಗಿಯ ಕೋರಿಕೆಯನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡಿದ ಅಥವಾ ಮಿತಿಮೀರಿ ವಿಳಂಬ ಮಾಡಿದ ಯಾವುದೇ ಹೆಸರಿಸಲಾದ ಅಧಿಕಾರಿಯ ಸಂದರ್ಭದಲ್ಲಿ, ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರದ ಮುಖ್ಯಸ್ಥನು, ಈ ಬಗ್ಗೆ ಕಂಡುಬಂದ ಅಂಶಗಳನ್ನು ದಾಖಲಿಸಿದ ನಂತರ, ಮತ್ತು ಕಾರಣ ಕೇಳುವ ನೋಟೀಸನ್ನು ನೀಡಿ ಕರ್ತವ್ಯಲೋಪವೆಸಗಿದ ಅಧಿಕಾರಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ನೀಡಿದಾಗ ಮಾತ್ರ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಕ್ಷಮನಾಗಿರತಕ್ಕದ್ದು.

(3) ಹೆಸರಿಸಲಾದ ಅಧಿಕಾರಿಯ ಸಾಮರ್ಥ್ಯವನ್ನು ಪ್ರೋತ್ಸಾಹಿಸಲು ಹಾಗೂ ಹೆಚ್ಚಿಸಲು, ಯಾವ ಹೆಸರಿಸಲಾದ ಅಧಿಕಾರಿಯ ವಿರುದ್ಧ ಯಾವುದೇ ವಿಫಲತೆಯು ವರದಿಯಾಗಿಲ್ಲವೋ ಆ ಅಧಿಕಾರಿಗೆ ಮೆಚ್ಚುಗೆ ಪತ್ರವನ್ನು ನೀಡಬಹುದು ಮತ್ತು ಸಾರ್ವಜನಿಕ ಪ್ರಾಧಿಕಾರದ ಮುಖ್ಯಸ್ಥರು, ಆತನ ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿ ಅದನ್ನು ನಮೂದು ಮಾಡಬಹುದು.

15. **ಭಾವಿತ ಸೇವಾ ಷರತ್ತು.–** ಈ ಅಧಿನಿಯಮದ ಉಪಬಂಧಗಳನ್ನು, ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ ಅಧಿಕಾರಿಗಳನ್ನು ಒಳಗೊಂಡಂತೆ ಹೆಸರಿಸಲಾದ ಅಧಿಕಾರಿಯ ಸೇವಾ ಷರತ್ತುಗಳ ಭಾಗವೆಂಬಂತೆ ಭಾವಿಸತಕ್ಕದ್ದು.

16. **ಪೂರಕತೆ.–** ಈ ಅಧಿನಿಯಮದ ಉಪಬಂಧಗಳನ್ನು, ಶಿಸ್ತು ಕ್ರಮ ಮತ್ತು ಹಣಕಾಸು ನಿಯಮಗಳಿಗೆ ಹಾಗೂ ಸರ್ಕಾರಿ ಅಥವಾ ಸಂದರ್ಭಾನುಸಾರವಾಗಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರ ಅಥವಾ ಸಾರ್ವಜನಿಕ ಪ್ರಾಧಿಕಾರದ ನೌಕರರಿಗೆ ಅನ್ವಯವಾಗುವಂಥ ಇತರ ಸೇವಾ ನಿಯಮಗಳು ಮತ್ತು ನಿಬಂಧನೆಗಳಿಗೆ ಪೂರಕವಾಗಿರತಕ್ಕದ್ದು ಮತ್ತು ಸರ್ಕಾರಿ ನೌಕರರು ಅಥವಾ ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರದ ನೌಕರರ ಸೇವಾ ಷರತ್ತು ಮತ್ತು ನಡತೆಯನ್ನು ನಿಯಂತ್ರಿಸುವ ಅಂಥ ಸೇವಾ ನಿಯಮಗಳು ಮತ್ತು ನಿಬಂಧನೆಗಳನ್ನು ನ್ಯೂನತೆಗೊಳಿಸತಕ್ಕದ್ದಲ್ಲ.

17. **ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕ್ರಮದ ಬಗ್ಗೆ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವು ಇರತಕ್ಕದ್ದಲ್ಲ.

18. **ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.–** ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಸಕ್ಷಮ ಅಧಿಕಾರಿ ಅಥವಾ ಮೇಲ್ಮನವಿ ಪ್ರಾಧಿಕಾರವು ನಿರ್ಧರಿಸುವುದಕ್ಕೆ ಅಧಿಕಾರವಿರುವ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**19. ನಿಯಮಗಳನ್ನು ರಚಿಸಲು ಅಧಿಕಾರ.–** (1) ಸರ್ಕಾರವು, ಅಧಿಸೂಚನೆಯ ಮೂಲಕ, ರಾಜ್ಯ ಪತ್ರದಲ್ಲಿ ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅಥವಾ ಹೊರಡಿಸಲಾದ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನವು ಅಥವಾ ಮುಂಬರುವ ನಿಕಟ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಯಾವುದೇ ನಿಯಮ ಅಥವಾ ಅಧಿಸೂಚನೆಯನ್ನು ಮಾಡಬಾರದೆಂದು ತೀರ್ಮಾನಿಸಿದರೆ, ಆಗ ಆ ನಿಯಮ ಅಥವಾ ಅಧಿಸೂಚನೆಯು ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಡು ಅಥವಾ ರದ್ದತಿಯು ಅಂಥ ನಿಯಮ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**20. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು, ಆದೇಶದ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ಹಾಗೆ, ತೊಂದರೆಗಳನ್ನು ನಿವಾರಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಯಾವುದೇ ಆದೇಶವನ್ನೂ ಮಾಡತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯದಲ್ಲಿ ನಾಗರಿಕರಿಗೆ ಸೇವಾ ಖಾತರಿಯನ್ನು ಗೊತ್ತುಪಡಿಸಿದ ಕಾಲಮಿತಿಯೊಳಗೆ ಒದಗಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಕ್ಕೆ ಉಪಬಂಧವನ್ನು ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಬಾಧಿತ ವ್ಯಕ್ತಿಗಳಿಗಾಗಿ ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರ ಎಂಬ ಎರಡು–ಹಂತದ ಮೇಲ್ಮನವಿಗೂ ಸಹಾ ಉಪಬಂಧವನ್ನು ಕಲ್ಪಿಸಲಾಗಿದೆ. ಯಾರ ಅರ್ಜಿಗಳು ವಿಳಂಬಗೊಂಡಿವೆಯೋ ಆ ನಾಗರೀಕರಿಗೆ ಪರಿಹಾರ ವೆಚ್ಚವನ್ನು ಸಂದಾಯ ಮಾಡುವುದಕ್ಕೆ ಮತ್ತು ಅದನ್ನು ತಪ್ಪಿತಸ್ಥ ಸಾರ್ವಜನಿಕ ನೌಕರನಿಂದ ವಸೂಲು ಮಾಡುವುದಕ್ಕೆ ಹಾಗೂ ಅಂಥ ಸಾರ್ವಜನಿಕ ನೌಕರನ ವಿರುದ್ಧ ಶಿಸ್ತು ಕ್ರಮಕ್ಕೆ ಸಹ ಉಪಬಂಧವನ್ನು ಕಲ್ಪಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ವರ್ಷವೊಂದಕ್ಕೆ ಅಂದಾಜು ಐದು ಕೋಟಿ ರೂಪಾಯಿಗಳ ಅನಾವರ್ತಕ ವೆಚ್ಚ ಮತ್ತು ಎರಡು ಕೋಟಿ ರೂಪಾಯಿಗಳ ಆವರ್ತಕ ವೆಚ್ಚವುಂಟಾಗುತ್ತದೆ.

### ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನಾ ಪತ್ರ

**ಖಂಡ 5:** (1)ನೇ ಉಪಖಂಡವು, ಸೇವೆಗಳನ್ನು ಒದಗಿಸಲು ಅರ್ಜಿಯನ್ನು ಸ್ವೀಕರಿಸುವ ವಿಧಾನಕ್ಕೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 2:** ನಾಗರೀಕರಿಂದ ಅರ್ಜಿಗಳನ್ನು ಪಡೆಯುವ ಮತ್ತು ಅವುಗಳ ಸ್ಥಿತಿಗತಿಯನ್ನು ಮೇಲ್ವಿಚಾರಣೆ ಮಾಡುವ ವಿಧಾನಕ್ಕೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 8:** ಸೇವೆಯನ್ನು ಒದಗಿಸುವಲ್ಲಿ, ವಿಳಂಬ ಅಥವಾ ಕರ್ತವ್ಯ ಲೋಪವುಂಟಾದ ಸಂದರ್ಭದಲ್ಲಿ ನಾಗರೀಕರು ಪರಿಹಾರ ವೆಚ್ಚವನ್ನು ಕೋರುವ ವಿಧಾನಕ್ಕೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 10:** (3)ನೇ ಉಪಖಂಡವು, ಪರಿಹಾರ ವೆಚ್ಚದ ಸಂದಾಯದ ವಿಧಾನಕ್ಕೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 11:** (1)ನೇ ಉಪಖಂಡವು, ಸೇವೆಯನ್ನು ಒದಗಿಸುವಲ್ಲಿ ಉಂಟಾದ ವಿಳಂಬ ಅಥವಾ ಕರ್ತವ್ಯ ಲೋಪಕ್ಕೆ ಕಾರಣನಾದ ಸಾರ್ವಜನಿಕ ನೌಕರನಿಗೆ ನೋಟೀಸನ್ನು ನೀಡಿ, ಅಂಥ ಸಾರ್ವಜನಿಕ ನೌಕರನಿಂದ ಸದರಿ ವೆಚ್ಚವನ್ನು ವಸೂಲಿ ಮಾಡುವ ವಿಧಾನಕ್ಕೆ ಸಂಬಂಧಿಸಿದ ನಿಯಮಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 13:** ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರವು ದಾವೆಯ ಅಧಿವಿಚಾರಣೆಯನ್ನು ನಡೆಸುವಾಗ ಇತರ ಯಾವುದೇ ವಿಷಯಗಳ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯವು ಹೊಂದಿರುವ ಅಧಿಕಾರಗಳನ್ನು ಹೊಂದುವುದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 19:** ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಸಂಬಂಧಿಸಿದಂತೆ ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ಸಾಮಾನ್ಯ ಸ್ವರೂಪದ್ದಾಗಿದೆ.

ಮುಖ್ಯಮಂತ್ರಿ

ಸಭಾಧ್ಯಕ್ಷರು ಅಂಗೀಕರಿಸಬೇಕಾದಾಗ ಹೇಳುವ ಅಂಶಗಳು

ಸದರಿ ವಿದೇಯಕವನ್ನು ಹಂತಹಂತವಾಗಿ ಮತಕ್ಕೆ ಹಾಕಲಾಗುವುದು.

## ಅನುಬಂಧ – XIII

## (ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು 324 ರಿಂದ 351ರ ಉದ್ಧೃತ ಭಾಗ)

### ಸದಸ್ಯರು ಪಾಲಿಸಬೇಕಾದ ನಿಯಮಗಳು

**324. ಸದನದಲ್ಲಿ ಉಪಸ್ಥಿತರಿದ್ದಾಗ ಸದಸ್ಯರು ಪಾಲಿಸಬೇಕಾದ ನಿಯಮಗಳು:**

**ಸಭೆಯ ಉಪವೇಶನದಲ್ಲಿ ಸದಸ್ಯನು:**

(1) ಸದನದ ಕಾರ್ಯಕಲಾಪಕ್ಕೆ ಸಂಬಂಧಿಸಿರುವುದನ್ನು ಹೊರತು, ಯಾವುದೇ ಪುಸ್ತಕ, ವಾರ್ತಾ ಪತ್ರಿಕೆ ಅಥವಾ ಕಾಗದವನ್ನು ಓದತಕ್ಕದ್ದಲ್ಲ.

(2) ಯಾವನೇ ಸದಸ್ಯನು ಮಾತನಾಡುತ್ತಿರುವಾಗ ಅವನಿಗೆ ದುರ್ವಚನೆಗಳಿಂದ ಅಥವಾ ಏರುಸ್ವರದಿಂದ ಅಥವಾ ಇತರ ಯಾವುದೇ ಕ್ರಮಬಾಹಿರ ರೀತಿಯಲ್ಲಿ ತೊಂದರೆಯುಂಟು ಮಾಡತಕ್ಕದ್ದಲ್ಲ.

(3) ಸದನವನ್ನು ಪ್ರವೇಶಿಸುವಾಗ ಅಥವಾ ಅಲ್ಲಿಂದ ನಿರ್ಗಮಿಸುವಾಗ ಮತ್ತು ತಮ್ಮ ಜಾಗದಲ್ಲಿ ಕುಳಿತುಕೊಳ್ಳುವಾಗ ಅಥವಾ ಜಾಗವನ್ನು ಬಿಡುವಾಗ ಅಧ್ಯಕ್ಷರಿಗೆ ವಂದಿಸತಕ್ಕದ್ದು.

(4) ಅಧ್ಯಕ್ಷರ ಮತ್ತು ಮಾತನಾಡುತ್ತಿರುವ ಸದಸ್ಯರ ಮಧ್ಯೆ ಹಾದು ಹೋಗತಕ್ಕದ್ದಲ್ಲ.

(5) ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವಾಗ ಸದನವನ್ನು ತ್ಯಜಿಸತಕ್ಕದ್ದಲ್ಲ.

(6) ಯಾವಾಗಲೂ ಅಧ್ಯಕ್ಷರನ್ನು ಸಂಬೋಧಿಸಿ ಮಾತನಾಡತಕ್ಕದ್ದು.

(7) ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ತನ್ನ ಸ್ಥಾನದಲ್ಲಿರತಕ್ಕದ್ದು.

(8) ಸದನದಲ್ಲಿ ಮಾತನಾಡದೇ ಇರುವ ಸಮಯದಲ್ಲಿ ನಿಶ್ಯಬ್ಧವಾಗಿರತಕ್ಕದ್ದು.

(9) ಸಭೆಯ ಕಾರ್ಯವಿಧಿಗೆ ತಡೆ ಅಥವಾ ವಿಘ್ನವನ್ನು ತರತಕ್ಕದ್ದಲ್ಲ ಮತ್ತು ಸದನದಲ್ಲಿ ಭಾಷಣವಾಗುತ್ತಿರುವಾಗ ವೀಕ್ಷಕ ವಿವರಣೆಯನ್ನು ಮಾಡತಕ್ಕದ್ದಲ್ಲ.

(10) ಯಾವುದೇ ಉಪ್ಪರಿಗೆಯ ಮೊಗಸಾಲೆಯನ್ನು (ಗ್ಯಾಲರಿಯನ್ನು) ಒಬ್ಬ ಅಪರಿಚಿತನು ಪ್ರವೇಶಿಸಿದಾಗ ಚಪ್ಪಾಳೆ ಹೊಡೆಯತಕ್ಕದ್ದಲ್ಲ.

(11) ಮಾತನಾಡುತ್ತಿರುವಾಗ, ಯಾವುದೇ ಉಪ್ಪರಿಗೆಯ ಮೊಗಸಾಲೆಯಲ್ಲಿರುವ (ಗ್ಯಾಲರಿಯಲ್ಲಿ) ಅಪರಿಚಿತರನ್ನು ಕುರಿತು ಮಾತನಾಡತಕ್ಕದ್ದಲ್ಲ.

(12) ಸದನದಲ್ಲಿ ಘೋಷಣೆಯನ್ನು ಕೂಗತಕ್ಕದ್ದಲ್ಲ;

(13) ಪೀಠಕ್ಕೆ ಬೆನ್ನು ತೋರಿಸುವಂತೆ ಕುಳಿತುಕೊಳ್ಳತಕ್ಕದ್ದಲ್ಲ ಅಥವಾ ನಿಲ್ಲತಕ್ಕದ್ದಲ್ಲ.

(14) ಸದನದಲ್ಲಿ ಪೀಠದ ಬಳಿ ಖುದ್ದಾಗಿ ಹೋಗತಕ್ಕದ್ದಲ್ಲ ಅವಶ್ಯಕತೆಯುಂಟಾದರೆ ಅವರು ವಿಧಾನ ಮಂಡಲದ ಮುಂದೆ ಅಧಿಕಾರಿಗಳಿಗೆ ಚೀಟಿ ನೀಡಬಹುದು.

(15) ಸದನದಲ್ಲಿ ಬ್ಯಾಡ್ಜುಗಳು ಅಥವಾ ಯಾವುದೇ ವಸ್ತುವನ್ನು ಧರಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ.

(16) ಸದನದಲ್ಲಿ ಶಸ್ತ್ರಗಳನ್ನು ತರತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ.

(17) ಸದನದಲ್ಲಿ ಬಾವುಟಗಳು, ಲಾಂಛನಗಳು ಅಥವಾ ಯಾವುದೇ ನಿಶಾನೆಗಳನ್ನು ಪ್ರದರ್ಶಿಸತಕ್ಕದ್ದಲ್ಲ.

(18) ತನ್ನ ಭಾಷಣವಾದ ತರುವಾಯ, ಕೂಡಲೇ ಸದನವನ್ನು ಬಿಟ್ಟು ಹೋಗತಕ್ಕದ್ದಲ್ಲ.

(19) ಸದನದ ವ್ಯವಹಾರಗಳಿಗೆ ಸಂಬಂಧಪಡದ ಯಾವುದೇ ಬರವಣಿಗೆ, ಪ್ರಶ್ನಾವಳಿ, ಕರಪತ್ರಗಳು ಪತ್ರಿಕಾ ಹೇಳಿಕೆಗಳು, ಕಾಗದದ ಹಾಳೆಗಳು, ಮೊದಲಾದುವನ್ನು ಸದನದ ಆವರಣದೊಳಗೆ ಹಂಚತಕ್ಕದ್ದಲ್ಲ.

(20) ಸದನದಲ್ಲಿ ಡೆಸ್ಕ್ ಮೇಲೆ ತನ್ನ ಟೋಪಿಯನ್ನು ಇಡತಕ್ಕದ್ದಲ್ಲ, ಕಡತಗಳನ್ನು ಇಡಲು ಅಥವಾ ಬರೆಯುವ ಉದ್ದೇಶಕ್ಕಾಗಿ ರಟ್ಟನ್ನು ತರತಕ್ಕದ್ದಲ್ಲ, ಧೂಮಪಾನ ಮಾಡತಕ್ಕದ್ದಲ್ಲ ಅಥವಾ ಕೋಟನ್ನು ಕೈನಲ್ಲಿ ಹಿಡಿದು ಸದನವನ್ನು ಪ್ರವೇಶಿಸಿತಕ್ಕದ್ದಲ್ಲ.

(21) ಆರೋಗ್ಯದ ಕಾರಣಗಳ ಮೇಲೆ ವಿಧಾನ ಸಭಾಧ್ಯಕ್ಷರ ಅನುಮತಿ ಪಡೆಯದೆ ಊರುಗೋಲನ್ನು ತರತಕ್ಕದ್ದಲ್ಲ.

(22) ಸದನದಲ್ಲಿ ಪ್ರತಿಭಟನೆ ಸೂಚಿಸಿ ಕಾಗದ ಪತ್ರಗಳನ್ನು ಹರಿದುಹಾಕತಕ್ಕದ್ದಲ್ಲ;

(23) ಸದನದಲ್ಲಿ ಕ್ಯಾಸೆಟ್ ಅಥವಾ ಟೇಪ್ ರೆಕಾರ್ಡರ್‌ಗಳನ್ನು ತರತಕ್ಕದ್ದಲ್ಲ ಮತ್ತು ಹಾಕತಕ್ಕುದಲ್ಲ ಮತ್ತು

(24) ಸದನಕ್ಕೆ ಜೋರಾಗಿ ಕೇಳಿಸುವಂತೆ ಮೊಗಸಾಲೆಯಲ್ಲಿ ಮಾತನಾಡತಕ್ಕುದಲ್ಲ ಅಥವಾ ನಗತಕ್ಕದಲ್ಲ.

**325. ಅಧ್ಯಕ್ಷರಿಂದ ಕರೆಬಂದಾಗ ಸದಸ್ಯರು ಮಾತನಾಡುವುದು:** ಒಬ್ಬ ಸದಸ್ಯನು ಮಾತನಾಡಲು ಎದ್ದುನಿಂತರೆ, ಅಧ್ಯಕ್ಷರು ಅವರ ಹೆಸರನ್ನು ಕರೆಯತಕ್ಕದ್ದು. ಒಬ್ಬರಿಗಿಂತ ಹೆಚ್ಚು ಸದಸ್ಯರು ಏಕಕಾಲದಲ್ಲಿ ಎದ್ದು ನಿಂತರೆ, ಅಧ್ಯಕ್ಷರು ಹೆಸರು ಕರೆದಿರುವ ಸದಸ್ಯರಿಗೆ ಮಾತನಾಡಲು ಹಕ್ಕಿರುವುದು.

**326. ಸದನವನ್ನು ಉದ್ದೇಶಿಸಿ ಮಾತನಾಡುವ ರೀತಿ :** ಸದನದಲ್ಲಿ ಯಾವುದೇ ವಿಷಯದ ಬಗ್ಗೆ ಒಬ್ಬ ಸದಸ್ಯನು ಯಾವುದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಲಿಚ್ಛಿಸಿದರೆ, ತನ್ನ ಸ್ಥಳದಿಂದಲೇ ಎದ್ದುನಿಂತು ಅಧ್ಯಕ್ಷರನ್ನು ಸಂಬೋಧಿಸಿ ಮಾತನಾಡತಕ್ಕದ್ದು, ಪರಂತು, ಕಾಯಿಲೆ ಅಥವಾ ದುರ್ಬಲತೆಯಿಂದ ನಿಶ್ಶಕ್ತರಾಗಿರುವವರನ್ನು ಕುಳಿತುಕೊಂಡೆ ಮಾತನಾಡಲು ಅನುಮತಿಸಬಹುದು.

**327. ಮಾತನಾಡುವಾಗ ಪಾಲಿಸಬೇಕಾದ ನಿಯಮಗಳು :**

**ಸದಸ್ಯರು ಮಾತನಾಡುವಾಗ;–**

(1) ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ತೀರ್ಪು ನೀಡಿರದ ಯಾವುದೇ ಸಂಗತಿಯನ್ನು ಕುರಿತು ಮಾತನಾಡತಕ್ಕದ್ದಲ್ಲ.

(2) ಸದಸ್ಯರೊಬ್ಬರ ಮೇಲೆ ವೈಯಕ್ತಿಕ ದೋಷಾರೋಪಣೆ ಮಾಡತಕ್ಕದ್ದಲ್ಲ.

(3) ಸಂಸತ್ತು ಅಥವಾ ಯಾವುದೇ ರಾಜ್ಯ ವಿಧಾನ ಮಂಡಲದ ವ್ಯವಹರಣೆಗಳು ಮತ್ತು ನಡವಳಿಕೆಗಳನ್ನು ಕುರಿತು ಹೀನಾಯವಾಗಿ ಮಾತನಾಡತಕ್ಕದ್ದಲ್ಲ.

(4) ಸದನದ ಯಾವುದೇ ತೀರ್ಮಾನವನ್ನು ಕುರಿತು ಅದನ್ನು ರದ್ದುಪಡಿಸಲು ಪ್ರಸ್ತಾವ ಮಂಡಿಸುವಾಗ ಹೊರತು ಇನ್ನಾವುದೇ ಆರೋಪಣೆ ಮಾಡತಕ್ಕದ್ದಲ್ಲ.

(5) ಸರಿಯಾದ ವಾಕ್ಯಗಳಲ್ಲಿ ರಚಿಸಲಾದ ಆಧಾರಸಹಿತ ಪ್ರಸ್ತಾವದ ಮೇಲೆ ಚರ್ಚೆ ನಡೆಸಿದ್ದ ಹೊರತು ಉನ್ನತಾಧಿಕಾರದಲ್ಲಿರುವ ವ್ಯಕ್ತಿಗಳ ನಡವಳಿಕೆ ಕುರಿತು ಆರೋಪಿಸತಕ್ಕದ್ದಲ್ಲ.

**ವಿವರಣೆ:** ಉನ್ನತಾಧಿಕಾರದಲ್ಲಿರುವ ವ್ಯಕ್ತಿಗಳು ಎಂದರೆ ಭಾರತ ಸಂವಿಧಾನದ ಮೇರೆಗೆ ಯಾವ ನಡವಳಿಕೆಯನ್ನು ಸರಿಯಾದ ವಾಕ್ಯಗಳಲ್ಲಿ ರಚಿಸಿದ ಆಧಾರಸಹಿತ ಪ್ರಸ್ತಾವಗಳ ಮೇಲೆ ಮಾತ್ರವೇ ಚರ್ಚೆ ನಡೆಸಬಹುದೋ ಆ ವ್ಯಕ್ತಿಗಳು ಅಥವಾ ಯಾರ ನಡವಳಿಕೆಯನ್ನು ತಾವು ಒಪ್ಪುವಂತಹ ವಾಕ್ಯಗಳಲ್ಲಿ ರಚಿಸಲಾದ ಆಧಾರಸಹಿತ ಪ್ರಸ್ತಾವದ ಮೇಲೆ ಮಾತ್ರವೇ ಚರ್ಚಿಸತಕ್ಕದ್ದು ಎಂದು ಅಧ್ಯಕ್ಷರು ಅಭಿಪ್ರಾಯಪಡುತ್ತಾರೋ ಆ ವ್ಯಕ್ತಿಗಳು ;

(6) ಚರ್ಚೆಯ ಮೇಲೆ ಪ್ರಭಾವ ಬೀರುವುದಕ್ಕಾಗಿ ರಾಜ್ಯಪಾಲರ ಹೆಸರನ್ನು ಉಪಯೋಗಿಸತಕ್ಕದ್ದಲ್ಲ;

(7) ರಾಷ್ಟ್ರದ್ರೋಹ, ರಾಷ್ಟ್ರವಿರೋಧಿ ಅಥವಾ ಅಪಮಾನಕರವಾದ ಮಾತುಗಳನ್ನು ಆಡತಕ್ಕದ್ದಲ್ಲ.

(8) ಸದನದ ಕಾರ್ಯಕಲಾಪಗಳನ್ನು ಅಡ್ಡಿಪಡಿಸುವುದಕ್ಕಾಗಿ ತಮ್ಮ ವಾಕ್ ಸ್ವಾತಂತ್ರವನ್ನು ಬಳಸಬಾರದು.

(9) ವಿಧಾನ ಸಭಾಧ್ಯಕ್ಷರ ಪರ ಅಥವಾ ವಿಧಾನಮಂಡಲ ಕಾರ್ಯಾಲಯದ ಯಾವುದೇ ಉದ್ದೇಶವನ್ನು ಕುರಿತು ಆರೋಪಿಸತಕ್ಕದ್ದಲ್ಲ.

(10) ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಯನ್ನು ಕುರಿತು ಆರೋಪಿಸತಕ್ಕದ್ದಲ್ಲ ಅಥವಾ ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ ರಾಷ್ಟ್ರಾಧ್ಯಕ್ಷರ ಹೆಸರನ್ನು ಬಳಸತಕ್ಕದ್ದಲ್ಲ ;

(11) ಯಾವುದೇ ಗ್ಯಾಲರಿಯಲ್ಲಿರುವ ಅಪರಿಚಿತರ ಬಗ್ಗೆ ಯಾವುದೇ ಉಲ್ಲೇಖ ಮಾಡತಕ್ಕದ್ದಲ್ಲ;

(12) ಸರ್ಕಾರಿ ಅಧಿಕಾರಿಗಳನ್ನು ಹೆಸರು ಹಿಡಿದು ಕರೆಯತಕ್ಕದ್ದಲ್ಲ; ಮತ್ತು

(13) ಪೀಠದ ಪೂರ್ವಾನುಮತಿಯ ಹೊರತು ಬರವಣಿಗೆಯಲ್ಲಿರುವ ಭಾಷಣವನ್ನು ಓದತಕ್ಕದ್ದಲ್ಲ;

**328. ಒಬ್ಬ ವ್ಯಕ್ತಿಯನ್ನು ಕುರಿತು ಆಪಾದನೆಯ ಬಗ್ಗೆ ಕೈಗೊಳ್ಳಬೇಕಾದ ಕಾರ್ಯವಿಧಾನ:** ಸದಸ್ಯರು ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವ ಮಾಹಿತಿಯನ್ನು ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾವ ವ್ಯಕ್ತಿಯನ್ನು ಕುರಿತು ಅಪಮಾನಕರವಾದ ಅಥವಾ ಅಪರಾಧದ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕುದಲ್ಲ, ಅಲ್ಲದೆ ಅಧ್ಯಕ್ಷರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದು ತರುವಂತಹದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಸಾಧಿತವಾಗುವುದಿಲ್ಲ ಎಂದು ಅಭಿಪ್ರಾಯ ಪಡುವುದಾದರೆ, ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂಥ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು.

**329. ಪರಿಷತ್ತಿನಲ್ಲಿ ಮಾಡಲಾದ ಭಾಷಣಗಳನ್ನು ಉದ್ಧರಿಸುವುದಕ್ಕೆ ಪ್ರತಿಬಂಧ :** ಪರಿಷತ್ತಿನಲ್ಲಿ ಮಾಡಲಾದ ಯಾವುದೇ ಭಾಷಣವನ್ನು ಅದು ಒಂದು ಕಾರ್ಯನೀತಿಯ ಬಗ್ಗೆ ಸಚಿವರ ಸ್ಪಷ್ಟ ಹೇಳಿಕೆಯಾಗಿದ್ದ ಹೊರತು ಸದನದಲ್ಲಿ ಉದ್ಧರಿಸತಕ್ಕದ್ದಲ್ಲ.

ಆದರೂ, ಅಧ್ಯಕ್ಷರು ತಮಗೆ ಮುಂಚಿತವಾಗಿ ಸಲ್ಲಿಸಿದ ಕೋರಿಕೆಯ ಮೇಲೆ ಯಾರೇ ಸದಸ್ಯರಿಗೆ ಪರಿಷತ್ತಿನಲ್ಲಿನ ಭಾಷಣಗಳನ್ನು ಉದ್ಧರಿಸಲು ಅಥವಾ ಅಲ್ಲಿನ ಕಾರ್ಯವಿಧಾನವನ್ನು ಕುರಿತು ಉಲ್ಲೇಖಿಸಲು, ಹಾಗೆ ಮಾಡುವುದು ಆ ಸದಸ್ಯರು ಹಕ್ಕು ಬಾಧ್ಯತೆಯ ಅಥವಾ ಕಾರ್ಯವಿಧಾನದ ಅಂಶವೊಂದನ್ನು ವಿಶದೀಕರಿಸಲು ಅವಶ್ಯವೆಂದು ಅಧ್ಯಕ್ಷರು ಯೋಚಿಸಿದಲ್ಲಿ, ಅನುಮತಿ ನೀಡಬಹುದು.

**330. ಪ್ರಶ್ನೆಗಳನ್ನು ಅಧ್ಯಕ್ಷರ ಮುಖಾಂತರವಾಗಿ ಕೇಳತಕ್ಕದ್ದು:** ಚರ್ಚೆ ನಡೆಯುತ್ತಿರುವಾಗ ವಿವರಣೆ ಉದ್ದೇಶಗಳಿಗಾಗಿ ಅಥವಾ ಇನ್ನಾವುದೇ ಸಾಕಷ್ಟು ಕಾರಣಗಳಿಗಾಗಿ ಸದನದಲ್ಲಿ ಆಗ ಪರ್ಯಾಲೋಚನೆಯಲ್ಲಿರುವ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ಸದಸ್ಯರು ಇನ್ನೊಬ್ಬ ಸದಸ್ಯರಿಗೆ ಪ್ರಶ್ನೆಯನ್ನು ಕೇಳುವ ಅಗತ್ಯವುಂಟಾದರೆ, ಅವರು ತಮ್ಮ ಪ್ರಶ್ನೆಯನ್ನು ಅಧ್ಯಕ್ಷರ ಮೂಲಕ ಕೇಳತಕ್ಕದ್ದು.

**331. ಅಸಂಬಂಧಿತ ಅಥವಾ ಪುನರುಕ್ತಿ :** ಅಸಂಬಂಧ ವಿಷಯಗಳನ್ನು ಪ್ರಸ್ತಾಪಿಸುವ ಅಥವಾ ತನ್ನ ವಾದವನ್ನು ಅಥವಾ ಸದಸ್ಯರ ವಾದಗಳನ್ನು ಬೇಸರ ಮಾಡುವಷ್ಟು ಪುನಃ ಪುನಃ ಹೇಳುತ್ತಲೇ ಇರುವ ಸದಸ್ಯರೊಬ್ಬರ ವರ್ತನೆಯನ್ನು ಸದನದ ಗಮನಕ್ಕೆ ತಂದನಂತರ ಅಧ್ಯಕ್ಷರು ಆ ಸದಸ್ಯರನ್ನು ತಮ್ಮ ಭಾಷಣವನ್ನು ನಿಲ್ಲಿಸಬೇಕೆಂದು ನಿರ್ದೇಶಿಸಬಹುದು.

**332. ವೈಯಕ್ತಿಕ ವಿವರಣೆಗಳು:** ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಒಂದು ವಿಷಯವು ಸದನದ ಮುಂದೆ ಚರ್ಚೆಗೆ ಬಂದಿರದಿದ್ದರೂ ಆ ಬಗ್ಗೆ ತಮ್ಮ ವೈಯಕ್ತಿಕ ವಿವರಣೆಯನ್ನು ನೀಡಬಹುದು, ಆದರೆ ಹಾಗೆ ಮಾಡುವಾಗ ಯಾವುದೇ ಚರ್ಚಾಸ್ಪದ ಅಂಶವನ್ನು ತರತಕ್ಕದ್ದಲ್ಲ ಮತ್ತು ಆ ಬಗ್ಗೆ ಯಾವ ಚರ್ಚೆಗೂ ಅವಕಾಶ ನೀಡತಕ್ಕದ್ದಲ್ಲ.

**333. ಭಾಷಣಗಳ ಅನುಕ್ರಮ ಮತ್ತು ಉತ್ತರ ನೀಡಲು ಹಕ್ಕು:** (1) ಪ್ರಸ್ತಾವವನ್ನು ಸಭೆಯಲ್ಲಿ ಮಂಡಿಸಿದ ಸದಸ್ಯರು ಮಾತನಾಡಿದ ನಂತರ ಇತರ ಸದಸ್ಯರು ಅಧ್ಯಕ್ಷರು ಅವರ ಹೆಸರನ್ನು ಅನುಕ್ರಮದಲ್ಲಿಯೇ ಆ ಪ್ರಸ್ತಾವವನ್ನು ಕುರಿತು ಮಾತನಾಡತಕ್ಕದ್ದು. ಯಾರೇ ಸದಸ್ಯರು ಅಧ್ಯಕ್ಷರು ಕರೆದಾಗ ಮಾತನಾಡದಿದ್ದಲ್ಲಿ ಚರ್ಚೆ ಮುಂದುವರೆದಾಗ, ಅಧ್ಯಕ್ಷರ ಅನುಮತಿಯ ಮೇರೆಗೆ ಹೊರತು ಮಾತನಾಡಲು ಹಕ್ಕುಳ್ಳವರಾಗತಕ್ಕದ್ದಲ್ಲ.

(2) ಉತ್ತರ ಹೇಳುವ ತಮ್ಮ ಹಕ್ಕನ್ನು ಚಲಾಯಿಸುವಾಗ, ಹೊರತು ಅಥವಾ ಈ ನಿಯಮಗಳ ಮೂಲಕ ಅನ್ಯಥಾ ಉಪಬಂಧವಿರುವಂತೆ ಹೊರತು ಅಧ್ಯಕ್ಷರ ಅನುಮತಿ ಪಡೆದಲ್ಲದೆ ಯಾವ ಸದಸ್ಯರೂ ಒಂದು ಪ್ರಸ್ತಾವದ ಮೇಲೆ ಒಂದು ಸಲಕ್ಕಿಂತ ಹೆಚ್ಚು ಬಾರಿ ಮಾತನಾಡತಕ್ಕದ್ದಲ್ಲ.

(3) ಒಂದು ಪ್ರಸ್ತಾವವನ್ನು ಮಂಡಿಸಿದ ಸದಸ್ಯರು ಉತ್ತರ ಹೇಳುವ ಸಲುವಾಗಿ ಮತ್ತೊಮ್ಮೆ ಮಾತನಾಡಬಹುದು ಮತ್ತು ಪ್ರಸ್ತಾವವನ್ನು ಖಾಸಗಿ ಸದಸ್ಯರೊಬ್ಬರು ಮಂಡಿಸಿದ್ದರೆ, ಸಂಬಂಧಪಟ್ಟ ಸಚಿವರು ಅಧ್ಯಕ್ಷರ ಅನುಮತಿ ಪಡೆದು (ಅವರು ಚರ್ಚೆಯಲ್ಲಿ ಈ ಹಿಂದೆ ಮಾತನಾಡಿರಲಿ, ಇಲ್ಲದಿರಲಿ) ಪ್ರಸ್ತಾವ ಮಂಡಿಸಿದ ಸದಸ್ಯರು ಉತ್ತರ ನೀಡಿದನಂತರ ಮಾತನಾಡಬಹುದು.

ಆದರೂ, ಈ ಉಪನಿಯಮದಲ್ಲಿರುವುದು ಯಾವುದೂ ಒಂದು ವಿಧೇಯಕಕ್ಕೆ ತಿದ್ದುಪಡಿಯನ್ನು ಅಥವಾ ಒಂದು ನಿರ್ಣಯವನ್ನು ಪ್ರಸ್ತಾವಿಸಿ ಮಂಡಿಸುವ ಯಾವ ವ್ಯಕ್ತಿಗೂ ಅಧ್ಯಕ್ಷರ ಅನುಮತಿ ಪಡೆದಲ್ಲದೆ ಉತ್ತರ ನೀಡಲು ಯಾವುದೇ ಹಕ್ಕನ್ನು ನೀಡುತ್ತದೆ ಎಂದು ಭಾವಿಸತಕ್ಕದ್ದಲ್ಲ.

**334. ಪ್ರಸ್ತಾವ ಮಂಡಿಸಿದವರ ಉತ್ತರದೊಂದಿಗೆ ಚರ್ಚೆಯ ಸಮಾಪ್ತಿ :** 333ನೇ ನಿಯಮದ (3ನೇ) ಉಪನಿಯಮದ ಉಪಬಂಧಗಳಿಗೆ ಒಳಪಟ್ಟು ಮೂಲ ಪ್ರಸ್ತಾವವನ್ನು ಮಂಡಿಸಿದ ವ್ಯಕ್ತಿಯ ಉತ್ತರದೊಂದಿಗೆ ಎಲ್ಲಾ ಸಂದರ್ಭಗಳಲ್ಲಿಯೂ ಚರ್ಚೆಯು ಮುಕ್ತಾಯವಾಗತಕ್ಕದ್ದು.

**335. ಭಾಷಣಗಳ ಕಾಲಾವಧಿ :** ಅಧ್ಯಕ್ಷರು ನಿಯಮಗಳಲ್ಲಿ ನಿರ್ದಿಷ್ಟ ಉಪಬಂಧಗಳನ್ನು ಕಲ್ಪಿಸಿದರೆ ಸಂದರ್ಭಗಳಲ್ಲಿ ಮತ್ತು ಸದನದ ಕಾರ್ಯಕಲಾಪಗಳ ಪರಿಸ್ಥಿತಿಯನ್ನು ಮತ್ತು ಪ್ರಸ್ತಾವದ ಸ್ವರೂಪವನ್ನು ಗಮನದಲ್ಲಿರಿಸಿಕೊಂಡು ಪ್ರಸ್ತಾವವನ್ನು ಕುರಿತು ಭಾಷಣಗಳಿಗೆ ಕಾಲಮಿತಿಯನ್ನು ನಿಗದಿಪಡಿಸಬಹುದು.

**336. ಅಧ್ಯಕ್ಷರ ಭಾಷಣ :** ಅಧ್ಯಕ್ಷರು ಯಾವುದೇ ಸಮಯದಲ್ಲಿ ತಾವಾಗಿಯೇ ಅಥವಾ ಸದಸ್ಯರು ಯಾವುದೇ ಒಂದು ಅಂಶವನ್ನು ಎತ್ತಿದಾಗ ಅಥವಾ ಸದಸ್ಯರೊಬ್ಬರು ಮಾಡಿದ ವಿನಂತಿಯ ಮೇಲೆ, ಸದನದ ಮುಂದೆ ಪರ್ಯಾಲೋಚನೆಯಲ್ಲಿರುವ ವಿಷಯದ ಮೇಲೆ ಸದಸ್ಯರ ಚರ್ಚೆಗೆ ನೆರವು ನೀಡುವ ಉದ್ದೇಶದಿಂದ ಸಭೆಯನ್ನು ಉದ್ದೇಶಿಸಿ ಮಾತನಾಡಬಹುದು ಮತ್ತು ಹಾಗೆ ಅವರು ತಿಳಿಸಿದ ತಮ್ಮ ಅಭಿಪ್ರಾಯಗಳನ್ನು ಒಂದು ತೀರ್ಪು ಎಂದು ಪರಿಗಣಿಸತಕ್ಕದ್ದಲ್ಲ.

**337. ಅಧ್ಯಕ್ಷರು ಎದ್ದುನಿಂತಾಗ ಅನುಸರಿಸಬೇಕಾದ ಕಾರ್ಯವಿಧಾನ:** (1) ಅಧ್ಯಕ್ಷರು ಮಾತನಾಡಲು ಎದ್ದುನಿಂತುಕೊಂಡಾಗಲೆಲ್ಲ ಸದಸ್ಯರು ಮೌನದಿಂದಿದ್ದು ಅವರ ಮಾತುಗಳನ್ನು ಆಲಿಸಬೇಕು ಮತ್ತು ಆ ಸಮಯದಲ್ಲಿ ಮಾತನಾಡುತ್ತಿದ್ದ ಅಥವಾ ಮಾತನಾಡಲು ಆರಂಭಿಸಲಿದ್ದ ಸದಸ್ಯರು ಕೂಡಲೇ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕದ್ದು.

(2) ಅಧ್ಯಕ್ಷರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವಾಗ ಯಾವ ಸದಸ್ಯರು ತಮ್ಮ ಸ್ಥಾನದಿಂದ ಎದ್ದುಹೋಗತಕ್ಕದ್ದಲ್ಲ.

**338. ಮುಕ್ತಾಯ:** (1) ಪ್ರಸ್ತಾವವನ್ನು ಮಂಡಿಸಿದ ಅನಂತರ ಯಾವುದೇ ಸಮಯದಲ್ಲಿ ಯಾರೇ ಸದಸ್ಯರು "ಈಗ ಸಭೆಯ ಅಭಿಮತಕ್ಕೆ ಹಾಕಬೇಕು". ಎಂದು ಪ್ರಸ್ತಾವವನ್ನು ಮಂಡಿಸಬಹುದು ಮತ್ತು ಈ ಪ್ರಸ್ತಾವವು ಈ ನಿಯಮಾವಳಿಯ ದುರುಪಯೋಗ ಅಥವಾ ಸಮಂಜಸ ಚರ್ಚೆಗೆ ಇರುವ ಹಕ್ಕನ್ನು ಕುಂಠಿತಗೊಳಿಸುತ್ತದೆ ಎಂದು ಅಧ್ಯಕ್ಷರಿಗೆ ತೋರಿದ ಹೊರತು ಅಧ್ಯಕ್ಷರು "ಈಗ ಪ್ರಶ್ನೆಯನ್ನು ಕೇಳಬಹುದು" ಎಂಬ ಪ್ರಸ್ತಾವವನ್ನು ಮಂಡಿಸತಕ್ಕದ್ದು.

(2) "ಈಗ ಪ್ರಶ್ನೆಯನ್ನು ಕೇಳಬಹುದು" ಎಂಬ ಪ್ರಸ್ತಾವಕ್ಕೆ ಸಭೆಯ ಅನುಮೋದನೆ ದೊರೆತಲ್ಲಿ ಅದಕ್ಕೆ ಅನುಷಂಗಿಕವಾದ ಪ್ರಶ್ನೆಯನ್ನು ಅಥವಾ ಪ್ರಶ್ನೆಗಳನ್ನು ಹೆಚ್ಚಿನ ಚರ್ಚೆ ಇಲ್ಲದೆ ಕೂಡಲೇ ಕೇಳತಕ್ಕದ್ದು. ಆದಾಗ್ಯೂ ಅಧ್ಯಕ್ಷರು ಯಾರೇ ಸದಸ್ಯರಿಗೆ ಈ ನಿಯಮದ ಮೇರೆಗೆ ಅವರಿಗಿರುವ ಉತ್ತರ ನೀಡುವ ಹಕ್ಕನ್ನು ಚಲಾಯಿಸಲು ಅವಕಾಶ ನೀಡಬಹುದು.

**339. ಚರ್ಚೆಯ ಪರಿಮಿತಿ :** (1) ಒಂದು ವಿಧೇಯಕಕ್ಕೆ ಸಂಬಂಧಿಸಿದ ಯಾವುದೇ ಪ್ರಸ್ತಾವದ ಮೇಲಿನ ಚರ್ಚೆಯು ಅಥವಾ ಯಾವುದೇ ಇತರ ಪ್ರಸ್ತಾವದ ಮೇಲಿನ ಚರ್ಚೆಯೂ ವೇಳೆ ಮೀರಿ ಮುಂದುವರಿಯುತ್ತಾ ಹೋದಾಗಲೆಲ್ಲ ಅಧ್ಯಕ್ಷರು ಸಭೆಯ ಒಟ್ಟು ಅಭಿಪ್ರಾಯವನ್ನು ತಿಳಿದುಕೊಂಡು ಸಂದರ್ಭಾನುಸಾರ ವಿಧೇಯಕದ ಯಾವುದೇ ಹಂತ ಅಥವಾ ಎಲ್ಲಾ ಹಂತಗಳ ಮೇಲಿನ ಚರ್ಚೆಗಳನ್ನು ಅಥವಾ ಆ ಪ್ರಸ್ತಾವದ ಮೇಲಿನ ಚರ್ಚೆಗಳನ್ನು ಮುಕ್ತಾಯಗೊಳಿಸಲು ಕಾಲ ಪರಿಮಿತಿಯನ್ನು ನಿಗದಿಪಡಿಸತಕ್ಕದ್ದು.

(2) ಯಾವುದೇ ವಿಧೇಯಕ ಅಥವಾ ಪ್ರಸ್ತಾವದ ಒಂದು ನಿರ್ದಿಷ್ಟ ಹಂತವನ್ನು ಪೂರೈಸುವುದಕ್ಕಾಗಿ ಗೊತ್ತುಪಡಿಸಲಾದ ಸಮಯಮಿತಿಗೆ ಅನುಸಾರವಾಗಿ, ಗೊತ್ತಾದ ವೇಳೆಯಲ್ಲಿ ಅಧ್ಯಕ್ಷರು, ಚರ್ಚೆ ಅದಕ್ಕಿಂತ ಮುಂಚಿತವಾಗಿಯೇ ಮುಕ್ತಾಯವಾದ ಹೊರತು ವಿಧೇಯಕ ಅಥವಾ ಪ್ರಸ್ತಾವದ ಆ ಹಂತದ ಸಂಬಂಧದಲ್ಲಿ ಉಳಿದಿರುವ ಎಲ್ಲ ಪ್ರಮುಖ ಅಂಶಗಳನ್ನು ಇತ್ಯರ್ಥಗೊಳಿಸಲು ಅಗತ್ಯವಾದ ಪ್ರತಿಯೊಂದು ಪ್ರಶ್ನೆಯನ್ನು ಕೂಡಲೇ ಹಾಕತಕ್ಕದ್ದು.

(4) ಇತ್ಯರ್ಥಕ್ಕಾಗಿ ಪ್ರಶ್ನೆ

**340. ಸದನದ ನಿರ್ಣಯವನ್ನು ಪಡೆಯಲು ಅನುಸರಿಸಬೇಕಾದ ಕಾರ್ಯ ವಿಧಾನ:** ಸದನದ ನಿರ್ಣಯವನ್ನು ಪಡೆಯಬೇಕಾಗಿರುವ ಯಾವುದೇ ವಿಷಯವು ಯಾವೊಬ್ಬ ಸದಸ್ಯರು ಮಾಡಿದ ಪ್ರಸ್ತಾವದ ಆಧಾರದ ಮೇಲೆ ಅಧ್ಯಕ್ಷರು ಕೇಳುವ ಪ್ರಶ್ನೆಯ ಮೂಲಕ ನಿರ್ಧರಿಸತಕ್ಕದ್ದು.

**341. ಪ್ರಸ್ತಾವ ಮತ್ತು ಇತ್ಯರ್ಥಕ್ಕಾಗಿ ಪ್ರಶ್ನೆಯನ್ನು ಹಾಕುವುದು:** ಒಂದು ಪ್ರಸ್ತಾವವನ್ನು ಸೂಚಿಸಿದಾಗ ಅಧ್ಯಕ್ಷರು ಅದರ ಪರವಾಗಿ ಮತ್ತು ಅದಕ್ಕೆ ವಿರೋಧವಾಗಿ, ಸದಸ್ಯರ ಮತಗಳನ್ನು ಕೇಳುವ ಪ್ರಶ್ನೆಯನ್ನು ಹಾಕಿ ಅದಕ್ಕೆ ಅದನ್ನು ಸಭೆಯ ತೀರ್ಮಾನಕ್ಕೆ ಬಿಡತಕ್ಕದ್ದು. ಒಂದು ಪ್ರಸ್ತಾವದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಪ್ರತ್ಯೇಕವಾದ ವಿಚಾರಗಳು ಅಡಕವಾಗಿದ್ದ ಪಕ್ಷದಲ್ಲಿ, ಅವುಗಳಲ್ಲಿ ಒಂದೊಂದರ ವಿಷಯವಾಗಿಯೂ ಸದನದ ಅಭಿಪ್ರಾಯವನ್ನು ನಿರ್ಧರಿಸಲು ಅಧ್ಯಕ್ಷರು ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಬಹುದು.

**342. ಮತವನ್ನು ಗ್ರಹಿಸಿದ ಮೇಲೆ ಸದಸ್ಯರು ಆ ವಿಷಯದ ಮೇಲೆ ಮಾತನಾಡಕೂಡದು:** ಅಧ್ಯಕ್ಷರು ಒಂದು ವಿಷಯದ ಮೇಲೆ ಅದರ ಪರವಾಗಿರುವ ಮತ್ತು ಅದಕ್ಕೆ ವಿರೋಧವಾಗಿರುವ ಸದಸ್ಯರ "ಹೌದು ಅಥವಾ ಅಲ್ಲ" ಎಂಬ ಅಭಿಮತವನ್ನು ಪಡೆದ ತರುವಾಯ ಆ ವಿಷಯದ ಮೇಲೆ ಯಾವ ಸದಸ್ಯರೂ ಪುನಃ ಮಾತನಾಡತಕ್ಕದ್ದಲ್ಲ.

**343. ಪ್ರಸ್ತಾಪಿಸಲ್ಪಟ್ಟ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುವುದು :** ಒಬ್ಬ ಸಚಿವರು ಸದನದ ಮುಂದೆ ಹಾಜರುಪಡಿಸಿದ ಒಂದು ಕಾಗದವನ್ನು ಅಥವಾ ರಾಜ್ಯದ ಇತರ ಪತ್ರವನ್ನು ಸದನದಲ್ಲಿ ಪ್ರಸ್ತಾಪಿಸಿದ ಪಕ್ಷದಲ್ಲಿ ಅವರು ಸಂಬಂಧಪಟ್ಟ ಆ ಪತ್ರವನ್ನು ಸಭೆಯ ಮುಂದೆ ಇಡತಕ್ಕದ್ದು.

ಆದರೆ, ಈ ನಿಯಮವು ಕಾಗದಪತ್ರಗಳನ್ನು ಹಾಜರುಪಡಿಸುವುದರಿಂದ ಸಾರ್ವಜನಿಕ ಹಿತಸಾಧನೆಗೆ ಅಸಂಗತವಾದ ಸ್ವಭಾವದವುಗಳಾಗಿರುತ್ತವೆಂಬುದಾಗಿ ಸಚಿವರಿಂದ ತಿಳಿಸಲಾಗುವಂಥ ಕಾಗದ ಪತ್ರಗಳಿಗೆ ಅನ್ವಯಿಸತಕ್ಕದ್ದಲ್ಲ.

ಅಷ್ಟೇ ಅಲ್ಲದೆ, ಅಂಥ, ಕಾಗದದ ಅಥವಾ ರಾಜ್ಯಪತ್ರದ ಸಾರಾಂಶ ಅಥವಾ ಮುಖ್ಯಾಂಶಗಳನ್ನು ಒಬ್ಬ ಸಚಿವರು ತಮ್ಮ ಸ್ವಂತ ಮಾತುಗಳಲ್ಲಿ ತಿಳಿಸಿದಾಗ ಸಂಬಂಧಪಟ್ಟ ಕಾಗದ ಪತ್ರವನ್ನು ಸಭೆಯ ಮುಂದಿಡುವುದು ಅವಶ್ಯಕವಾಗಿರತಕ್ಕದ್ದಲ್ಲ.

**344. ಸಭೆಯ ಮುಂದಿಟ್ಟ ಕಾಗದ ಪತ್ರಗಳ ಬಗೆಗಿನ ವ್ಯವಹಾರ :** 1) ಸಭೆಯ ಮುಂದಿಟ್ಟ ಒಂದು ಕಾಗದ ಅಥವಾ ದಸ್ತಾವೇಜನ್ನು ಅದನ್ನು ಮಂಡಿಸುವ ಸದಸ್ಯರಿಂದ ಕ್ರಮವಾಗಿ ಅಧಿಕೃತಗೊಳಿಸತಕ್ಕದ್ದು.

(2) ಸಭೆಯ ಮುಂದಿಟ್ಟ ಎಲ್ಲ ಕಾಗದಗಳೂ ಮತ್ತು ದಸ್ತಾವೇಜುಗಳೂ ಸಾರ್ವಜನಿಕವಾದುದೆಂದು ಭಾವಿಸತಕ್ಕದ್ದು.

**345. ಮಂತ್ರಿಗಳಿಂದ ಹೇಳಿಕೆ:** ವಿಧಾನ ಸಭಾಧ್ಯಕ್ಷರ ಅನುಮತಿ ಪಡೆದು ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಹೇಳಿಕೆ ನೀಡಬಹುದು. ಅಂತಹ ಹೇಳಿಕೆಯ ಮೇಲೆ ಯಾವುದೇ ಚರ್ಚೆಗೆ ಅವಕಾಶವಿರತಕ್ಕದ್ದಲ್ಲ. ಆದರೆ, ರಾಜ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಪಡೆಯುವ ಉದ್ದೇಶಕ್ಕಾಗಿ ಪ್ರಶ್ನೆಗಳನ್ನು ಕೇಳಲು ಸದಸ್ಯರಿಗೆ ಅನುಮತಿ ನೀಡಬಹುದು.

**346. ಮತಗಳ ಎಣಿಕೆ:** (1) ಒಂದು ಚರ್ಚೆಯು ಮುಕ್ತಾಯವಾದ ಮೇಲೆ ಅಧ್ಯಕ್ಷರು ಚರ್ಚೆಯ ವಿಷಯವನ್ನು ಸಭೆಯ ಮುಂದೆ ಮಂಡಿಸತಕ್ಕದ್ದು ಮತ್ತು ಪ್ರಸ್ತಾವಕ್ಕೆ ಒಪ್ಪಿಗೆಯುಳ್ಳವರು, "ಹೌದು" ಎಂದು ಹೇಳಬೇಕೆಂಬುದಾಗಿಯೂ ಮತ್ತು ಅದಕ್ಕೆ ವಿರೋಧವಾಗಿರುವವರು "ಇಲ್ಲ" ಎಂದು ಹೇಳಬೇಕೆಂದಾಗಿಯೂ ತಿಳಿಸಬೇಕು.

(2) ಅಧ್ಯಕ್ಷರು, ಅನಂತರ, ತೀರ್ಮಾನವು "ಹೌದು" ಎಂದು ಹೇಳುವವರಿಗೆ (ಅಥವಾ ಆಯಾ ಸಂದರ್ಭಾನುಸಾರವಾಗಿ "ಇಲ್ಲ" ಎಂದು ಹೇಳುವವರಿಗೆ) ಅನುಕೂಲವಾಗಿದೆಯೆಂದು ನನಗೆ ತೋರುತ್ತದೆ ಎಂದು ತಿಳಿಯತಕ್ಕದ್ದು, ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪ್ರತಿಭಟಿಸದಿದ್ದಲ್ಲಿ ಅವರ ತೀರ್ಮಾನವು "ಹೌದು" ಎನ್ನುವವರೆಗೆ (ಅಥವಾ ಆಯಾ ಸಂದರ್ಭಾನುಸಾರವಾಗಿ "ಇಲ್ಲ" ಎನ್ನುವವರೆಗೆ) ಅನುಕೂಲವಾಗಿದೆ ಎಂದು ಎರಡು ಸಲ ಹೇಳತಕ್ಕದ್ದು ಮತ್ತು ಸದನದ ಮುಂದೆ ತೀರ್ಮಾನಕ್ಕೆ ಬಂದಿರುವ ವಿಚಾರವನ್ನು ಅದಕ್ಕೆ ತಕ್ಕಂತೆ ತೀರ್ಮಾನಿಸತಕ್ಕದ್ದು.

(3) ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪ್ರತಿಭಟಿಸಿದ್ದಲ್ಲಿ ಮತದ ಎಣಿಕೆ ಗಂಟೆಯನ್ನು ಎರಡು ನಿಮಿಷಗಳವರೆಗೆ ಬಾರಿಸುವಂತೆ ವ್ಯವಸ್ಥೆ ಮಾಡತಕ್ಕದ್ದು.

(4) ಆ ಎರಡು ನಿಮಿಷಗಳು ಮುಗಿದ ಮೇಲೆ ಬಾಗಿಲುಗಳನ್ನು ಮುಚ್ಚಿ ಬಿಡುವಂತೆ ಹೇಳತಕ್ಕದ್ದು ಮತ್ತು ಪ್ರಶ್ನೆಯನ್ನು ಎರಡನೆಯ ಸಲ ಹಾಕಬೇಕು. ಮತ್ತು ಪ್ರಸ್ತಾವಕ್ಕೆ ಒಪ್ಪಿಗೆಯುಳ್ಳವರು "ಹೌದು" ಎಂದು ಹೇಳಬೇಕೆಂಬುದಾಗಿಯೂ ಮತ್ತು ಅದಕ್ಕೆ ವಿರೋಧವಾಗಿರುವವರು "ಇಲ್ಲ" ಎಂದು ಹೇಳಬೇಕೆಂಬುದಾಗಿಯೂ ತಿಳಿಸತಕ್ಕದ್ದು.

(5) ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪುನಃ ಪ್ರತಿಭಟಿಸಿದರೆ, ಅವರು ತಾವು ಯುಕ್ತವೆಂದು ಭಾವಿಸಿದರೆ "ಹೌದು" ಎನ್ನುವ ಅಭಿಪ್ರಾಯವುಳ್ಳ ಮತ್ತು "ಇಲ್ಲ" ಎನ್ನುವ ಅಭಿಪ್ರಾಯವುಳ್ಳ ಸದಸ್ಯರು ಕ್ರಮವಾಗಿ ತಮ್ಮ ತಮ್ಮ ಸ್ಥಳಗಳಲ್ಲಿ ಎದ್ದು ಸಭೆಯ ತೀರ್ಮಾನವನ್ನು ಪ್ರಕಟಿಸಬಹುದು. ಅಂಥ ಸಂದರ್ಭಗಳಲ್ಲಿ ಮತಗಳನ್ನು ಕೊಟ್ಟವರ ಹೆಸರುಗಳನ್ನು ದಾಖಲು ಮಾಡತಕ್ಕದ್ದಲ್ಲ.

(6) ಮೇಲಿನ (3)ನೆಯ ಉಪನಿಯಮದಲ್ಲಿ ವಿಧೇಯಕ ಮಾಡಿರುವಂಥ ಕಾರ್ಯ ವಿಧಾನವನ್ನು ಅಧ್ಯಕ್ಷರು ಅನುಸರಿಸದಿದ್ದಲ್ಲಿ, ಅವರು ತಾವು ತೀರ್ಮಾನಿಸಬಹುದಾದಂಥ ಇತರ ಯಾವುದೇ ವಿಧಾನದಲ್ಲಿ ವಿಷಯದ ಪರವಾಗಿಯೂ ಮತ್ತು ವಿಷಯಕ್ಕೆ ವಿರುದ್ಧವಾಗಿಯೂ ಎಷ್ಟು ಮಂದಿ ಮತವುಳ್ಳವರಾಗಿದ್ದಾರೆಂಬುದನ್ನು ತಿಳಿಯಬೇಕೆಂದು ಆದೇಶಿಸತಕ್ಕದ್ದು.

ಸದಸ್ಯರುಗಳನ್ನು ಸಭೆಯಿಂದ ಹೊರಕ್ಕೆ ಕಳುಹಿಸುವುದು ಮತ್ತು ಕೆಲಕಾಲ ಸಭೆಗೆ ಬರದಂತೆ ಆಜ್ಞೆ ಮಾಡುವುದು.

**347. ಸದಸ್ಯರು ಸಭೆಯಿಂದ ಹೊರಕ್ಕೆ ಹೋಗಬೇಕೆಂದು ಆದೇಶ ಮಾಡುವುದು:** ಅಧ್ಯಕ್ಷರು ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ, ಅಂಥ ಸದಸ್ಯರಿಗೆ ಸದನದಿಂದ

ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುದು ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೇಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರುಹಾಜರಾಗತಕ್ಕದ್ದು.

**348. ಸದಸ್ಯರನ್ನು ಕೆಲಕಾಲ ಸಭೆಗೆ ಬರದಂತೆ ತಡೆ ಹಿಡಿಯುವುದು :** (1) ಅಧ್ಯಕ್ಷರು ತಾವು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ ಯಾವ ಸದಸ್ಯರು ಅಧ್ಯಕ್ಷರ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾರೋ ಅಥವಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುವುದರ ಮೂಲಕ ಸದನದ ನಿಯಮಗಳಿಗೆ ವಿರೋಧವಾಗಿ ವರ್ತಿಸುತ್ತಾರೋ ಆ ಸದಸ್ಯರ ಹೆಸರೆತ್ತಿ ಸದನಕ್ಕೆ ತಿಳಿಸಬಹುದು.

(2) ಆ ರೀತಿ, ಅಧ್ಯಕ್ಷರು ಒಬ್ಬ ಸದಸ್ಯರ ಹೆಸರೆತ್ತಿ ತಿಳಿಸಿದ ಪಕ್ಷದಲ್ಲಿ ಆ ಕೂಡಲೇ ಅವರು ಹೆಸರೆತ್ತಿ ತಿಳಿಸಿದ ಸದಸ್ಯರು ಅಧಿವೇಶನದ ಉಳಿದ ಕಾಲದಲ್ಲಿ (ಅಥವಾ ಅಧ್ಯಕ್ಷರು ನಿರ್ದಿಷ್ಟಗೊಳಿಸಬಹುದಾದಂಥ ಅಧಿವೇಶನದ ಒಂದು ಭಾಗದವರೆಗೆ) ಸದನಕ್ಕೆ ಬರಬಾರದಂತೆ ಪ್ರಸ್ತಾವವನ್ನು ಮಂಡಿಸಬೇಕು.

ಆದರೆ, ಸದನವು ಯಾವ ಕಾಲದಲ್ಲಾದರೂ, ಒಂದು ಪ್ರಸ್ತಾವವನ್ನು ಸೂಚಿಸಿದ ಮೇಲೆ ಅಂಥ ನಿಷೇಧವನ್ನು ಮುಕ್ತಾಯಗೊಳಿಸಬೇಕೆಂದು ನಿರ್ಣಯ ಮಾಡಬಹುದು.

(3) ಈ ನಿಯಮದ ಮೇರೆಗೆ ಸದನಕ್ಕೆ ಬರದಂತೆ ನಿಷೇಧಿಸಲ್ಪಟ್ಟ ಸದಸ್ಯರು, ಆ ಕೂಡಲೇ ಸದನದ ಆವರಣವನ್ನು ಬಿಟ್ಟು ಹೊರಟುಹೋಗತಕ್ಕದ್ದು.

**349. ಸದನವು ಕೆಲಕಾಲ ನಡೆಯದಂತೆ ಮುಂದಕ್ಕೆ ಹಾಕುವುದಕ್ಕೆ ಅಥವಾ ಉಪವೇಶನವು ಕೆಲಕಾಲ ನಡೆಯದಂತೆ ಆದೇಶ ಮಾಡುವುದಕ್ಕೆ ಅಧ್ಯಕ್ಷರ ಅಧಿಕಾರ:** ಸದನದಲ್ಲಿ ಭಾರಿ ಗೊಂದಲವಿದ್ದ ಪಕ್ಷದಲ್ಲಿ ಅಧ್ಯಕ್ಷರು ಸದನವು ಕೆಲಕಾಲ ನಡೆಯದಂತೆ ಮುಂದಕ್ಕೆ ಹಾಕುವುದು ಅಥವಾ ಉಪವೇಶನವು ಕೊಂಚ ಕಾಲ ನಡೆಯದಂತೆ ತಡೆಹಿಡಿಯುವುದು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ, ಆ ರೀತಿ ಸದನವನ್ನು ಮುಂದಕ್ಕೆ ಹಾಕಬಹುದು ಅಥವಾ ಉಪವೇಶನವನ್ನು ಕೆಲಕಾಲ ನಡೆಯದಂತೆ ಮಾಡಬಹುದು.

**350. ಕ್ರಿಯಾಲೋಪಗಳು ಮತ್ತು ಅವುಗಳ ಬಗ್ಗೆ ನಿರ್ಣಯಗಳು:** (1) ಒಂದು ಕ್ರಿಯಾಲೋಪವು ಈ ನಿಯಮಗಳ ಅರ್ಥಾನ್ವಯಕ್ಕೆ ಅಥವಾ ಈ ನಿಯಮಗಳನ್ನು ಜಾರಿಗೆ ತರುವುದಕ್ಕೆ ಇಲ್ಲವೇ ವಿಧಾನಸಭೆಯ ಕಾರ್ಯಕಲಾಪಗಳನ್ನು ಕ್ರಮಪಡಿಸುವುದಕ್ಕಿರುವಂತೆ ಸಂವಿಧಾನದ ಅನುಚ್ಛೇದಗಳ ಅರ್ಥಾನ್ವಯಕ್ಕೆ ಅಥವಾ ಅನುಚ್ಛೇದಗಳನ್ನು ಜಾರಿಗೆ ತರುವುದಕ್ಕೆ ಸಂಬಂಧಪಟ್ಟಿರತಕ್ಕದ್ದು ಮತ್ತು ಅಧ್ಯಕ್ಷರು ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿರುವಂಥ ವಿಷಯವನ್ನು ಸದನದ ಗಮನಕ್ಕೆ ತರತಕ್ಕದ್ದು.

(2) ಸದನದ ಮುಂದೆ ತತ್ಕಾಲದಲ್ಲಿ ಬಂದಿರುವ ಕಾರ್ಯಕಲಾಪದ ಸಂಬಂಧದಲ್ಲಿ ಒಂದು ಕ್ರಿಯಾಲೋಪವನ್ನು ತರಬಹುದು.

ಆದರೆ, ಒಂದು ಕ್ರಿಯಾಲೋಪವು ಸದನದ ಶಿಸ್ತುಪಾಲನೆಯನ್ನು ಮಾಡುವುದಕ್ಕಾಗಲಿ ಅಥವಾ ಸದನದ ಮುಂದೆ ಬಂದಿರುವ ಕಾರ್ಯಕಲಾಪಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಲಿ ಸಂಬಂಧಪಟ್ಟಿದ್ದರೆ ಕಾರ್ಯಕಲಾಪಗಳ ಪೈಕಿ ಒಂದು ಬಾಬು ಮುಗಿದು ಇನ್ನೊಂದು ಬಾಬು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಬರುವ ಮಧ್ಯ ಕಾಲಾವಧಿಯಲ್ಲಿ ಒಬ್ಬರು ಸದಸ್ಯರು ಒಂದು ಕ್ರಿಯಾಲೋಪವನ್ನೆತ್ತುವುದಕ್ಕೆ ಅಧ್ಯಕ್ಷರು ಅನುಮತಿ ಕೊಡಬಹುದು.

(3) ಮೇಲಿನ (1)ನೆಯ ಮತ್ತು (2)ನೆಯ ಉಪನಿಯಮಗಳಲ್ಲಿ ತಿಳಿಸಿರುವಂಥ ಷರತ್ತುಗಳಿಗೊಳಪಟ್ಟು ಒಬ್ಬ ಸದಸ್ಯರು ಒಂದು ಕ್ರಿಯಾಲೋಪವನ್ನು ರಚಿಸಿ ಮಂಡಿಸಬಹುದು. ಹಾಗೆ ಮಂಡಿಸಿರುವುದು ಕ್ರಿಯಾಲೋಪ ಹೌದೇ ಎಂಬುದನ್ನು ಅಧ್ಯಕ್ಷರು ತೀರ್ಮಾನಿಸತಕ್ಕದ್ದು ಮತ್ತು ಅದು ಕ್ರಿಯಾಲೋಪವಾಗಿದ್ದರೆ ಅದರ ವಿಷಯದಲ್ಲಿ ತಮ್ಮ ನಿರ್ಣಯವನ್ನು ಕೊಡತಕ್ಕದ್ದು, ಅಂಥ ನಿರ್ಣಯ ಅಂತಿಮವಾಗಿರತಕ್ಕದ್ದು.

(4) ಕ್ರಿಯಾಲೋಪದ ಮೇಲೆ ಯಾವ ಚರ್ಚೆಗೂ ಅವಕಾಶಕೊಡತಕ್ಕುದಲ್ಲ ಆದರೆ ಅಧ್ಯಕ್ಷರು, ತಮಗೆ ಯುಕ್ತವೆಂದು ಕಂಡುಬಂದರೆ, ತಮ್ಮ ನಿರ್ಣಯವನ್ನು ಕೊಡುವುದಕ್ಕಿಂತ ಮುಂಚಿತವಾಗಿ ಸದಸ್ಯರುಗಳ ಹೇಳಿಕೆಗಳನ್ನು ಕೇಳಬಹುದು.

(5) ಕ್ರಿಯಾಲೋಪವು ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟ ಸೂಚನೆಯಾಗುವುದಿಲ್ಲ.

(6) ಒಬ್ಬ ಸದಸ್ಯರು ಈ ಕೆಳಕಂಡ ವಿಷಯಗಳಿಗೆ ಸಂಬಂಧಪಟ್ಟಂತೆ ಕ್ರಿಯಾಲೋಪವನ್ನು ಎತ್ತಕೂಡದು.

(ಎ) ಮಾಹಿತಿಯನ್ನು ಕೇಳುವುದಕ್ಕಾಗಲಿ, ಅಥವಾ

(ಬಿ) ತಮ್ಮ ಅಭಿಪ್ರಾಯವನ್ನು ವಿವರಿಸುವುದಕ್ಕಾಗಲಿ, ಅಥವಾ

(ಸಿ) ಯಾವ ಪ್ರಸ್ತಾವದ ಮೇಲೆ ಆಗಲಿ ಬಂದಿರುವ ಒಂದು ಪ್ರಶ್ನೆಯು ವಿಧಾನಸಭೆಯ ಮುಂದೆ ಮಂಡಿಸುತ್ತಿರುವಾಗ ಆಗಲಿ, ಅಥವಾ

(ಡಿ) ಕೇವಲ ಊಹೆಗೆ ಸಂಬಂಧಪಟ್ಟಂತೆ ಅಥವಾ

(ಇ) ಮತಗಳ ಎಣಿಕೆಯಾಗುವುದೆಂದು ಸೂಚಿಸುವ ಗಂಟೆಗಳ ಶಬ್ದವಾಗಲಿಲ್ಲವೆಂದು ಅಥವಾ ಆ ಶಬ್ದಗಳು ಕೇಳಿಸಲಿಲ್ಲವೆಂದು ಒಂದು ಕ್ರಿಯಾಲೋಪವನ್ನು ಎತ್ತಕೂಡದು.

**351. ಕ್ರಿಯಾಲೋಪವಲ್ಲದ ಒಂದು ವಿಚಾರವನ್ನೆತ್ತುವುದು :** ಒಂದು ಕ್ರಿಯಾ ಲೋಪವಲ್ಲದಂಥ ಯಾವ ವಿಷಯವನ್ನಾಗಲಿ ವಿಧಾನಸಭೆಯು ಗಮನಕ್ಕೆ ತರಬೇಕೆಂದು ಇಚ್ಛಿಸುವ ಸದಸ್ಯರು ವಿಧಾನಸಭೆಯಲ್ಲಿ ತಾವು ಎತ್ತಬೇಕೆಂದಿರುವ ವಿಷಯವನ್ನು, ಅದನ್ನು ಸೂಚಿಸಬೇಕೆಂದಿರುವ ಕಾರಣಗಳೊಡನೆ ಸಂಕ್ಷೇಪವಾಗಿ ತಿಳಿಸಿ ಲಿಖಿತ ಮೂಲಕವಾಗಿ ಕಾರ್ಯದರ್ಶಿಯವರಿಗೆ "ಸೂಚನಾಪತ್ರ" ವನ್ನು ಕೊಡಬೇಕು ಅಧ್ಯಕ್ಷರು ಅನುಮತಿ ಕೊಟ್ಟಮೇಲೆ ಮಾತ್ರವೇ ಅವರು ಅದನ್ನು ಸೂಚಿಸುವುದಕ್ಕೆ ಅವರಿಗೆ ಅನುಮತಿ ದೊರೆಯಬೇಕು ಮತ್ತು ಅಧ್ಯಕ್ಷರು ಗೊತ್ತುಮಾಡಬಹುದಾದ ಕಾಲದಲ್ಲಿ ಮತ್ತು ಆ ದಿನ ಮಾತ್ರ ಅವರು ಅದನ್ನು ಸೂಚಿಸುವುದಕ್ಕೆ ಅವರಿಗೆ ಅನುಮತಿ ದೊರೆಯಬೇಕು.

*****

## 1. ದಿನಾಂಕ . . . . 20 . . . ರ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ಅಂಕಪಟ್ಟಿ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ವಿದ್ಯಾರ್ಥಿ ಹಾಗೂ ಶಾಲೆಯ ಹೆಸರು ಹಾಗೂ ತರಗತಿ | ಶಿಸ್ತು ಮತ್ತು ಸಭ್ಯತೆ (ಗರಿಷ್ಟ 10 ಅಂಕಗಳು) | ಸಂಸದೀಯ ಕಾರ್ಯ ವಿಧಾನದ ಪಾಲನೆ (ಗರಿಷ್ಟ 20 ಅಂಕಗಳು) | ಪ್ರಶ್ನೆಗಳಿಗಾಗಿ ವಿಷಯಗಳ ಆಯ್ಕೆ ಹಾಗೂ ಅವುಗಳಿಗೆ ನೀಡಿದ ಉತ್ತರಗಳ ಗುಣಮಟ್ಟ (ಗರಿಷ್ಟ 20 ಅಂಕಗಳು) | ಚರ್ಚೆಗಳಿಗೆ ವಿಷಯಗಳ ಆಯ್ಕೆ (ಗರಿಷ್ಟ 10 ಅಂಕಗಳು) | ಮಾಡಿದ ಭಾಷಣದ ಶೈಲಿ ಅಥವಾ ಮೌಲ್ಯ ಚರ್ಚೆಗಳ ಗುಣಮಟ್ಟ (ಗರಿಷ್ಟ 30 ಅಂಕಗಳು) | ಒಟ್ಟಾರೆ ಸಾಧನೆಯ ಸಾಮಾನ್ಯ ಮೌಲ್ಯ ಮಾಪನ (ಗರಿಷ್ಟ 10 ಅಂಕಗಳು) | ಒಟ್ಟು 100 ಅಂಕಗಳು |
|---|---|---|---|---|---|---|---|---|---|
| 1 | | | | | | | | | |
| 2 | | | | | | | | | |

## 2. ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗಳ ವಿವರಗಳು 20 –

| | ಜಿಲ್ಲೆಯ ಹೆಸರು | |
|---|---|---|
| ಕ್ರಮ ಸಂಖ್ಯೆ | ಶಾಲೆಯ ಹೆಸರು | ಭಾಗವಹಿಸಿದ ಸ್ಪರ್ಧಾರ್ಥಿಗಳ ಹೆಸರು |
| 1 | | |
| 2 | | |
| 3 | | |
| 4 | | |
| 5 | | |
| ಶಾಲೆಗಳ ಒಟ್ಟು ಸಂಖ್ಯೆ | | ವಿದ್ಯಾರ್ಥಿಗಳ ಒಟ್ಟು ಸಂಖ್ಯೆ |
| | | |

**3. ಜಿಲ್ಲೆಗಳ ವಿವರ**

| ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನ ಪಡೆದವರ ಸಂಖ್ಯೆ | ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನ ಗಳಿಸಿದ ವಿದ್ಯಾರ್ಥಿಗಳ ಹೆಸರು | ಪಡೆದ ಅಂಕಗಳು | ಶಾಲೆಯ ಹೆಸರು |
|---|---|---|---|
| | | | |
| | | | |
| | | | |
| | | | |
| | | | |

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ**

***ಸಾರ್ವಜನಿಕ ಶಿಕ್ಷಣ ಇಲಾಖೆ***

## "ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ 2012–2013"

**. . . . . . . . . . . . . . . . . . . . . . . . . . ಶಾಲೆಯ . . . . . . . . . . . . . . . . . . . ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ . . . . . . . . . . . . . . . . . . . . . . . ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ 2012–2013ನೇ ಶೈಕ್ಷಣಿಕ ವರ್ಷದಲ್ಲಿ ನಡೆಸಿದ "ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ" ಭಾಗವಹಿಸಿದ್ದಾರೆಂದು ಪ್ರಮಾಣೀಕರಿಸಲಾಗಿದೆ.**

**ಉಪ ನಿರ್ದೇಶಕರು**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಜಿಲ್ಲೆ**

**ಸಕ್ಷಮ ಪ್ರಾಧಿಕಾರಿ**
**ಸಂಸದೀಯ ವ್ಯವಹಾರಗಳು**
**ಮತ್ತು ಶಾಸನ ರಚನೆ ಇಲಾಖೆ**

**ಸ್ಥಳ: . . . . . . . . . . . . . . . .**

**ದಿನಾಂಕ: . . . . . . . . . . . . .**

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ**

***ಸಾರ್ವಜನಿಕ ಶಿಕ್ಷಣ ಇಲಾಖೆ***

**"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ" 2012–2013**

. . . . . . . . . . . . . . . . . . . . . . . . . . . **ಶಾಲೆಯ** . . . . . . . . . . . . . . . . . . . . . **ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ** . . . . . . . . . . . . . . . . . . . . . . . . . **ಅವರಿಗೆ 2012–2013ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಹಭಾಗಿತ್ವದಲ್ಲಿ ನಡೆಸಲಾದ** "ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ"**ಯಲ್ಲಿ ಅತ್ಯುತ್ತಮ ಸಾಧನೆಗೆ** . . . . . . . . . . . . . . . . . . . . **ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.**

**ಉಪ ನಿರ್ದೇಶಕರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಸಕ್ಷಮ ಪ್ರಾಧಿಕಾರಿ**
**ಸಂಸದೀಯ ವ್ಯವಹಾರಗಳು ಮತ್ತು**
**ಶಾಸನ ರಚನೆ**

**ಇಲಾಖೆ**

. . . . . . . . . . . . . . . . **ಜಿಲ್ಲೆ**

**ಸ್ಥಳ:** . . . . . . . . . . . . . . .

**ದಿನಾಂಕ:** . . . . . . . . . . . .

**ಕರ್ನಾಟಕ ಸರ್ಕಾರ**

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ**

**"ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ" 2012–2013**

------------------------ ಈ ಶಾಲೆಯ ---------------------------- ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ ---------------------------------- ಅವರಿಗೆ 2012–2013ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಹಭಾಗಿತ್ವದಲ್ಲಿ ನಡೆಸಲಾದ "**ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ**"ಯಲ್ಲಿ ಅತ್ಯುತ್ತಮ ಸಾಧನೆಗೆ ------------------------------ ಮೆರಿಟ್ ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

**ಸರ್ಕಾರದ ಪ್ರಧಾನ ಕಾರ್ಯದರ್ಶಿ**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

**ಸರ್ಕಾರದ ಕಾರ್ಯದರ್ಶಿ**
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಬೆಂಗಳೂರು

ದಿನಾಂಕ:

**ಕರ್ನಾಟಕ ಸರ್ಕಾರ**

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ**

**"ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ" 2012–2013**

------------------------- ಈ ಶಾಲೆಯ ----------------------------- ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ ------------------------------------ ಶಾಲೆಯು ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ 2012–2013ನೇ ಶೈಕ್ಷಣಿಕ ವರ್ಷದಲ್ಲಿ ನಡೆಸಲಾದ "**ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ**"ಯಲ್ಲಿ ಭಾಗವಹಿಸಿದ್ದಾರೆಂದು ಪ್ರಮಾಣೀಕರಿಸಲಾಗಿದೆ.

ಬೆಂಗಳೂರು

ದಿನಾಂಕ:

**ಸರ್ಕಾರದ ಕಾರ್ಯದರ್ಶಿ**
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು. ಕಾ.ಸೂ. 165 – ಪಿ5

# ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ
# ಹಾಗೂ
# ಸಾರ್ವಜನಿಕ ಶಿಕ್ಷಣ ಇಲಾಖೆ

# ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ
# ಹಾಗೂ
# ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2012–2013

## ಮಾಹಿತಿ ಕೈಪಿಡಿ 2012

**ಸಂವ್ಯಶಾಇ 14 ಸಂವ್ಯವಿ 2012**

## ವಿಷಯಸೂಚಿ


| ಕ್ರಮ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| 1 | ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ – ರಾಜ್ಯ ಸರ್ಕಾರದ ಆದೇಶ | |
| 2 | ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ – ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದ ಪತ್ರ | |
| 3 | ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ | |
| 4 | ಕೇಂದ್ರ ಸರ್ಕಾರದ ಮಾದರಿ ಪ್ರಮಾಣ ಪತ್ರಗಳು (ಅನುಬಂಧ – I & II) | |
| 5 | ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು | |
| 6 | ಮಾದರಿ ಕಾರ್ಯಕ್ರಮಗಳು (ಅನುಬಂಧ–ಎ) | |
| 7 | ಕಡ್ಡಾಯ ಹಾಗೂ ಐಚ್ಛಿಕ ವಿಷಯಗಳ ಪಟ್ಟಿ (ಅನುಬಂಧ–ಬಿ) | |
| 8 | ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗೆ ಹಾಗೂ ಬಹುಮಾನಿತರಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ (ಅನುಬಂಧ – IV, V) | |
| 9 | ಕರ್ನಾಟಕ ರಾಜ್ಯದ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆಗೆ ಪೂರಕವಾಗಿ ಸಂಸತ್ ಕಾರ್ಯಕಲಾಪಗಳ ಬಗೆಗೆ ಕೆಲವು ವಿಶೇಷ ಮಾಹಿತಿಗಳು | |
| 10 | ಕರ್ನಾಟಕ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಮಾದರಿ ಕಾರ್ಯಕಲಾಪಗಳ ಪಟ್ಟಿ (ಅನುಬಂಧ–VI) | |
| 11 | ಮಾದರಿ ಸಂತಾಪ ಸೂಚನೆಗಳು (ಅನುಬಂಧ – VII) | |
| 12 | ಅಧಿವೇಶನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಹಾಗೂ ಉತ್ತರಗಳ ಕೆಲವು ಮಾದರಿಗಳು, ವಿಧಾನಸಭೆ ಮತ್ತು ವಿಧಾನ ಪರಿಷತ್ತು – ಶೂನ್ಯವೇಳೆ ಅನುಬಂಧ – VIII | |
| 13 | ಗಮನ ಸೆಳೆಯುವ ಸೂಚನೆಗಳ ಮಾದರಿಗಳು ಅನುಬಂಧ – IX | |
| 14 | ನಿಯಮ–330ರ ಮೇರೆಗೆ ಚರ್ಚೆ ಅನುಬಂಧ – X | |
| 15 | ಸಾರ್ವಜನಿಕ ಮಹತ್ವದ ಜರೂರು ವಿಷಯದ ಅಲ್ಪ ಕಾಲಾವಧಿ ಚರ್ಚೆಯ ಸೂಚನೆ ಹಾಗೂ ಉತ್ತರದ ಮಾದರಿ ಅನುಬಂಧ – XI | |
| 16 | ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾಪ & ವಿಶೇಷ ಪ್ರಸ್ತಾಪ | |
| 17 | ಶಾಸನ ರಚನೆ – ಮಾದರಿ ವಿಧೇಯಕ XII | |
| 18 | ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ನಿಯಮ 324 ರಿಂದ 351ರ ಉದ್ಧೃತ ಭಾಗ (ಅನುಬಂಧ – XIII) | |
| 19 | ತೀರ್ಪುಗಾರರ ಮಾದರಿ ಅಂಕಪಟ್ಟಿ | |
| 20 | ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿದ ಸ್ಪರ್ಧೆಗಳ ಪಟ್ಟಿ – (ಶಾಲೆಯ ಹೆಸರು, ಸ್ಪರ್ಧಾರ್ಥಿಗಳ ಹೆಸರು) | |

# ಯುವ ಸಂಸತ್ ಸ್ಪರ್ಧೆಗಳನ್ನು ನಡೆಸುವುದಕ್ಕಾಗಿ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ

**ಸಂಸದೀಯ ವ್ಯವಹಾರಗಳ ಮಂತ್ರಾಲಯ**

**ಭಾರತ ಸರ್ಕಾರ**

**2012**

==================================================